SRI H SIDDAVEERAPPA.—I move.

"That the Mythic Society (Dissolution and Management) Bill, 1976 as passed by the Legislative Council be passed.

MADAM SPEAKER.—The question is:

"That the Mythic Society (Dissolution and Management) Bill, 1976 as passed by the Legislative Council, be passed."

The motion was adopted and the Bill was passed.

THE KARNATAKA LAND REFORMS (SECOND AMENDMENT) BILL, 1976.

3-00 P.M.

Motion to Pass

SRI B. SUBBIAH SHETTY.—(Minister of State for Land Reforms) Madam I beg to move:

"That the Karnataka Land Reforms (Second Amendment) Bill, 1976, be taken into consideration."

MADAM SPEAKER —Motion moved.

"That the Karnataka Land Reforms (Second Amendment) Bill, 1976, be taken into consideration."

† SRI B. SUBBIAH SHETTY.—Madam, in the Karnataka Land Reforms Act. there was no specific provision for issuing inter-locutory orders *viz* temporary injunction for the appointment. Because of this lacuna the power which was vested in the Civil Courts, the land-lords took advantage of that and when the applications were pending before the Tribunal for decision some of the land-lords resorted to the Law Courts and tried to move for the injunctions and in some cases for the appointment of receivers. And consequently even in Law Courts it was found that they were always taking into consideration the matters which were being agitated before the Tribunal and invariably it was found that the injunctions were issued in favour of the land-lords and even the Receivers were appointed in that case. Land lords themselves were made as Receivers. To remove this lacuna and give more protection to the tenants it was found necessary that the Tribunals should be given sufficient powers for issuing temporary Injunctions and also for the appointment of Receivers. That is why the powers have been given under the ordinance to the Tribunal. Apart from that though under Sec. 112 it was specifically mentioned

that the Tribunal has got the sole authority to decide whether a person is a tenant or not, even in spite of that Law courts started doing some interpretations. They started saying that tenancy question could be decided by them and also whether a land is agricultural land or not could be decided by them. To clarify that it was found necessary to bring an amendment to Sec 112. And that is how the ordinance was issued. It is only a clarificatory amendment.

Again under Sec. 133, it was still further clarified that in any question *i.e.* either praying for injunctions or Receivership or suit or proceedings when the issue arise regarding the tenancy, or whether the land is agricultural land or not in all such cases, it was not necessary for the Civil Courts to decide but it is only the Tribunal which should decide and there should be no concurrent jurisdiction anywhere. That is why it has been amended, and when such issue arises, the Court should refer such issues to the Tribunal. For that purpose this amendment is brought. On this background this ordinance was issued and to replace it this amendment Bill is introduced in the House. I commend this for the acceptance of the House.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಭೂಸುಧಾರಣಾ ಕಾನೂನಿಗೆ ತಂದಿರತಕ್ಕಂಥ ತಿದ್ದುಪಡಿ ಮಸೂದೆ ಏನಿದೆ ಅದನ್ನು ನಾನು ಸಂಪೂರ್ಣವಾಗಿ ಸ್ವಾಗತಿಸಿ ಮಾತನಾಡುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಸಚಿವರು ಈ ತಿದ್ದುಪಡಿ ಮಸೂದಿಗೆ ಸಂಬಂದಪಟ್ಟಹಾಗೆ ತಮ್ಮ ಪ್ರಸ್ತಾವನಾ ಭಾಷಣದಲ್ಲಿ ಪ್ರಾಮುಖ್ಯವಾದ 2–3 ಅಂಶಗಳನ್ನು ಒಳಗೊಂಡಿರುತ್ತದೆಂದು ಹೇಳಿದರು. ಅದರಲ್ಲಿ 48 (ಸಿ) ಇದು ಬಹಳ ಪ್ರಾಮುಖ್ಯವಾದುದು, ಈ ಕಾನೂನಿನ ಅಡಿಯಲ್ಲಿ ಯಾವುದೇ ಒಬ್ಬ ಗೇಣಿದಾರ ಅರ್ಜಿಗಳನ್ನು ಆಯಾಯಾ ತಾಲ್ಲೂಕಿನಲ್ಲಿರತಕ್ಕಂಥ ಭೂ ನ್ಯಾಯ ಮಂಡಲಿಗಳೇನಿವೆ ಅಲ್ಲಿ ಅರ್ಜಿಗಳನ್ನು ದಾಖಲು ಮಾಡಿ ಅವನಿಗೆ ಇಂಟರ್‌ಲಕ್ಯೂಟರಿ ಆರ್ಡರ್ಸ್ ಏನು ಹೇಳುತ್ತಾರೆಂದು ಭೀತಿ ಇದ್ದೇ ಇದೆ. ಅಥವಾ ಇಂಜಂಕ್ಷನ್ ಆರ್ಡರ್‌ನಿಂದ ಆಗಲೀ ಅಥವಾ ರಿಸೀವರ್‌ಗಳನ್ನು ನೇಮಕ ಮಾಡತಕ್ಕಂಥದ್ದು ಆಗಲೀ ಪರಿಹಾರವನ್ನು ಪಡೆಯಬೇಕು ಎಂದರೆ ಮೊದಲು ನಮಗೆಲ್ಲರಿಗೂ ಗೊತ್ತಿರುವ ಹಾಗೆ ಸಿವಿಲ್ ಕೋರ್ಟ್‌ಗಳು ಇತ್ತು ಎಂದು ಮಾನ್ಯ ಸಚಿವರು ಬಹಳ ಸ್ಪಷ್ಟವಾಗಿ ಹೇಳಿದರು. ಅದು ಸಂಪೂರ್ಣವಾಗಿ ಸತ್ಯ. ಅರ್ಜಿಗಳನ್ನು ಇಂಜೆಂಕ್ಷನ್ ಕೇಳಿ ಗೇಣಿದಾರನೇ ಅರ್ಜಿ ಹಾಕಿರಲಿ ಅಥವಾ ಭೂಮಾಲೀಕರೇ ಆಗಲೀ ಯಾರೇ ಹಾಕಿರಲಿ ನಮಗೆಲ್ಲಾ ಗೊತ್ತಿರುವ ಹಾಗೆ ರಿಸೀವರ್‌ಗಳನ್ನು ನೇಮಕ ಮಾಡಿರತಕ್ಕಂಥ ಪ್ರಕರಣಗಳನ್ನು ಹೆಚ್ಚಾಗಿ ಭೂ ಮಾಲೀಕರೇ ಮಾಡಿರತಕ್ಕಂಥದ್ದು ಎಂದು ನಮಗೆ ಕಂಡು ಬಂದಿದೆ. ಎರಡನೆಯದು, ಇಂಜೆಂಕ್ಷನ್ ಕೂಡ ಗೇಣಿದಾರರ ವಿರುದ್ಧವೇ ಕೊಟ್ಟಿರತಕ್ಕಂಥ ಪ್ರಕರಣಗಳು ಹೆಚ್ಚಾಗಿ ಕಂಡು ಬಂದಿವೆ. ಭೂಸುಧಾರಣೆ ಕಾನೂನಿನ ಉದ್ದೇಶ, ಮೂಲ ಉದ್ದೇಶ ಮಾನ್ಯ ಅಧ್ಯಕ್ಷರಿಗೇ ತಿಳಿದಿರುವಂತೆ ಗೇಣಿದಾರರಿಗೆ ಇರತಕ್ಕಂಥ ಹಕ್ಕನ್ನು ಭೂಸುಧಾರಣಾ ಕಾನೂನಿನ ಚೌಕಟ್ಟಿನಲ್ಲಿ ಬರತಕ್ಕಂಥ ಹಕ್ಕುಗಳನ್ನು ಸಂಪೂರ್ಣವಾಗಿ ಅವನಿಗೆ ದಕ್ಕಿಸಿಕೊಡಬೇಕು ಎನ್ನತಕ್ಕಂಥದ್ದು ಒಂದು ಮತ್ತು ಈ ಕಾನೂನಿನ ಚೌಕಟ್ಟಿನಲ್ಲಿ ಬರತಕ್ಕಂಥ ಏನು ಪರಿಹಾರಗಳು ಅವನಿಗೆ ಲಭ್ಯವಾಗಬೇಕೋ ಆ ಪರಿಹಾರಗಳನ್ನು ಸಂಪೂರ್ಣವಾಗಿ ಅವನಿಗೆ ಲಭ್ಯವಾಗುವ ಹಾಗೆ ಮಾಡಬೇಕು ಎನ್ನತಕ್ಕಂಥದ್ದು ಇವತ್ತು 48 (ಸಿ) ಪ್ರಕಾರ ಅರ್ಜಿಗಳನ್ನು ಏನು ಹಾಕುತ್ತಾನೆ. ಇಂಜೆಂಕ್ಷನ್ ಕೇಳಿ ರಿಸೀವರ್ ಅಪಾಯಿಂಟ್‌ಮೆಂಟ್ ಮಾಡತಕ್ಕಂಥ ಕಾಲದಲ್ಲಿ ಹಿಂದಿನ 48 (ಎ) ಪ್ರಕಾರ ಅರ್ಜಿ ಹಾಕಿರಲಿ ಅಥವಾ ಅರ್ಜಿ ಹಾಕದೇ ಇದ್ದರೂ ಇರಬಹುದೆಂದು ಹಿಂದೆ ಇತ್ತು. ಈ ಕಾನೂನಿನ 48 (ಎ) ಪ್ರಕಾರ ಯಾರು ಗೇಣಿದಾರ ಅವನ ಹಕ್ಕನ್ನು ಕಳೆದುಕೊಳ್ಳತಕ್ಕಂಥ ಸಂಧರ್ಬ ಬಂದು ಭೂಮಿ ಒಡೆತನವನ್ನು ಕಳೆದುಕೊಳ್ಳತಕ್ಕಂಥ ಸಂದರ್ಭದಲ್ಲಿ ಈ ಮಧ್ಯೆ ಅವನಿಗೆ ಭೂಮಿ ಇಂದ ಬರತಕ್ಕಂಥ

ಬೆಳೆ ಅವನು ಪಡೆಯಲಿಕ್ಕೆ ಸಾಧ್ಯವಾಗುತ್ತಾ ಇರಲಿಲ್ಲ. ಆ ಕಾರಣಕ್ಕೋಸ್ಕರ 48 (ಸಿ) ತಂದಿರತಕ್ಕಂಥ ಉದ್ದೇಶ. ಈ ಉದ್ದೇಶದಿಂದ ಸರ್ಕಾರದವರು ಆರ್ಡಿನೆನ್ಸ್ ತಂದಿದ್ದನ್ನು ನೋಡಿ ಸಂತೋಷ ಪಟ್ಟೆ. ಈ ಆರ್ಡಿನೆನ್ಸ್ ತಂದಾಗ ಅವರಲ್ಲೂ ನಮ್ಮ ಮಲೆನಾಡು ಭಾಗಗಳಲ್ಲಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಮತ್ತು ಇನ್ನು ಅನೇಕ ಜಿಲ್ಲೆಗಳಲ್ಲಿ ಎಲ್ಲೆಲ್ಲಿ ಭತ್ತವನ್ನು ಹೆಚ್ಚಾಗಿ ಬೆಳೆಯುತ್ತಾರೋ-ಹಾಗೂ ಭತ್ತವನ್ನು ಬೆಳೆಯುತಕ್ಕಂಥ ಕಾಲದಲ್ಲಿ ಬೇರೆ ಇನ್ನಿತರ ಬೆಳೆಗಳನ್ನು ಕೆಲವರು ಬೆಳೆಯುತ್ತಾರೆ ಆ ರೀತಿ ಬೆಳೆದಂಥವುಗಳನ್ನು ಕಳೆದಸಾರಿ ಗೇಣಿದಾರರು ದಕ್ಕಿಸಿಕೊಳ್ಳುವುದಕ್ಕೆ ಆಗಲಿಲ್ಲ. ನಿಜವಾಗಿಯೂ ಸಾಗುವಳಿ ಮಾಡಿ, ಉತ್ತಿ ಬಿತ್ತಿ ಸಾಗುವಳಿ ಮಾಡಿ ಬೆಳೆ ಇಟ್ಟಿದ್ದಾನೆ. ಪಹಣಿ ಅವನ ಹೆಸರಿನಲ್ಲಿ ಇರಲಿ ಅಥವಾ ಇಲ್ಲದೇ ಇರಲಿ, ಅವನು ಬೆಳೆದಂಥ ಬೆಳೆಯನ್ನು ಅವನು ಪಡೆಯಲಿಕ್ಕೆ ಆಗಲಿಲ್ಲ. ಉದಾಹರಣೆಗೆ ನಮ್ಮ ಮಲೆನಾಡಿನ ಭಾಗದಲ್ಲಿ, ನಮ್ಮ ತಾಲ್ಲೂಕಿನಲ್ಲಿ ಗೇಣಿದಾರ ಬೆಳೆಯನ್ನು ಬೆಳೆದಿರತಕ್ಕಂಥ ವಿಷಯ ನಮಗೆಲ್ಲರಿಗೂ ಗೊತ್ತು, ಪ್ರತಿ ಸಾರಿಯೂ ಅದೇ ರಸ್ತೆಯಲ್ಲಿ ಓಡಾಡುತ್ತಿರುತ್ತೇವೆ, ಭೂಮಿಯನ್ನು ಸಾಗುವಳಿ ಮಾಡಿದಂಥ ವ್ಯಕ್ತಿ ಯಾರು ಎಂದು ಸಹ ನೋಡಿದ್ದೇವೆ. ಯಾರು ಭೂ ಮಾಲೀಕ ಎನ್ನತಕ್ಕಂಥದ್ದೂ ಗೊತ್ತು, ಆ ರೈತ ಭೂಮಿಯಲ್ಲಿ ಉತ್ತು ಬಿತ್ತಿ, ಕೊಯಲಿಗೆ ಬಂದಿರತಕ್ಕಂಥ ಫಸಲನ್ನೂ ಸಹ ಕಣ್ಣಾರ ಕಂಡಿದ್ದೇವೆ. ಆದರೆ ಅದು ಅವನಿಗೆ ದಕ್ಕದೇ ಇರತಕ್ಕಂಥ ಪ್ರಸಂಗಗಳು ನಮ್ಮ ಮುಂದಿವೆ. ಅದಕ್ಕೆ ಕಾರಣ ಕೋರ್ಟಿನಿಂದ ಆರ್ಡರ್ ಬಂದು ಇಂಜೆಂಕ್ಷನ್ ಭೂಮಾಲೀಕರ ಪರವಾಗಿಯೇ ಸಿಕ್ಕಿತ್ತು. ಬೆಳೆಯನ್ನು ಒಬ್ಬ ರೈತ ಕಷ್ಟ ಪಟ್ಟು ಬೆಳೆದು ಅವನಿಗೆ ಅದು ದಕ್ಕದೇ ಇರತಕ್ಕಂಥದ್ದನ್ನು ನಾವು ಕಣ್ಣಾರೆ ಕಂಡಿದ್ದೇವೆ. ಇಂಥ ಅನೇಕ ಪ್ರಕರಣಗಳನ್ನು ನಾವು ಕಣ್ಣಾರೆ ಕಂಡು ಮೂಕರಾಗಿ ಕುಳಿತುಕೊಳ್ಳಬೇಕಾಯಿತು. ಇಂಥ ಸಮಯದಲ್ಲಿ ಸರ್ಕಾರದವರು ಈ ಒಂದು ಕಾನೂನನ್ನು ತಡವಾಗಿ ತಂದಿದ್ದರೂ ಚಿಂತೆಯಿಲ್ಲ ಬಹಳ ಒಳ್ಳೆಯದು. ಸ್ವಾಗತ ಮಾಡತಕ್ಕಂಥ ಕಾನೂನನ್ನು ತಂದಿದ್ದಾರೆ ಎಂದು ನಾನು ಬಹಳ ಸಂತೋಷಪಟ್ಟಿದ್ದೇನೆ.

ಈಗ ಇನ್ನೊಂದು ಅಂಶ ಗಮನಿಸಬಹುದು ಸಿವಿಲ್ ಕೋರ್ಟಿನಲ್ಲಿ ಏನು ದಾಖಲು ಮಾಡಿರುತ್ತಾರೆ ಅದು ಟೈಟಲ್ ನೋಟಿಫೈ ಆಗಿರುವ ಷೀಟ್ ಇರಬಹುದು. ಇನ್‌ಜಿನ್‌ಕ್ಷನ್ ಜೊತೆಗೆ When the land lo d says that he is in possession of the land ಇದನ್ನು ಮಾಡಿದಾಗ ಅವರು ಟೆನೆಂಟ್ ಪ್ಲೀಡ್ ಮಾಡಿದ ಮೇಲೆ ಗೇಣಿದಾರರು ಸಿವಿಲ್ ಕೋರ್ಟಿಗೆ ಹೋಗುವುದು ಇತ್ತು, ಈಗ ತಾವು ಏನು ತಂದಿದ್ದೀರಿ ಅದರಲ್ಲಿ ಸ್ಪಷ್ಟವಾಗಿ ಉಲ್ಲೇಖ ಮಾಡಿದ್ದೀರಿ ಈಗ ೪೮ (ಎ) ಪ್ರಕಾರ ಅರ್ಜಿ ಹಾಕಿದಾಗ ಅದಕ್ಕೆ ಸಂಬಂಧಪಟ್ಟ ಪ್ರಶ್ನೆ ಯಾವುದೇ ಇರಲಿ ಅದನ್ನು ಟ್ರಿಬ್ಯುನಲ್ಸ್‌ಗೆ ಕೊಟ್ಟಿರುವುದು ಒಳ್ಳೆಯದು. ಅಲ್ಲದೆ ಈ ಟ್ರಿಬ್ಯುನಲ್‌ನಲ್ಲಿ ಅಧಿಕಾರ ಏನು ಇದೆ ಇದನ್ನು ಪ್ರಶ್ನೆ ಮಾಡಿರತಕ್ಕ ಪ್ರಸಂಗವನ್ನು ಕಂಡಿದ್ದೇನೆ. ಈಗ ನಮ್ಮ ತಾಲ್ಲೂಕಿನಲ್ಲಿ ಭೂ ಮಾಲೀಕರು ಭತ್ತ ತೆಗೆದುಕೊಂಡು ಹೋದರು, ನಂತರ ಹುಲ್ಲು ಅಲ್ಲಿಯೇ ಹಾಕಿ ಹೋದರು ಹುಲ್ಲು ಉಳುಮೆ ಮಾಡುವುದಕ್ಕೆ ಬೇಕಾಗುತ್ತದೆ ಎಂದು ರೈತರು ತೆಗೆದುಕೊಂಡರು. ಇನ್ನು ನಾನು ಕೆಲವು ಪಹಣಿಗಳನ್ನು ನೋಡಿದ್ದೇನೆ. ಏಕೆಂದರೆ ೧೯೬೨-೬೩, ೧೯೬೩-೬೪, ೧೯೬೪-೬೫ರ ಸಮಯ ಪಹಣಿಗಳು ಚೆನ್ನಾಗಿ ಇವೆ ಸೆಕೆಂಡ್ ಅಕ್ಟೋಬರ್ ೧೯೬೫ರಲ್ಲಿ ಮೊಟ್ಟಮೊದಲನೆಯದಾಗಿ ಭೂ ಸುಧಾರಣೆ ಕಾನೂನು ಬಂತು ನಂತರ ಈ ಪಹಣಿಗಳು ತಮ್ಮಷ್ಟಕ್ಕೆ ತಾವೇ ಬೃಹತ ಪ್ರಮಾಣದಲ್ಲಿ ಬದಲಾವಣೆಯಾಗಿವೆ. ಅವರು ಏನು ಮಾಡುತ್ತಾರೆ? ಸಿವಿಲ್ ಕೋರ್ಟಿನಲ್ಲಿ ಇರತಕ್ಕ ಅಧಿಕಾರ. Who is in possession Prima-face ಅಷ್ಟು ಮಾತ್ರ ನೋಡುವ ಅಧಿಕಾರ ಸಿವಿಲ್ ಕೋರ್ಟಿಗೆ ಇತ್ತು. ಆದರೆ ಈ ನಮ್ಮ ಭೂ ಸುಧಾರಣಾ ಮಂಡಲಿಗೆ ಏನು ಅಧಿಕಾರ ಇದೆ? ಈಗ ಇದರಲ್ಲಿ ಸ್ಪಷ್ಟವಾಗಿದೆ. ಏಕೆಂದರೆ ಗ್ರಾಮ ಲೆಕ್ಕಿಗರ ಕೈಯಲ್ಲಿ ಪಹಣಿ ಇರುತ್ತದೆ. ಮೊನ್ನೆ ಮಾನ್ಯ ಕೋಣಂದೂರು ಲಿಂಗಪ್ಪನವರು ಹೇಳುತ್ತಾ ಕಾಗುಣಿತ ಬರದೇ ಇರತಕ್ಕ ಗ್ರಾಮ ಲೆಕ್ಕಿಗಳು ಇದ್ದಾರೆ ಎಂದು ತಿಳಿಸಿದರು. ಈಗ ನಾವು ಹೋಗಿ ನೋಡಿ ನಾವು ಸ್ಥಳ ಪರಿಶೀಲನೆ ಮಾಡಿ ನ್ಯಾಯ ಸಮ್ಮತವಾದ ತೀರ್ಮಾನ ಕೊಡುವುದಕ್ಕೆ ಸಾಧ್ಯ ಇದೆ ಈಗ ೪೮ (ಸಿ) ಪ್ರಕಾರ ಇಷ್ಟೊಂದು ಅಧಿಕಾರ ಮಂಡಲಿಗೆ ಕೊಟ್ಟಿದೆ, ಇದರಿಂದ ಸದುಪಯೋಗವಾಗಬೇಕು ಎನ್ನುವ ದೃಷ್ಟಿಯಿಂದ ಜವಾಬ್ದಾರಿ ಹೊರಿಸಿ ಶಾಸಕರನ್ನು ಆಯಾಯ ಮಂಡಲಿಗೆ ಇಟ್ಟಿದ್ದೀರಿ. ಕೆಲವು ಪ್ರಕರಣಗಳಲ್ಲಿ ಇನ್‌ಜಿನ್‌ಕ್ಷನ್ ಆರ್ಡರ್ ಕೊಟ್ಟಿದ್ದಾರೆ. ಇನ್‌ಜನ್‌ಕ್ಷನ್ ಆರ್ಡರ್ ಕೊಟ್ಟಿದ್ದು, ಈಗ ಅಲ್ಲಿ ಹೈಕೋರ್ಟಿನಲ್ಲಿ ಅಪೀಲು ಹೋಗಿ ಸ್ಟೇ ತೆಗೆದುಕೊಂಡು ಬಂದಿದ್ದಾರೆ. ಇದು ನಮ್ಮ ತಾಲ್ಲೂಕಿನಲ್ಲೇ ನಡೆದಿದೆ. ಇದು ಕಾನೂನು ವ್ಯಾಪ್ತಿಗೆ ಸಂಬಂಧಪಟ್ಟ ವಿಷಯ, ನಾವು ಕಳೆದ ವರ್ಷ ಜೂನ್, ಜುಲೈ, ಅಧಿವೇಶನ ಎಂದು ಕಾಣುತ್ತದೆ, ಆ ಅಧಿವೇಶನ

ದಲ್ಲಿ ರಾಜ್ಯಾಂಗದ ೯ನೇ ಷೆಡ್ಯೂಲಿಗೆ ಕರ್ನಾಟಕದ ಭೂ ಸುಧಾರಣ ಕಾನೂನನ್ನು ಅಳವಡಿಸಿದ್ದೇವೆ ಈ ಭೂ ಸುಧಾರಣ ಕಾನೂನನ್ನು ತಂದಮೇಲೆ ಇದನ್ನು ಹೈ ಕೋರ್ಟಿನಲ್ಲಿ ಹೇಗೆ ತೆಗೆದುಕೊಳ್ಳುತ್ತಾರೆ ಗೊತ್ತಾಗುವುದಿಲ್ಲ. ಜಮೀನ್ದಾರರು ಎಷ್ಟೆಷ್ಟು ರಿಟ್ ಪಿಟೀಷನ್ ಹಾಕಿದ್ದಾರೆ ಅಷ್ಟು ವಿಲೇವಾರಿಯಾಗುತ್ತವೆ. Now, the High Court has no jurisdiction to entertain such writ petitions. They are bound to dispose of the writ petitions which are pending. They will have to dismiss them ಕೆಲವರು ಆರ್ಟಿಕಲ್ ೨೨೬ ಆಫ್ ದಿ ಕಾನ್‌ಸ್ಟಿಟ್ಯೂಷನ್, ನಾವು ರಿಟ್ ಪಿಟೀಷನ್ ಹಾಕುವ ಅಧಿಕಾರ ಇದೆ ಎಂದು ಹೇಳುತ್ತಾರೆ, ನನಗೆ ಅರ್ಥವಾಗುತ್ತಿಲ್ಲ. ಈಗ ಸ್ಟೇ ಕೊಡತಕ್ಕ ಅಧಿಕಾರ ಹೈಕೋರ್ಟಿಗೆ ಎಲ್ಲಿ ಇದೆ ಎಂದು ಅಧ್ಯಕ್ಷರ ಮುಖಾಂತರ ನಾನುಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ. ಈಗ ೩೧ (ಸಿ) ಪ್ರಕಾರ ಅಧಿಕಾರ ಕೊಟ್ಟು ಹೈಕೋರ್ಟಿನವರು ಸ್ಟೇ ಮಾಡುತ್ತಾ ಹೋದರೆ, ರಿಟ್ ಪಿಟೀಷನ್ ಎಂಟರ್‌ಟೈನ್ ಮಾಡತಕ್ಕ ಅಧಿಕಾರ ಹೈಕೋರ್ಟಿನವರಿಗೆ ಇದೆ ಎಂದು ಹೇಳುವುದಾದರೆ ಈ ಭೂ ಸುಧಾರಣೆ ಕಾನೂನಿನ ಮೂಲ ಉದ್ದೇಶ ಏನು ಇದೆ. ಇದು ಸಂಪೂರ್ಣವಾಗಿ ಡಿಫೀಟ್ ಆಗತಕ್ಕುದ್ದು ನಮ್ಮ ಮುಂದೆ ಕಂಡುಬರುತ್ತದೆ ಈಗ ತಾವು ನ್ಯಾಯ ಇಲಾಖೆಯಲ್ಲಿ ಮಾತನಾಡಿದರು ಸರಿಯೇ, ಒಂದು ಸಾರಿ ಟ್ರಿಬ್ಯುನಲ್ ಅವರು ಮಾಡಿರತಕ್ಕ ಆರ್ಡರ್‌ರನ್ನು ಹೈಕೋರ್ಟಿನವರು ಪ್ರಶ್ನೆ ಮಾಡುವುದಕ್ಕೆ ಬರಬಾರದು. ಇವನ್ನು ೩೧ (ಸಿ) ಪ್ರಕಾರ ಹೇಳುತ್ತಿಲ್ಲ. ೩೧ (ಎ) ಪ್ರಕಾರವು ಕೂಡ ಹೇಳುತ್ತೇನೆ. ಈಗ ಹೈಕೋರ್ಟಿಗೆ ಇರತಕ್ಕ ಅಧಿಕಾರವನ್ನು ತೆಗೆಯಲಿಕ್ಕೆ ಸರ್ಕಾರದವರು ಪ್ರಯತ್ನ ಮಾಡದೇ ಇದ್ದರೆ ಈಗ ಎಷ್ಟೇ ೩೧ (ಎ) (ಸಿ) ತಂದರೂ ಉಪಯೋಗವಿಲ್ಲ. ನೀವು ಎಷ್ಟು ಆರ್ಡರ್‌ಗಳನ್ನು ಮಾಡಿದರೂ ಕೊಚ್ಚಿ ಕೊಂಡು ಹೋಗುತ್ತೇವೆ. ಪ್ರಮಾಣಿಕವಾಗಿ ನಾನು ಈ ವಿಷಯದ ಬಗ್ಗೆ ಹೇಳುತ್ತೇನೆ. ೯ (ಎ) ಷಡ್ಯೂಲನಲ್ಲಿ ಏನು ಬಂದಿದೆ. It can never be questioned because it comes under 9th Schedule of the Constitution of India. ಅದಕೋಸ್ಕರ ಇಷ್ಟು ವಿಷಯವನ್ನು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಮಂತ್ರಿಗಳಿಗೆ ತಿಳಿಸಿ ಈ ಮಸೂದೆಗೆ ಸಂಪೂರ್ಣ ಬೆಂಬಲ ಕೊಟು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಂಗಿಸುತ್ತೇನೆ.

† ಶ್ರೀ ವಿ. ಎಂ. ಘಾಡಿ(ಹಳಿಯಾಳ)·— ಸನ್ಮಾನ್ಯ ಅಧ್ಯಕ್ಷಣಿಯವರೆ, ಸನ್ಮಾನ್ಯ ಮಂತ್ರಿಗಳು ತಂದಿರುವ ತಿದ್ದುಪಡಿಗೆ ಬೆಂಬಲಿಸಿ ಎರಡು ಸಲಹೆಗಳನ್ನು ಕೊಡಲಿಕ್ಕೆ ಇಚ್ಛಿಸುತ್ತೇನೆ. ಮಾನ್ಯಮಂತ್ರಿಗಳು ನಮ್ಮ ಸೂಪಾದಲ್ಲಿ ಬಂದಾಗ ರೈತರು ಏನು ಹೊಗಳಿದ್ದಾರೆ ಅದನ್ನು ಕಣ್ಣಾರೆ ಕಂಡು ಒಂದು ಸ್ಫೂರ್ತಿಯಾಯಿತು. ಆದರೆ ಮೊದಲು ನಮ್ಮ ಸೂಪಾದಲ್ಲಿ ಒಂದು ದೊಡ್ಡ ಕ್ರಾಂತಿಯಾಗುತ್ತದೆ ಎನ್ನುವಂತೆ ಇತ್ತು. ಏಕೆಂದರೆ ಮೊದಲು ಈ ಸಿವಿಲ್ ಕೋರ್ಟಿಗೆ ಏನು ಅಧಿಕಾರ ಇತ್ತು ಆ ಎಲ್ಲಾ ಅಧಿಕಾರವನ್ನು ಸಿವಿಲ್ ಕೋರ್ಟಿನವರು ಉಪಯೋಗಮಾಡಿ ಈ ಗೇಣಿದಾರ ವಿರುದ್ಧ ತೀರ್ಪುಕೊಟ್ಟು ಭೂ ಮಾಲೀಕರಿಗೆ ಅನುಕೂಲವಾಗುವಂತೆ ಮಾಡುತ್ತಿದ್ದರು, ಅದರಿಂದ ಏನಾಗುತ್ತಿತ್ತು ಎಂದರೆ ರೈತರ ಪರಿಸ್ಥಿತಿ ಕಂಗಾಲಾಗುತ್ತಿತ್ತು. ಇಷ್ಟೇ ಅಲ್ಲದೆ ಈ ಇನ್‌ಜೆಂಕ್ಷನ್ ಬಂದನಂತರ ಪೊಲೀಸರು ರೈತರಿಗೆ ಕಿರುಕುಳ ಕೊಡುತ್ತಿದ್ದದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಒಬ್ಬ ರೈತ ಒಂದು ಸಾರಿ ತನ್ನ ಮನೆಯಲ್ಲಿ ಬತ್ತ ಇಟ್ಟಿದ್ದನ್ನು ಪೋಲೀಸಿನವರು ಜಪ್ತಿ ಮಾಡಿ ಸಾಹುಕಾರನಿಗೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದರು. ನಂತರ ನಾನು ಅಲ್ಲಿ ಹೋಗಿ ಪೋಲೀಸಿನವರಿಗೆ ಜಪ್ತಿ ಮಾಡುವುದು ಬೇಡ, ಅದು ರೈತನಿಗೆ ಸೇರಬೇಕು ಎಂದು ತಿಳಿಸಿದ್ದು ಆಯಿತು.

ಇದರಲ್ಲಿರತಕ್ಕಂಥ ಒಂದು ದೋಷ ಏನು ಎಂದರೆ ಟ್ರಿಬ್ಯುನಲ್‌ನಲ್ಲಿ ಇಂಜೆಂಕ್ಷನ್ ಕೊಡುವಂತಹ ಅಧಿಕಾರಿ ಛೇರ್‌ಮನ್‌ರವರಿಗೆ ಮಾತ್ರ ಇದೆ ಛೇರ್ಮನ್‌ರವರು ಇಲ್ಲದೆ ಇದ್ದರೆ ಟ್ರಿಬ್ಯೂನಲ್‌ನಲ್ಲಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಆದುದರಿಂದ ಈ ಆಕ್ಟಿನಲ್ಲಿ, ಛೇರ್ಮನ್‌ರವರು ಇಲ್ಲದ ಸಮಯದಲ್ಲಿ ಬೇರೆ ಯಾವರೂ ಛೇರ್ಮನ್‌ರಾಗಿ ಕೆಲಸ ಮಾಡುವಂತೆ ಅನುಕೂಲ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಉದಾಹರಣೆಗೆ ಟ್ರಿಬ್ಯೂನಲ್ ಮೀಟಿಂಗ್ ಇದ್ದ ದಿವಸ ಮಂತ್ರಿಗಳ ಪ್ರೊಗ್ರಾಂ ಇರುತ್ತದೆ ಮಂತ್ರಿಗಳ ಪ್ರೊಗ್ರಾಂಗೆ ಛೇರ್ಮನ್‌ರವರು ಹೋಗಬೇಕಾಗುತ್ತದೆ ಟ್ರಿಬ್ಯೂನಲ್ ಮೀಟಿಂಗ್ ಇದೆ ಎಂದು ನೂರಾರು ಜನ ರೈತರು ಬಂದಿರುತ್ತಾರೆ, ಅಂಥ ಹೊತ್ತಿನಲ್ಲಿ ಛೇರ್ಮನ್‌ರವರು ಇಲ್ಲದೇ ಹೋದರೆ ಬಹಳ ತೊಂದರೆಯಾಗುತ್ತದೆ. ಆದುದರಿಂದ ಬೇರೆ ಒಬ್ಬ ಸದಸ್ಯರನ್ನು ಛೇರ್ಮನ್ನಾಗಿ ಕೆಲಸ ಮಾಡುವುದಕ್ಕೆ ಈ ಕಾಯಿದೆಯಲ್ಲಿ ತಿದ್ದುಪಡಿ ಮಾಡಬೇಕೆಂದು ಹೇಳುತ್ತೇನೆ. ಮಾನ್ಯ ಬಂಗಾರಪ್ಪನವರು ಹೇಳಿದಹಾಗೆ, ಕೆಲವು ಭೂ ಮಾಲೀಕರು ಹೈಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡು ಬರುತ್ತಾರೆ, ಅದರಿಂದ ಟ್ರಿಬ್ಯೂನಲ್

ಕೆಲಸಮಾಡುವುದಕ್ಕೆ ಕಷ್ಟವಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ಮುಂದಗೋಡು ತಾಲ್ಲೂಕಿನಲ್ಲಿ ಒಬ್ಬ ಸಾಹುಕಾರ, ಸುಮಾರು ೪ ವರ್ಷದಿಂದ ಮಾಡುತ್ತಿದ್ದ ಜಮೀನನ್ನು ಮೋಸಮಾಡಿರುತ್ತಾನೆ. ರೈತನಾದವನು ಭೂಮಿಯನ್ನು ಪಡೆಯಬೇಕೆಂದು ಸರಂಡರ್ ಮಾಡಿದ್ದಲ್ಲಿ, ಇಂದು ಆ ಸಾಹುಕಾರ ಹೈಕೋರ್ಟಿಗೆ ಹೋಗಿ ಸ್ಟೇ ತಂದಿದ್ದಾನೆ. ನಾಳೆ ಆ ರೈತ ಆ ಹೊಲದಲ್ಲಿ ಹೋಗುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆಯೂ ಕೂಡ ಈ ಕಾಯಿದೆಯಲ್ಲಿ ಅನುಕೂಲ ಮಾಡಬೇಕೆಂದು ಹೇಳಿ, ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ವಿ ಕಕ್ಕಿಲಾಯ (ಬಂಟ್ವಾಳ). —ಮಾನ್ಯ ಅಧ್ಯಕ್ಷರೇ, ಭೂ ಸುಧಾರಣಾ ಮಸೂದೆಗೆ ಸಂಬಂಧಪಟ್ಟಂತೆ ಈಗ ಸಚಿವರು ತಂದಿರತಕ್ಕಂಥ ತಿದ್ದುಪಡಿಗಳು ಬಹಳ ಅವಶ್ಯಕವಾದುದು. ಇದರ ಮೊದಲೇ ಇದು ಸುಗ್ರೀವಾಜ್ಞೆ ರೂಪದಲ್ಲಿ ಜಾರಿಗೆ ಬಂದಿರುವುದರಿಂದ, ಕಳೆದ ೨-೩ ತಿಂಗಳಲ್ಲಿ ಯಾವರೀತಿಯಲ್ಲಿ ಅದರ ಪ್ರಯೋಜನವಾಗಿದೆ ಎನ್ನುವಂತ ಅನುಭವ ನೋಡಿ, ಈ ಮಸೂದೆಯನ್ನು ಪರಿಶೀಲನೆ ಮಾಡಬೇಕಾಗಿದೆ. ಮೊದಲನೆಯದಾಗಿ ೪೮ (ಸಿ) ಕಾಲಂನ್ನು ಈ ಮಸೂದೆಯಲ್ಲಿ ಹೊಸದಾಗಿ ಸೇರಿಸಿದ್ದಾರೇ ೪೮ (ಎ) ಪ್ರಕಾರ ಗೇಣಿದಾರ ಟ್ರಿಬ್ಯೂನಲ್ ಮುಂದೆ ಅರ್ಜಿ ಹಾಕಿದ್ದರೆ, ಅಂಥ ಜಮೀನಿನ ಬಗ್ಗೆ ಬೇರೆ ಯಾವುದೇ ಕೋರ್ಟಿನಲ್ಲೂ ಇಂಜಕ್ಷನ್ ಮಾಡುವ ಹಾಗೆ ಇಲ್ಲ ಎನ್ನುವುದನ್ನು ಇದರಲ್ಲಿ ಸೇರಿಸಿ, ಆ ಜಮೀನಿನ ಬಗ್ಗೆ ಅವಶ್ಯಕ ಬಿದ್ದರೆ ತಾತ್ಕಾಲಿಕ ತಡೆಯಾಜ್ಞೆ ಹೊರಡಿಸುವುದಕ್ಕೆ ಟ್ರಿಬ್ಯೂನಲ್‌ಗೆ ಅಧಿಕಾರ ಕೊಟ್ಟಿದ್ದಾರೆ. ನಮ್ಮ ಅನುಭವದಲ್ಲಿ ಕಂಡ ಬರುವುದು ಏನೆಂದರೆ, ಇನ್ನೂ ಕೂಡ ೪೮ (ಎ) ಪ್ರಕಾರ ಅರ್ಜಿ ಹಾಕದೇ ಇರುವಂತಹ ಅನೇಕ ಮಂದಿ ಗೇಣಿದಾರರು ಇದ್ದಾರೆ, ಅರ್ಜಿ ಹಾಕಿಕೊಳ್ಳುವುದಕ್ಕಾಗಿ ೧೯೭೬ನೇ ಇಸವಿ ಜೂನ್ ಕೊನೆತನಕ ಅವಧಿಯನ್ನು ಕೂಡ ವಿಸ್ತರಿಸಿದ್ದಾರೆ. ೪೮ (ಎ) ಪ್ರಕಾರ ಅರ್ಜಿ ಹಾಕದೆ ಇದ್ದರೆ ಇನ್ನು ಮುಂದೆ ಅರ್ಜಿಹಾಕುವುದಕ್ಕೆ ಅವಕಾಶ ಇಲ್ಲ. ಆದುದರಿಂದ ೪೮ (ಸಿ) ಪ್ರಕಾರ ತಾತ್ಕಾಲಿಕವಾಗಿ ರಕ್ಷಣೆ ಕೋರಿ ಟ್ರಿಬ್ಯೂನಲ್‌ಗೆ ಅರ್ಜಿ ಹಾಕುವುದಕ್ಕೆ ಈ ಮಸೂದೆಯಲ್ಲಿ ತಿದ್ದುಪಡಿಮಾಡಬೇಕೆಂದು ನನ್ನ ಒಂದು ಕೇಳಿಕೆ. ಎರಡನೆಯದಾಗಿ ಕಾಲಂ (೩) ಸೆಕ್ಷನ್ ೧೧೨ರ ಪ್ರಕಾರ ತಂದಿರುವಂತ ತಿದ್ದುಪಡಿ, ಇದರಲ್ಲಿ ೪೮ (ಎ) ಪ್ರಕಾರ ಅರ್ಜಿ ಹಾಕಿರುವಂತ ಜಮೀನು, ವ್ಯವಸಾಯ ಜಮೀನು ಹೌದೋ ಅಲ್ಲವೋ ಎಂದು ತೀರ್ಮಾನ ಮಾಡಬೇಕಾಗುತ್ತದೆ, ೧೧೨ (ಬಿ)ನಲ್ಲಿ ತಾವು ಹೇಳಿದ್ದೀರಿ ಇದೂ ಕೂಡ ಸೂಕ್ತವಾಗಿಲ್ಲ, ಇನ್ನೂ ಸ್ವಲ್ಪ ಅದರ ವ್ಯಾಪ್ತಿಯನ್ನು ವಿಸ್ತರಿಸಬೇಕೆಂದು ನನ್ನ ಅಭಿಪ್ರಾಯ. ೪೮ (ಎ) ಪ್ರಕಾರ ಅರ್ಜಿ ಹಾಕದೇ ಇದ್ದರೂ ಕೂಡ, ವ್ಯವಸಾಯ ಜಮೀನು ಹೌದೋ ಅಲ್ಲವೋ ಎಂದು ಹೇಳಲಿಕ್ಕೆ ಆಗುವುದಿಲ್ಲ. ಮುನ್ಸೀಫ್ ಕೋರ್ಟಿನಲ್ಲಾಗಲೀ, ಸಬ್ ಡಿವಿಸನ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಾಗಲೀ ಅಥವಾ ಇನ್ನಾವುದೇ ಕೋರ್ಟಿನಲ್ಲಾಗಲೀ ಗೇಣಿಗೆ ಸಂಬಂಧಪಟ್ಟ ವಿಷಯಗಳು ಅಡಕವಾಗಿವೆ ಎಂದು ಕಂಡುಬಂದರೆ, ಸಂಬಂಧಪಟ್ಟ ಕೋರ್ಟುಗಳು ಸ್ಟೇ ಮಾಡಿ, ಅಂಥ ಕೇಸುಗಳನ್ನು ಟ್ರಿಬ್ಯೂನಲ್‌ಗೆ ಕಳುಹಿಸಬೇಕು. ಸೆಕ್ಷನ್ ೧೩೩ರ ಪ್ರಕಾರ ಇದರ ಅರ್ಥವನ್ನು ಇನ್ನೂ ಸ್ವಲ್ಪ ಸ್ಪಷ್ಟಪಡಿಸುವ ರೀತಿಯಲ್ಲಿ ವಿವರಣೆಗಳನ್ನು ಕೊಡುವ ಹಾಗೆ ತಿದ್ದುಪಡಿ ಮಾಡಬೇಕು. ಅದರ ಬಗ್ಗೆ ನಾನು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ, ಮಾನ್ಯ ಸಚಿವರು ಕೂಡ ಅಧಿಕೃತವಾಗಿ ಅದಕ್ಕೆ ಸೂಚನೆ ಮಾಡಿದ್ದಾರೆಂದು ತಿಳಿದಿದ್ದೇನೆ. ಅದಕೋಸ್ಕರ ನಾನು ಅವರನ್ನು ಅಭಿನಂದಿಸುತ್ತೇನೆ. ಭೂ ಸುಧಾರಣಾ ಶಾಸನವನ್ನು ತಿದ್ದುಪಡಿ ಮಾಡುವಾಗಲೆಲ್ಲಾ ಎಲ್ಲರ ಅಭಿಪ್ರಾಯಗಳನ್ನು ತಿಳಿದುಕೊಂಡು, ಅವರ ಅನುಭವದಿಂದ ಹೇಳುವಂತಾದ್ದನ್ನು ತಿಳಿದುಕೊಂಡು ನಿಮಿಷ ನಿಮಿಷಕ್ಕೆ ಬೇಕಾದರೂ ತಿದ್ದುಪಡಿ ಮಾಡಿ. ಈ ಕಾಯಿದೆಯಿಂದ ಲಕ್ಷಾಂತರ ರೈತರಿಗೆ ಪ್ರಯೋಜನ ಆಗುವ ರೀತಿಯಲ್ಲಿ ಸರ್ಕಾರದವರು ಮಾಡುತ್ತಿದ್ದಾರೆಂದು ಇದರಿಂದ ಸ್ಪಷ್ಟವಾಗುತ್ತದೆ. ಒಂದು ಮಾತನ್ನು ಹೇಳುತ್ತೇನೆ ಟ್ರಿಬ್ಯೂನಲ್‌ಗಳಿಗೆ ಈ ಅಧಿಕಾರವನ್ನು ಕೊಟ್ಟರೆ ಬಹಳ ಅನಾಹುತವಾಗುತ್ತದೆಂದೂ, ಟ್ರಿಬ್ಯೂನಲ್‌ನಲ್ಲಿ ಕಾಯಿದೆ ಗೊತ್ತಿಲ್ಲದೇ ಇರುವಂತವರು ಇದ್ದು ಅವರು ತೀರ್ಮಾನ ಮಾಡತಕ್ಕದ್ದು ಸೂಕ್ತವಲ್ಲವೆಂದೂ ಅನೇಕ ಮಂದಿ ಭೂಮಾಲೀಕರು ಹೈಕೋರ್ಟಿಗೆ ಹೋಗಿದ್ದಾರೆ. ನಾನ್ ಅಫಿಷಿಯಲ್ ಸದಸ್ಯರಿರುವಂತ ಮತ್ತು ರಾಜಕೀಯ ಪಕ್ಷಕ್ಕೆ ಸೇರಿರತಕ್ಕಂಥ ಸದಸ್ಯರುಗಳನ್ನೊಳಗೊಂಡಂತ ನ್ಯಾಯಮಂಡಲಿಗಳನ್ನು ರಚನೆ ಮಾಡಿರುವುದರ ಬಗ್ಗೆ ಹೈಕೋರ್ಟಿನವರು ಕೂಡ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

3-30 P.M.

ಈ ಚರ್ಚೆ ಬಹುಶಃ ಇಲ್ಲಿಗೆ ಮುಕ್ತಾಯವಾಗುತ್ತದೆ ಎಂದು ನಾನು ನಂಬುತ್ತೇನೆ. 196 ನೇ ಇಸವಿಯಿಂದ ಇತ್ತೀಚಿನವರೆಗೂ ಭೂಸುಧಾರಣೆ ಶಾಸನ ಜಾರಿಗೆ ಬರಲಿಕ್ಕೆ ಸಣ್ಣ ಸಣ್ಣ ವಿಷಯಗಳನ್ನು ಹಿಡಿದುಕೊಂಡು ನಮ್ಮ ಭೂಮಾಲಿಕರು ತಡೆ ಮಾಡುತ್ತಾ ಬಂದಿದ್ದಾರೆ. ಇದರ ಪರಿಣಾಮವಾಗಿ ಕೊನೆಗೆ ಏನಾಗುತ್ತದೆಂದರೆ ಅವರು ಎಷ್ಟು ತಡ ಮಾಡಿದರೂ ಅಷ್ಟೇ ಅವರಿಗೆ ವಿರೋಧವಾಗುತ್ತದೆ. ಗೇಣಿದಾರರು ನಿರ್ಗತಿಕರಾಗಿ ಹೋಗುತ್ತಾರೆ. ಕೆಲವಾರು ವರ್ಷಗಳ ಹಿಂದೆಯೇ ಇದನ್ನು ಒಪ್ಪಿಕೊಂಡು ಬಂದಿದ್ದಾರೆ ಇದಕ್ಕಿಂತ ಹೆಚ್ಚಿನ ಲಾಭವನ್ನು ಅವರು ಪಡೆಯಲಿಕ್ಕೆ ಸಾಧ್ಯವಾಗುತ್ತಿತ್ತು. ಸರ್ಕಾರದ ಪಾಲಿಸಿ ಏನು ಇದೆ ಅದನ್ನು ಅವರು ತಿಳಿದುಕೊಂಡು ಹೆಜ್ಜೆ ಹೆಜ್ಜೆಗೆ ತಡೆ ಮಾಡುವುದನ್ನು ಕೈ ಬಿಟ್ಟರೆ ಅವರಿಗೂ ಕೂಡ ಕ್ಷೇಮ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ ಇನ್ನೊಂದು ಮುಖ್ಯ ಅಂಶವೇನೆಂದರೆ ಆರ್ಡಿನೆನ್ಸ್ ಬಂದಮೇಲೆ ಟ್ರಿಬ್ಯುನಲ್ ಮುಂದೆ ಇಂಜಕ್ಷನ್ ಮತ್ತು ದಾವೆಗಳ ಅರ್ಜಿಗಳು ಬಂದಿವೆ. ಟ್ರಿಬ್ಯುನಲ್ ಕೆಲವು ಇಂಜಕ್ಷನ್‌ಗಳನ್ನು ಕೊಟ್ಟಿದೆ. ಆದರೆ ಕೆಲವು ಕಡೆಗಳಲ್ಲಿ ನಮ್ಮ ಬಂಟವಾಳ ತಾಲ್ಲೂಕಿನಲ್ಲಿ ಸಂಭವಿಸಿದ ಎರಡು ವಾದವಿವಾದಗಳನ್ನು ಮಾನ್ಯ ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ ಟ್ರಿಬ್ಯುನಲ್ ವಿಚಾರಣೆ ನಡೆಸಿ ತನಿಖೆ ಮಾಡಿ ಗೇಣಿದಾರರ ವಶದಲ್ಲಿದ್ದ ಜಮೀನಿನ ಮೇಲೆ ಭೂಮಾಲಿಕರು ಪ್ರವೇಶ ಮಾಡಬಾರದು ಎಂದು ತಡೆ ಆಜ್ಞೆ ಕೊಟ್ಟು ಇಂಥ ಸಂದರ್ಭದಲ್ಲಿಯೋ ಪೋಲೀಸ್ ಅಧಿಕಾರಿಗಳು ಭೂಮಾಲಿಕರ ಜೊತೆಯಲ್ಲಿ ಶಾಮೀಲಾಗಿ ಬೆಳೆಯನ್ನು ಕೊಯಿಸಿ ಭೂಮಾಲಿಕರಿಗೆ ಕೊಟ್ಟಂಥ ಒಂದೆರಡು ಕೇಸುಗಳು ನಮ್ಮ ತಾಲ್ಲೂಕಿನಲ್ಲಿ ಆಗಿವೆ. ಇಂಥ ವಿಚಾರಗಳು ಬಂದಾಗ ಸರ್ಕಾರದವರು ಇಂಥ ಅಧಿಕಾರಿಗಳ ಮೇಲೆ ನಿರ್ದಾಕ್ಷಿಣ್ಯವಾಗಿ ತೀವ್ರವಾದಂಥ ಕ್ರಮವನ್ನು ತೆಗೆದುಕೊಳ್ಳಬೇಕು ಸರ್ಕಾರದ ಧೋರಣೆಯನ್ನು ಜಾರಿಗೆ ತರುವುದಕ್ಕೆ ಸಹಾಯವಾಗುವಂತ ಅಧಿಕಾರಿಗಳಲ್ಲ ಅವರು ಸರ್ಕಾರದ ಉದ್ದೇಶ ಏನು ಇದೆ ಅದನ್ನು ಇವರು ಬುಡಮೇಲು ಮಾಡುವಂಥ ಅಧಿಕಾರಿಗಳು. ಇವರು ಸರ್ಕಾರದ ಕಾರ್ಯಕ್ರಮವನ್ನು ಜಾರಿಗೆ ತರುವುದಕ್ಕೆ ಹೆಜ್ಜೆ ಹೆಜ್ಜೆಗೂ ತಡೆ ಮಾಡುತ್ತಿದ್ದಾರೆ. ಇದನ್ನು ತನಿಖೆ ಮಾಡಿ ಇವರ ಮೇಲೆ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಮಾನ್ಯ ಸಚಿವರು ಇದರ ಬಗ್ಗೆ ವಿವರವಾದ ತಿದ್ದುಪಡಿಯನ್ನು ತಂದಿರುವುದರಿಂದ ಹೆಚ್ಚು ಹೇಳುವುದಿಲ್ಲ ಈ ತಿದ್ದುಪಡಿಯನ್ನು ತಂದಿದ್ದಕ್ಕಾಗಿ ಸರ್ಕಾರವನ್ನು ಅಭಿನಂದಿಸಿ ನನ್ನ ಪೂರ್ಣ ಬೆಂಬಲವನ್ನು ಈ ತಿದ್ದುಪಡಿಗೆ ವ್ಯಕ್ತಪಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.— ಈಗ ಸಭೆ ಉಪಹಾರಕ್ಕೋಸ್ಕರ ಎದ್ದು ಮತ್ತೆ ಅರ್ಧ ಗಂಟೆಯ ನಂತರ ಸೇರುತ್ತದೆ.

The House adjourned at Thirty three Minutes past Three of the Clock and reassembled at Eight Minutes past four of the Clock.

(MR. DEPUTY SPEAKER in the chair)

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್. (ಹೊಸನಗರ) ಸನ್ಮಾನ್ಯ ಸಭಾಧ್ಯಕ್ಷರೇ ಭೂಸುಧಾರಣಾ ಕಾನೂನಿನಲ್ಲಿ ಅಗತ್ಯವಾಗಿ ಬರಬೇಕಾದಂಥಾ ಕೆಲವು ತಿದ್ದುಪಾಟುಗಳು ಈವೊತ್ತು ನಮ್ಮ ಮುಂದೆ ಬಂದಿವೆ ಇದಕ್ಕೆ ಹೃತ್ಪೂರ್ವಕವಾಗಿ ಸ್ವಾಗತ ಬಯಸುತ್ತೇನೆ. ಈ ತಿದ್ದುಪಾಟಗಳು ಬಾರದೇ ಇದ್ದಲ್ಲಿ ಪ್ರತಿದಿವಸ ಈ ನ್ಯಾಯ ಮಂಡಲಿಗಳು ಎಷ್ಟೋ ಕಷ್ಟಕ್ಕೆ ಸಿಲುಕುತ್ತಿದ್ದುವು ಹೈಕೋರ್ಟ್‌ನಿಂದ ಸಿವಿಲ್ ಕೋರ್ಟಿನಿಂದ ಎಷ್ಟೋ ಸ್ಟೇ ಆರ್ಡರ್‌ಗಳು ಬರುತ್ತಿದ್ದವು ಇದರಿಂದಯಾವುದನ್ನು ಕೂಡ ಕಾರ್ಯಗತ ಮಾಡುವ ಸ್ಥಿತಿಯಲ್ಲಿ ಇರುತ್ತಿರಲಿಲ್ಲ ಈ ರೀತಿ ಎಷ್ಟೋ ಕಷ್ಟಗಳು ಬರುತ್ತಿದ್ದುವು. ಇದನ್ನು ಕಂಡುಕೊಂಡು ನಮ್ಮ ಗೆಳೆಯರಾದ ಶ್ರೀಮಾನ್ ಪಿ. ಸಿ. ಶೆಟ್ಟರು ಕಾಂಗ್ರೆಸ್ ಪಕ್ಷದ ಸಭೆಯಲ್ಲೂ ಕೂಡ ಈ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆದುದರಿಂದ ಈ ಒಂದು ತಿದ್ದುಪಾಟು ಬರುವುದಕ್ಕೆ ಅವರೇ ಕಾರಣೀಭೂತರು ಎಂದು ಹೇಳಿದರೆ ತಪ್ಪಾಗಲಾರದು ಮತ್ತು ಅದಕ್ಕಾಗಿ ಅವರನ್ನು ನಾನು ಅಭಿನಂದಿಸುತ್ತೇನೆ.

ಇನ್ನು ಕೆಲವಾರು ತಿದ್ದುಪಡಿಗಳು ಬರುವುದರಲ್ಲಿ ಇವೆ. ಅವುಗಳು ಬಂದನಂತರ ಒಂದು ವ್ಯಾಪಕವಾದ ತೀರ್ಪು ಕೊಡಲಿಕ್ಕೆ ನ್ಯಾಯ ಮಂಡಲಿಗಳಿಗೂ ಅನುಕೂಲವಾಗುತ್ತದೆಯೆನ್ನುವ ಭಾವನೆ ನನಗೆ ಇದೆ.

ಇದರಲ್ಲಿ ಅಗತ್ಯವಾಗಿ ನಾವು ಯೋಚನೆ ಮಾಡಬೇಕಾದಂತಹ ಅಂಶವೆಂದರೆ ಅನೇಕ ಜನ ಗೇಣಿದಾರರು ಇನ್ನೂ ಅಪ್ಲಿಕೇಷನ್ ಹಾಕಿಲ್ಲ ಅಂತಹವರು ಸೆಕ್ಷನ್ 48ರ ಪ್ರಕಾರ ಅರ್ಜಿಸಲ್ಲಿಸಿದಾಗ ಅವರೂ ಕೂಡ ಇಂಜಕ್ಷನ್ ಆರ್ಡರ್ ತೆಗೆದುಕೊಳ್ಳುವುದಕ್ಕೆ ಅಧಿಕಾರ ಇರಬೇಕು ಎಂಬುದೇ ಇಲ್ಲಿರತಕ್ಕಂಥ ಮುಖ್ಯವಾದ ಪ್ರಶ್ನೆ. ಈಗ ಹೊಸದಾಗಿ ಯಾರಾದರು ಅಪ್ಲಿಕೇಷನ್ ಕೊಟ್ಟರೆ ಟ್ರಿಬ್ಯೂನಲ್‌ನಲ್ಲಿ ಮೊದಲು ಪ್ರಶ್ನೆ ಕೇಳುವುದು ಏನೆಂದರೆ ನೀನು ಈ ಮೊದಲು ಹಾಕಿದ್ದೀಯ ಎಂದು ಅತ ಮೊದಲು ಹಾಕದಿದ್ದರೆ ಮತ್ತು ಅದೇ ಒಂದು ಅಪರಾಧವಾದರೆ ನಾವು ಅಂತಹವರಿಗೆ ನ್ಯಾಯ ದೊರಕಿಸಿಕೊಡುವುದು ಕಷ್ಟವಾಗುತ್ತದೆ ಇವೊತ್ತು ನಮ್ಮ ಗೇಣಿದಾರ ವರ್ಗದವರೇನಿದ್ದಾರೆ ಅವರು ಅಷ್ಟೊಂದು ಜ್ಞಾನವಂತರಲ್ಲ ಅಷ್ಟೊಂದು ಪರಿಜ್ಞಾನ ಉಳ್ಳವರಲ್ಲ ಆರ್ಥಿಕ ದೃಷ್ಟಿಯಿಂದ ಸಾಮಾಜಿಕ ದೃಷ್ಟಿಯಿಂದ ಅವರುಗಳು ಅವಿದ್ಯಾವಂತರಾಗಿರುವ ಕಾರಣ ಅವರುಗಳು ತಾವಾಗಿಯೇ ಕಾನೂನನ್ನು ತಿಳಿದುಕೊಂಡು ಅದರಂತೆ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದೇ ಕಾರಣವನ್ನು ಮುಂದೆ ಇಟ್ಟುಕೊಂಡು ಹಿಂದೆ ಅಪ್ಲಿಕೇಷನ್ ಕೊಟ್ಟಿದ್ದರೆ ಇಂಜಂಕ್ಷನ್ ಆರ್ಡರ್ ಕೊಡುತ್ತೇವೆ ಇಲ್ಲದಿದ್ದರೆ ಕೊಡುವುದಿಲ್ಲವೆಂದರೆ ಗೇಣಿದಾರರಿಗೆ ಬಹಳ ಕಷ್ಟವಾಗುತ್ತದೆ ಈಗ ನಮಗೆ ಕೊಟ್ಟಿರುವ ಅಸ್ತ್ರವನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕಾಗುತ್ತದೆ ಆ ಒಂದು ಅಸ್ತ್ರದಿಂದ ಹಣ್ಣನ್ನು ಬೇಕಾದರೆ ಕತ್ತರಿಸಬಹುದು ಇಲ್ಲವೆ ತಲೆಯನ್ನು ಬೇಕಾದರೆ ಕಡಿಯಬಹುದು ಅದರ ತರ ಕಡಿಯುವ ಕೆಲಸವನ್ನು ಯಾರು ಮಾಡುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಅದರೆ ಟ್ರಿಬ್ಯೂನಲ್‌ನಲ್ಲಿ ಕೆಲಸ ಮಾಡುವ ನಾವು ಇಂದು ಇಂಜಕ್ಷನ್ ಆರ್ಡರ್ ಕೊಡುತ್ತೇವೆಂದು ಇಟ್ಟುಕೊಳ್ಳಿ ಅದು ಜಾರಿಯಾಗುವ ರೀತಿಯಲ್ಲಿ ನ್ಯೂನತೆ ಇದೆ ನನ್ನ ಅನುಭವಕ್ಕೆ ಬಂದಿದ್ದನ್ನು ಹೇಳಬೇಕೆಂದರೆ ಈ ಶಾಸನಸಭೆ ಸೇರುವುದಕ್ಕೆ ಮೊದಲು ನಮ್ಮ ಭೂನ್ಯಾಯಮಂಡಲಿ ಮೂಲಕ ನಾವು ಒಂದು ಇಂಜಕ್ಷನ್ ಆರ್ಡರ್ ಕೊಟ್ಟೆವು. ನಂತರ ಅದು ರೆವಿನ್ಯೂ ಅಧಿಕಾರಿಗಳ ಮೂಲಕ ವಿಲೇಜ್ ಇಲ್ಲವೇ ಅಕೌಂಟೆಂಟ್ ಮೂಲಕಜಾರಿಯಾಗಬೇಕು. ಆದರೆ ಜಾರಿ ಮಾಡುವವರು ಏನು ಮಾಡುತ್ತಾರೆ ಬೆಳೆಯನ್ನು ಕಟಾವ್ ಮಾಡಿ ತೆಗೆದುಕೊಂಡು ಹೋದಮೇಲೆ ಅದನ್ನು ಜಾರಿ ಮಾಡುತ್ತಾರೆ ಇದರಿಂದ ಏನಾಗುತ್ತಿದೆ ಎಂದರೆ ನಾವು ಯಾವ ಕಾರಣದಿಂದ ಈ ಶಾಸನವನ್ನು ಮಾಡಿದ್ದೇವೋ ಈ ಶಾಸನದ ಪ್ರತಿಫಲ ಯಾರಿಗೆ ಸಿಗಬೇಕೆಂದು ನಾವು ಕಾನೂನು ಮಾಡಿದ್ದೇವೋ ಅದರಂತೆ ಅವರಿಗೆ ಸಿಗುವುದಿಲ್ಲ. ಗೇಣಿದಾರರಿಗೆ ಇದರ ಒಂದು ಪ್ರತಿಫಲ ಏತಕ್ಕೆ ಸಿಗುವುದಿಲ್ಲವೆಂದರೆ ನಾವು ಮಾಡುವಂತಹ ಕಾನೂನನ್ನು ಜಾರಿಗೆ ಕೊಡುವಂತಹ ನೌಕರರು ಏನಿದ್ದಾರೆ ಅವರುಗಳು ಆಯಾ ಸ್ಥಳದ ಭೂಮಾಲೀಕರ ಪ್ರಭಾವಕ್ಕೆ ಒಳಗಾಗಿರುತ್ತಾರೆ. ಇದರಿಂದ ಅವರು ಬಡಗೇಣಿದಾರರ ಪರವಾಗಿ ಕೆಲಸ ಮಾಡುವುದು ಕಷ್ಟವಾಗುತ್ತದೆ, ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳಬೇಕೆಂದರೆ ಈ ಬಡಗೇಣಿದಾರರಿಗೆ ರಕ್ಷಣೆ ಕೊಡುವ ಒಂದು ಜವಾಬ್ದಾರಿ ಪೋಲೀಸರ ಮೇಲೆ ಇದೆ ನಾವು ಇಂಜಕ್ಷನ್ ಆರ್ಡರ್ ಜಾರಿ ಮಾಡಿದಮೇಲೆ ಅದನ್ನು ಸರಿಯಾದ ರೀತಿಯಲ್ಲಿ ಜಾರಿ ಮಾಡುವುದು ಮತ್ತು ಸಂಬಂಧಪಟ್ಟವರಿಗೆ ರಕ್ಷಣೆ ಕೊಡುವುದು ಅವರ ಕರ್ತವ್ಯವಾಗಿರುತ್ತದೆ. ಆದರೆ ಆ ರೀತಿ ಅಗುತ್ತಿಲ್ಲ. ಅದಕಾರಣ ಅವರಿಗೆ ಸೂಕ್ತ ತಿಳುವಳಿಕೆಯನ್ನು ಸರ್ಕಾರದವರು ಕೊಡಬೇಕೆಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಸೆಕ್ಷನ್ 112ರಲ್ಲಿ ತಂದಿರತಕ್ಕಂಥ ತಿದ್ದುಪಡಿ ಏನಿದೆ ಅದು ಬಹಳ ಅತ್ಯಗತ್ಯವಾದುದು ಅದು ಯಾವ ರೀತಿ ಅಗತ್ಯವಾಗಿತ್ತು ಎಂದರೆ ಇಲ್ಲಿಯವರೆಗೆ ಒಂದು ಭೂಮಿ ವ್ಯವಸಾಯ ಪ್ರಧಾನವಾದ ಭೂಮಿ ಹೌದೋ ಅಲ್ಲವೋ ಅದು ಗಂಡೋ ಅಥವಾ ಹೆಣ್ಣೋ ಎಂದು ತೀರ್ಮಾನ ಮಾಡುವ ಬಗ್ಗೆ ಸಿವಿಲ್ ಕೋರ್ಟುಗಳಲ್ಲಿ ಸುಮ್ಮನೆ ಕಾಲವಿಳಂಬವಾಗುತ್ತಿದ್ದ ಕಾರಣ ಅದನ್ನು ಹತ್ತಿಕ್ಕಿ ಈಗ ಆ ಒಂದು ಅಧಿಕಾರವನ್ನು ಭೂನ್ಯಾಯಮಂಡಲಿಗಳಿಗೆ ಕೊಟ್ಟಿರುವುದಕ್ಕಾಗಿ ನಾನು ಮಾನ್ಯ ಕಂದಾಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಈ ರೀತಿ ಸಿವಿಲ್ ಕೋರ್ಟುಗಳಿಗಿದ್ದ ಅಧಿಕಾರವನ್ನು ತಪ್ಪಿಸಲೂ ಕೂಡ ನಾವು ಕೆಲವು ಸಲ ಕೊಟ್ಟಂತಹ ಇಂಜಂಕ್ಷನ್ ಆರ್ಡರ್ ಮೇಲೆ ಸಂಬಂಧಪಟ್ಟವರು ಸೀದಾ ಹೈಕೋರ್ಟಿಗೆ ಹೋಗಿ ಸ್ಟೇ ತರುತ್ತಾರೆ. ಯಾವ ಬಲಾಢ್ಯರು ಇದ್ದಾರೋ ಯಾರು ಶಕಿ

ವಂತರು ಇದ್ದಾರೊ ಅಂತಹವರು ಎರಡು ದಿವಸಗಳಲ್ಲಿಯೇ ಹೈಕೋರ್ಟಿನಿಂದ ಸ್ಟೇ ತೆಗೆದುಕೊಂಡು ಬರುತ್ತಾರೆ. ಇದಕ್ಕೆ ಯಾವ ಔಷಧ ಕೂಡ ಇಲ್ಲ ಇದನ್ನು ಯಾವ ರೀತಿ ಹೋಗಲಾಡಿಸಬೇಕೆಂಬ ಬಗ್ಗೆ ನಮ್ಮ ಮಾನ್ಯ ಪಿ. ಸಿ. ಸೆಟ್ಟರು ಯೋಚನೆ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಇದು ಪಾಸಿಯಾಗದಂಥ ಕಾಯಿಲೆಯಾಗಿದೆ ಏಕೆಂದರೆ ಮಾತ್ತೆತ್ತಿದರೆ ಹೈಕೋರ್ಟಿಗೆ ಹೋಗಿ ರಿಟ್ ಫೈಲ್ ಮಾಡಿ ಸ್ಟೇ ತರುತ್ತಾರೆ ನಾವು ಯಾವ ಒಂದು ಉದ್ದೇಶವನ್ನು ಇಟ್ಟುಕೊಂಡು ತೀರ್ಮಾನ ಕೊಟ್ಟಿರುತ್ತೇವೋ ಅದಕ್ಕೆ ತದ್ವಿರುದ್ಧವಾಗಿ ಸ್ಟೇ ತೆಗೆದುಕೊಂಡು ಬರುತ್ತಿದ್ದಾರೆ. ಆಗ ಸಂಬಂಧಪಟ್ಟ ಅಧಿಕಾರಿಗಳು ಗೇಣಿದಾರರಿಗೆ ರಕ್ಷಣೆ ಕೊಡಲು ಸಾಧ್ಯವಿಲ್ಲ. ಹೈಕೋರ್ಟಿನ ಆಜ್ಞೆ ಇದೆ ಎಂದು ಅದನ್ನು ಎತ್ತಿ ಹಿಡಿಯುತ್ತಾರೆ ಆಗ ನಾವುಕೂಡ ಆದರ ಮೇಲೆ ಏನೂ ಮಾಡುವುದಕ್ಕಾಗುವುದಿಲ್ಲ ಈ ಒಂದು ದ್ವಂದ್ವನೀತಿಯನ್ನು ಪರಿಹರಿಸದೇ ಹೋದರೆ ಈ ಶಾಸನದಿಂದ ಯಾರಿಗೆ ನ್ಯಾಯ ದೊರಕಬೇಕು ಅವರಿಗೆ ದೊರಕಿಸಿಕೊಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳುತ್ತೇನೆ. ಈಗ ಎಲ್ಲವೂ ಕಾನೂನುಬದ್ಧವಾಗಿಯೇ ನಡೆಯುತ್ತಿದೆ ಎಂದು ನಾನು ಹೇಳುವುದಿಲ್ಲ. ತಪ್ಪುಗಳು ಆಗುವುದು ಸಹಜ ಎಲ್ಲಿಯಾದರು ತಪ್ಪಾಗಿ ನಡೆದ ನ್ಯಾಯಮಂಡಲಿಗಳು ಇದ್ದರೆ ಅದನ್ನು ಕೂಡಲೇ ಬದಲಾವಣೆ ಮಾಡತಕ್ಕಂಥ ಅಧಿಕಾರ ಸರ್ಕಾರಕ್ಕೆ ಇದೆ ಎಂಬುದಾಗಿ ಮಾನ್ಯ ಕಂದಾಯ ಮಂತ್ರಿ ಹೇಳಿದ್ದಾರೆ ಮತ್ತು ಆದರಂತೆ ಮಾಡುತ್ತೇವೆಂದು ಹೇಳಿದ್ದಾರೆ ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ ತಪ್ಪು ಯಾರು ಮಾಡಿದರೂ ಶಿಕ್ಷೆಗೆ ಅರ್ಹರೇ ಮುಖ್ಯವಾಗಿ ಈ ಭೂಸುಧಾರಣಾ ಕಾನೂನೇ ಆಗಲೀ ಮತ್ತೆ ಯಾವ ಕಾನೂನೇ ಆಗಲೀ ಅದು ಸ್ಟ್ಯಾಟಿಕ್ ಆಗಬಾರದು ಆಯಾ ಸಂದರ್ಭಗಳಿಗೆ ಅನುಸಾರವಾಗಿ ಏನಾದರು ಸಮಸ್ಯೆಗಳು ಬಂದಾಗ ಅದರಂತೆ ಬದಲಾವಣೆ ಮಾಡತಕ್ಕಂಥ ವ್ಯವಸ್ಥೆ ಇರಲೇ ಬೇಕಾಗುತ್ತದೆ ಆದಕಾರಣ ಈಗಮಾಡಿರುವ ಶಾಸನವೆ ಅಂತಿಮತೀರ್ಮಾನದ ಎಂದು ಹೇಳುವುದಕ್ಕೆ ಬರುವುಲ್ಲ ಅದು ಸಾಧ್ಯವೂ ಇಲ್ಲ ಈಗ ಉದಾಹರಣೆಗೆ ಹೇಳಬೇಕೆಂದರೆ ಈ ಭೂಸುಧಾರಣಾ ಶಾಸನಕ್ಕೆ ಮುಖ್ಯವಾಗಿ ತರಬೇಕಾದಂಥ ಒಂದು ತಿದ್ದುಪಡಿ ಏನೆಂದರೆ ಈಗಿನ ಇನಾಂ ಕೇಸ್‌ಗಳನ್ನು ಬಹುತೇಕವಾಗಿ ಭೂನ್ಯಾಯಮಂಡಲಿಗಳ ಹೊರಗೆ ಇಟ್ಟಿದ್ದಾರೆ ಇದರಿಂದ ಆಗುತ್ತಿರುವಂತಹ ಅನ್ಯಾಯಗಳು ಅಷ್ಟಿಷ್ಟಲ್ಲ ಇನಾಂ ವಿಚಾರ ಬಂತು ಮುಜರಾಯಿ ವಿಚಾರ ಬಂತು ಎಂದರೆ ಸಂಬಂಧಪಟ್ಟ ಅಧಿಕಾರಿಗಳು ಅದು ನಮ್ಮ ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು ಹೇಳುತ್ತಾರೆ. ಅಂತಹ ಸಂದರ್ಭಗಳಲ್ಲಿ ಗೇಣಿದಾರರಿಗೆ ರಕ್ಷಣೆ ಕೊಡುವುದಕ್ಕೆ ಈ ಭೂನ್ಯಾಯಮಂಡಲಿಗಳಿಗೆ ಸಾಧ್ಯವಾಗುವುದಿಲ್ಲ ಇದಕ್ಕೆ ಸಂಬಂದಪಟ್ಟಂತೆ ನೂರಾರು ಕೇಸ್‌ಗಳಿವೆ. ಈ ಕೇಸ್‌ಗಳನ್ನು ಸಹ ಭೂನ್ಯಾಯಮಂಡಲಿಗಳ ವ್ಯಾಪ್ತಿಯಲ್ಲ ತರದಿದ್ದರೆ ಬಹಳಷ್ಟು ಗೇಣಿದಾರರಿಗೆ ಅನ್ಯಾಯವಾಗುತ್ತದೆಂದು ತಮಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಈಗ ಈ ಕೇಸ್‌ಗಳನ್ನು ಇತ್ಯರ್ಥ ಮಾಡುವ ಅಧಿಕಾರವನ್ನು ಮುಜರಾಯಿ ಡೆಪ್ಯೂಟಿಕಮೀಷನರ್ ಅವರಿಂದ ತೆಗೆದು ರೆಗ್ಯುಲರ್ ಡೆಪ್ಯೂಟಿಕಮಿಷನರ್ ಅವರಿಗೆ ಕೊಟ್ಟಿದ್ದೀರಿ ಆದರೆ ಈ ಜಿಲ್ಲಾಧಿಕಾರಿಯವರ ಕಾರ್ಯವ್ಯಾಪ್ತಿ ಬಹಳ ದೊಡ್ಡದಿರುವುದರಿಂದ ಆದರ ಜೊತೆಯಲ್ಲಿ ಈ ಕೆಲಸವನ್ನು ಸಹ ಅವರೇ ಮಾಡಬೇಕೆಂದರೆ ನನ್ನ ದೃಷ್ಟಿಯಲ್ಲಿ ಅವು ಇತ್ಯರ್ಥವಾಗಲು 20 ಅಥವಾ 30 ವರ್ಷಗಳಾದರು ಆಗಬಹುದು ಈ ಕಾರಣದಿಂದ ಅವರ ಕೇಸ್‌ಗಳನ್ನು ಸಹ ಇತ್ಯರ್ಥ ಮಾಡುವ ಅಧಿಕಾರವನ್ನು ಈ ನ್ಯಾಯಮಂಡಲಿಗಳಿಗೇ ಕೊಟ್ಟರೆ ಜಾಗ್ರತೆ ಇತ್ಯರ್ಥಗೊಳಿಸಲು ಅವಕಾಶವಾಗುತ್ತದೆಂದು ಹೇಳುತ್ತೇನೆ. ಎಲ್ಲ ಹಂತಧಲ್ಲಿಯಾ ಅಂದರೆ ಎಲ್ಲ ಗೇಣಿದಾರರ ಸಮಸ್ಯೆಗಳನ್ನು ತೀರ್ಮಾನ ಮಾಡುವ ಒಂದು ಅಧಿಕಾರ ಈ ಭೂನ್ಯಾಯಮಂಡಲಿಗಳಿಗೆ ಇರಬೇಕಾಗುತ್ತದೆ ಆ ರೀತಿ ಮಾಡದಿದ್ದರೆ ಒಂದು ಕಣ್ಣಿಗೆ ಬೆಣ್ಣೆ ಇನ್ನೊಂದು ಕಣ್ಣಿಗೆ ಸುಣ್ಣ ಎಂದು ಹೇಳುವಂತೆ ಆಗುತ್ತದೆ ಮುಜರಾಯಿ ಜಮೀನನ್ನು ಗೇಣಿ ಮಾಡುತ್ತಿದ್ದಾನೆಂಬ ಒಂದೇ ಕಾರಣದಿಂದ ಅವನಿಗೆ ಯಾವ ರೀತಿಯಿಂದಲೂ ರಕ್ಷಣೆ ಇಲ್ಲ ಎಂದು ಹೇಳಿದರೆ ಅದು ನ್ಯಾಯವಾಗುವದಿಲ್ಲವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆದಕಾರಣ ಇದಕ್ಕೆ ಮೂಲಭೂತವಾದ ಬದಲಾವಣೆಯನ್ನು ಮಾಡಬೇಕಾಗುತ್ತದೆ ಅದನ್ನು ಮಾಡುತ್ತಾರೆಂದು ನಂಬಿಕೊಂಡು ಈಗ ಮಾನ್ಯ ಮಂತ್ರಿಗಳು ತಂದಿರತಕ್ಕಂಥ ತಿದ್ದುಪಡಿಯನ್ನು ಮತ್ತು ಇನ್ನು ಮುಂದೆ ಬರಬಹುದಾದಂಥ ಅಂದರೆ ಸರ್ಕಾರದ ಗರ್ಭದಲ್ಲಿರುವ ತಿದ್ದುಪಡಿಗಳನ್ನು ಸ್ವಾಗತಿಸುತ್ತೇನೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

SRI B. B SAYANAK (Belgaum).—MR. Deputy Speaker Sir, I rise to oppose this Bill. In Bombay State when they made the tiller as the owner of the land they have constituted four categories to exercise

powers They have given powers. to the Tahsildar, then to the Divisional Commissioner, the Tribunal and then to the High court. After doing all these things, the tenants or the land-lords got full justice. But here you have appointed certain Tribunals. In my area, people are very alert because they know that land to the tiller Bill is coming soon. There are very few cases of land lords and tenants dispute, and yet Tribunals which have been constituted by this Government are consisting of only congress people. In Khanapur also they have re-constitute the tribunal by putting some Members of the Congress party. Now, you have given the powers to the tribunal of issuing injunction orders and appointing Receivers. I have got my own doubt that the powers will be mis-used or abused. Because, some of these Members, they themselves are bring application for the grant of injunction. There will be lot of injustice to the tenants.

Another thing I want to mention here is that recently even the Minister for Revenue had ordered to appoint Receiver in Belgaum before this ordinance was issued. What right this Minister has got to issue such an order ?

MR. DEPUTY SPEAKER:—How can a Minister appoint a Receiver?

SRI S. M SHEERNALI CHANDRASHEKHAR.— When there is Tribunal how can the Revenue Minister appoint a Receiver

SRI B. B. SAYANAK:—The Minister has appointed Receiver under his signature. There is one dispute between Inamdar Kadam, wherin he has appointed Receiver in favour of tenant, but the Minister has no right to appoint such Receiver order.

MR. DEPUTY SPEAKER,—Injunction could be issued only by a Court of Law.

SRI B. B. SAYANAK :— The Member of the Tribunal have maintained their agents. Under these circumstances the powers vested with the Tribunal will not do justice to the people,

MR. DEPUTY SPEAKER:—If the Hon'ble member had made that suggestion earlier it would have been better. But now there is nothing about the constitution of the Tribunal. He may try to be within the scope of the Bill.

SRI B. B. SAYANAK.—According to me we are giving powers to the wrong persons who will abuse these power . With these words, I conclude my speech,

† ಶ್ರೀ ಸಿ ಬೈರೇಗೌಡ (ವೇಮಗಲ್).— ಮಾನ್ಯ ಉಪಾಧ್ಯಕ್ಷರೇ, ಈ ದಿವಸ ಭೂಸುಧಾರಣೆ ರಾಜ್ಯ ಮಂತ್ರಿಗಳು ತಂದಿರತಕ್ಕ ಈ ತಿದ್ದುಪಡಿ ಮಸೂದೆಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಹಿಂದೆ ಭೂಸುಧಾರಣೆ ತಿದ್ದುಪಡಿ ಮಸೂದೆ ಅಮೂಲಾಗ್ರವಾಗಿ ಬಂದಾಗಲೇ ಕೆಲವು ಸಂಶಯ

ಗಳನ್ನು ವ್ಯಕ್ತಪಡಿಸಿದ್ದೆ. ಈ ತರಹದ ತಿದ್ದುಪಡಿಯನ್ನು ತಂದೇ ತರುತ್ತಾರೆಂದು ಸಂಶಯ ಇತ್ತು. ಕಾರಣ ಏನು ಎಂದರೆ ಸಿವಿಲ್ ಕೋರ್ಟುಗಳು ಹಿಂದೆ ಪಾರ್ಟಿಗೆ ನೋಟೀಸ್ ಕೊಡದೆ ತೀರ್ಮಾನಗಳನ್ನು ಮಾಡುವ ಸಂದರ್ಭಗಳು ಇದ್ದುವು. ಆದರೆ ಈಗ ನೋಟೀಸ್‌ಗಳನ್ನು ಪಾರ್ಟಿಗೆ ಕೊಟ್ಟು ಇಂಜಂಕ್ಷನ್ ಕೊಡಬಹುದು ಎಂದು ಇದೆ. ಆದರಿಂದಲೂ ಕೂಡ ಹೆಚ್ಚಿಗೆ ಗೇಣಿದಾರರಿಗೆ ಪ್ರಯೋಜನವಾಗುವುದಿಲ್ಲ.

4–30 P. M.

ನಮ್ಮಲ್ಲಿರತಕ್ಕ ಕಾಗದಪತ್ರಗಳು ಅವರಿಗೆ ಹೋಗಬೇಕಾದ ಕ್ರಮ ಸರಿಯಾಗಿಲ್ಲದ ಕಾರಣದಿಂದ ಅನೇಕ ಗೇಣಿದಾರರಿಗೆ ಸಾಕಷ್ಟು ನಷ್ಟ, ತೊಂದರೆಯಾಯಿತು ಈಗ ಇಲ್ಲಿ ತಂದಿರತಕ್ಕ ಒಂದು ತಿದ್ದುಪಡಿಯೂ ಕೂಡ ಹಿಂದೆ ಯಾವಾಗಲೋ ಬರಬೇಕಾಗಿತ್ತು. ನಾವು ಖಾಸಗಿಯಾಗಿ ಸಂಬಂಧಪಟ್ಟ ಮಂತ್ರಿಗಳನ್ನು ಕಂಡಾಗ ಸಂಬಂಧಪಟ್ಟ ಅಧಿಕಾರಿಗಳನ್ನೂ ಕಂಡಾಗ ಇದರ ಬಗ್ಗೆ ಚರ್ಚೆಮಾಡಿದ್ದೂ ಉಂಟು. ಆದರೆ ನನಗೆ ಗೊತ್ತಾಗಿರುವ ಹಾಗೆ ಈ ತರಹ ತಿದ್ದುಪಡಿಯಾಗುವುದಕ್ಕೆ ಒಂದು ಬರವಣಿಗೆಗೋಸ್ಕರ ಸುಮಾರು ಒಂದೆರಡು ತಿಂಗಳುಗಳು ಕಳೆದಿರಬಹುದು. ಇದು ಇನ್ನು ಡೆಲ್ಲಿಗೆ ಹೋಗಿ ಇಲ್ಲಿಗೆ ವಾಪಸ್ಸು ಬರಬೇಕಾದರೆ ಇನ್ನೂ ಒಂದೆರಡು ತಿಂಗಳುಗಳು ಕಳೆದಿರಬಹುದೆಂದು ನನಗನ್ನಿಸುತ್ತದೆ. ಈ ಒಂದು ಪ್ರೋಸೆಸ್‌ನಲ್ಲಿ ಸುಮಾರು ನಾಲ್ಕೈದು ತಿಂಗಳು ತಡವಾಗಿ ಬಂದಿತು. ಆದರೆ ಸರ್ಕಾರದವರು ಯಾವುದೇ ಕೆಲಸವನ್ನು ಆಲೋಚನೆ ಮಾಡಲಿ, ಆದರ ಬಗ್ಗೆ ತಡ ಮಾಡಲಿ ನಾನು ಈ ಒಂದು ಸಂದರ್ಭದಲ್ಲಿ ಅವಾವುದನ್ನೂ ಕೂಡ ಗಣನೆಗೆ ತಗೆದುಕೊಳ್ಳುವುದಿಲ್ಲ ಆದರೆ ಭೂಸುಧಾರಣೆಯ ವಿಷಯದಲ್ಲಿ ಈ ರೀತಿಯಾದಂಥ ಒಂದು ಆಲಸ್ಯ ಮನೋಭಾವನೆ ಪಡೆದರೆ, ನೀವು ಅಲ್ಲಿ ಕೂತಿರುವುದಕ್ಕೆ ಯೋಗ್ಯರಲ್ಲ. ಕಾರಣವೇನೆಂದರೆ ಹಿಂದೆ ಭೂಸಮಸ್ಯೆ ಅಷ್ಟು ತೀವ್ರವಾದುದು ಎಂದು ಹೇಳಿ ಪ್ರಕೃತದಲ್ಲಿ ಈಗ ಸೂಕ್ತ ಸಮಯವಲ್ಲವೆಂದು ಹೇಳಿದರೆ ಹೇಗೆ ? ಏನೇ ಆದರೂ ಬಿಟ್‌ವೀನ್ ದಿ ಲೈನ್ಸ್ ಹೋಗುತ್ತೀರಿ. ಕೆಲವು ಸಂದರ್ಭಗಳಲ್ಲಿ ಕಾನೂನುಗಳ ಇಂಟರ್‌ಪ್ರಿಟೇಷನ್ ಹಾಕಬಹುದು. ಸರ್ಕಾರ ಇಂಥಾದ್ದನ್ನು ಬರೀ ಎರಡು ಕಣ್ಣುಗಳಿಂದ ನೋಡಿದರೆ ಸಾಲದು. ಮೈಯೆಲ್ಲಾ ಕಣ್ಣಾಗಿಟ್ಟು. ಭೂಮಾಲೀಕರು ಯಾರ್ಯಾರು ನಿಮ್ಮ ಮರೆ ಹೋಗುತ್ತಿದ್ದಾರೆಂದು ನೋಡಬೇಕು. ಸಮಯಬಂದಾಗ ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿದ್ದೇವೆಂದು ಹೇಳುತ್ತೀರಿ. ಆಲೋಚನೆ ಮಾಡದೆಯೇ ಇಂತಹ ಸುಗ್ರೀವಾಜ್ಞೆಯನ್ನು ಹೊರಡಿಸುವುದಕ್ಕೆ ಇನ್ನು ಮುಂದೆ ಅವಕಾಶ ಕೊಡದೆ ಅವಕಾಶ ಸಿಕ್ಕಿದಾಗಲೇ ಈ ಸಭೆಯ ಮುಂದೆ ಅಂಥಾದ್ದನ್ನು ತರಬೇಕೆಂದು ನಾನು ಸರ್ಕಾರಕ್ಕೆ ಸೂಚನೆಕೊಡುತ್ತೇನೆ.

ಇನ್ನೊಂದು ವಿಷಯ. ಇಂಜಂಕ್ಷನ್ ಕೊಡುವಾಗ ಕೆಲವು ತೊಡಕುಗಳು ಬರುತ್ತವೆ. ಇವತ್ತು ನಮ್ಮಲ್ಲಿರತಕ್ಕ ಭೂಮಾಲೀಕರು ಗೇಣಿದಾರರಿಗೆ ಅವರಿಗೆ ಇಲ್ಲದೇ ಇರತಕ್ಕ ಆಶೆ ತೋರಿಸಿ ಅಂತಹವರನ್ನು ಅವರ ಬಲೆಗೆ ಹಾಕಿಕೊಳ್ಳುವುದಕ್ಕೆ ಪ್ರಯತ್ನಪಡುತ್ತಾರೆ. ಕೆಲವು ಕುಟುಂಬಗಳಲ್ಲಿ ತಂದೆ ಮಕ್ಕಳು ಒಟ್ಟಿಗೆ ಇರುತ್ತಾರೆ. ತಂದೆಯ ಹೆಸರಿನಲ್ಲಿಯೇ ಪಹಣಿ ದಾಖಲೆಗಳು ಇರುತ್ತವೆ. ತಂದೆಗೆ ಯಾವುದೋ ಒಂದು ರೀತಿ ನಂಬಿಕೆಯನ್ನು ತೋರಿಸಿ ಬೇರೊಂದು ವ್ಯವಹಾರ ಇಟ್ಟುಕೊಂಡು, ಕೋರ್ಟಿನ ಹೊರಗಡೆ ಕೆಲವಾರು ವ್ಯವಹಾರಗಳನ್ನು ಇಟ್ಟುಕೊಂಡು ಅವರು ತಮ್ಮ ಪರವಾಗಿಯೇ ಹೇಳಿಕೆಯನ್ನು ಕೊಡುವ ರೀತಿಯಲ್ಲಿ ಇವತ್ತಿನ ದಿವಸ ಮಾಡುತ್ತಿದ್ದಾರೆ. ಇದರಿಂದ ಅನೇಕ ಗೇಣಿದಾರರಿಗೆ ತೊಂದರೆಯಾಗುತ್ತಿದೆ. ಕೆಲವು ಸಂದರ್ಭಗಳಲ್ಲಿ ತಂದೆಗೆ ಮತ್ತು ಮಕ್ಕಳಿಗೆ ಇರುವ ವೈಷಮ್ಯವನ್ನು ದುರುಪಯೋಗಪಡಿಸಿಕೊಂಡು ಹೋಗುತ್ತಿರುವ ನಿದರ್ಶನಗಳೂ ಉಂಟು. ಅಂತಹ ಸಂದರ್ಭಗಳಲ್ಲಿ ಕಲ್ಟಿವೇಷನ್ನಿಗೆ ಒಂದು ಅರ್ಥ ಇದೆ. Even if it is cultivated jointly by any member of the family then it comes under the definition "Cultivation".

ಕೆಲವು ಕಡೆಗಳಲ್ಲಿ ಇದು ಸರಿಯಾಗಿ ಇಂಟರ್‌ಪ್ರಿಟೇಷನ್ ಆಗುತ್ತಾ ಇಲ್ಲ. ಇದರಿಂದ ಗೇಣಿದಾರರಿಗೆ ಬಹಳ ತೊಂದರೆಯಾಗುತ್ತದೆ. ಯಾವರೀತಿಯಲ್ಲಿ ಇದನ್ನು ಸರಿಪಡಿಸಬೇಕೆಂಬುದನ್ನು ಸರ್ಕಾರ ಗಮನಿಸಬೇಕು. ಯಾರಾದರೂ ಒಬ್ಬ ಕುಟುಂಬದ ಸದಸ್ಯರಿಂದ ಭೂಮಿ ಸಾಗುವಳಿಯಾಗುತ್ತಿದ್ದರೆ ಅದನ್ನೂ ಸಹ ಗಣನೆಗೆ ತೆಗೆದುಕೊಳ್ಳಬೇಕು. ಇದರ ಬಗ್ಗೆ ಒಂದು ಸರ್ಕ್ಯುಲರ್ ಹೊರಡಿಸಿ ಈ ಒಂದು ವಿಚಾರವನ್ನು ನಿಮ್ಮ ಟ್ರಿಬ್ಯೂನಲ್ ಚೇರ್‌ಮನ್‌ಗೆ ತಿಳಿಸಿದರೆ ಆಗ ಆದರಿಂದ ಬಡಜನರಿಗೆ ಹೆಚ್ಚು ಪ್ರಯೋಜನವಾಗುತ್ತದೆ. ತಾವು ಖಂಡಿತವಾಗಿ ಇದರಲ್ಲಿ ಆಲಸ್ಯಮಾಡಬಾರದು ಆ ರೀತಿ ಮಾಡುವುದಾದರೆ ದಯವಿಟ್ಟು ನೀವು ಅಲ್ಲಿ ಕುಳಿತುಕೊಳ್ಳಬೇಡಿ ಎಂಬುದಾಗಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ.ಸಿ. ಶೆಟ್ಟರ್(ಹಾನಗಲ್).—ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ಲ್ಯಾಂಡ್ ರಿಫಾರಮ್ಸ್ ೧೯೬೧ ನೇ ತಿದ್ದುಪಡಿ ಮಸೂದೆಯನ್ನು ನಾನು ಸ್ವಾಗತಮಾಡುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪಮಾಡ ಬಯಸುತ್ತೇನೆ. ನಮ್ಮ ಸ್ನೇಹಿತರು ಈಗಾಗಲೇ ಈಗ ಇಂಜಂಕ್ಷನ್ ಕೊಡುವ ಕಾನೂನು ಪ್ರಾಪ್ತವಾಗುವ ಪೂರ್ವದಲ್ಲಿ ಮತ್ತು ಪ್ರಾಪ್ತವಾದನಂತರ ಯಾವರೀತಿಯಲ್ಲಿ ತೊಂದರೆಗೆಯಿಡಾದ ಗೇಣೀದಾರರಿಗೆ ರಕ್ಷಣೆ ಕೊಡುವ ಸಲುವಾಗಿ ಅಯಿತೆಂಬುದನ್ನು ಚೆನ್ನಾಗಿ ಪ್ರಸ್ತಾಪ ಮಾಡಿದ್ದಾರೆ. ಇಂಜಂಕ್ಷನ್ ಅಧಿಕಾರ ಸಿವಿಲ್ ಕೋರ್ಟಿಗೆ ಇದ್ದಾಗ್ಗ ಅ ಸಿವಿಲ್ ಕೋರ್ಟಿನಲ್ಲಿ ಟೆನೆನ್ಸಿ ಇಷ್ಯೂ ಪ್ರಸ್ತಾಪಮಾಡಿದಾಗ ಅದು ಟ್ರಿಬ್ಯೂನಲ್‌ಗೆ ರೆಫರೆ ಆಗಬೇಕೆಂದು ಈ ಆರ್ಡಿನೆನ್ಸ್ ಬರುವ ಪೂರ್ವದಲ್ಲಿತ್ತು. ಅದಕ್ಕ ಕೋರ್ಟಿನವರು ಅದರ-ಲ್ಲಿಯೂ ಟ್ರಿಬ್ಯೂನಲ್ ಅವರು ನಿರ್ಣಯ ಮಾಡುವ ಪೂರ್ವದಲ್ಲಿ " ಏನು ಮಾಡಬೇಕೆಂದು ಹೇಳಿ ನಮ್ಮ ಹೈಕೋರ್ಟಿನವರು ಆ ಅವಧಿಯಲ್ಲಿ ಒಬ್ಬ ರಿಸೀವರ್ ಅವರನ್ನು ನೇಮಕಮಾಡ ಬಹುದೆಂದು ನಿರ್ಣಯ ತೆಗೆದುಕೊಂಡಿದ್ದರಿಂದ ಅದರಿಂದ ಒಂದು ರೀತಿಯಲ್ಲಿ ಗೇಣೀದಾರರಿಗ ರಕ್ಷಣೆಗೆ ಬದಲು ತೊಂದರೆ ಯಾಯಿತು. ಇಂಜಂಕ್ಷನ್ ಕೊಡುವ ಅಧಿಕಾರ ಟ್ರಿಬ್ಯೂನಲ್‌ಗೆ ಇಲ್ಲದೇ ಇದ್ದುದರಿಂದ ಅವನು ಟೆನೆಂಟ್ ಆಗಿರಲಿ ಅಥವಾ ಆಗದೇ ಇರಲಿ ಇಂಜಂಕ್ಷನ್ ಕೊಡಲೇ ಬೇಕೆಂಬ ಅಭಿಪ್ರಾಯಕ್ಕೆ ಬಂದು the Civil Court can grant injunction in the interim period ಎಂಬ ಅಭಿಪ್ರಾಯಕ್ಕ ಬಾದರು but after the promulgation of this Ordinance, it is very strange to not that the orders have been passed under the strength of the Ordinance and orders are being stayed now " ಈಗ ಏನು ಮಾಡಬೇಕೆಂಬ" ಪ್ರಶ್ನೆ ಹಾಗು ಈ ಒಂದು ಅಭಿಪ್ರಾಯದ ಒಂದು ಲ್ಯಾಕುನ ನಮ್ಮ ಮಂತ್ರಿಗಳು ಹೇಳಿದಹಾಗೆ ಈ ಒಂದು ತಿದ್ದುಪಡಿಯನ್ನು ತಂದು ಅದರಲ್ಲಿ ತಾಕಿದು ಅಧಿಕಾರವನ್ನು ಈ ಟ್ರಿಬ್ಯೂನಲ್‌ಗೆ ಕೊಟ್ಟಿದ್ದು ಆಗಿದೆ. ಎಲ್ಲ ಸದಸ್ಯರ ಅಭಿಪ್ರಾಯ ನೋಡಿದರೆ ತಾವು ಕೊಟ್ಟಂಥ ಇಂಜಂಕ್ಷನ್ ಇಂಟರ್‌ಲಾಕ್ಯುಟರಿ ಆರ್ಡರ್ ಮೇಲೆ ಹೈಕೋರ್ಟಿನವರು ಸ್ಟೇ ಕೊಟ್ಟಿದ್ದಾರೆಂಬುದು ಚೆನ್ನಾಗಿ ಅರ್ಥವಾಗುತ್ತದೆ. ಆದರಿಂದ ನಾನು ಸರ್ಕಾರದವರಲ್ಲಿ ಒಂದು ಪ್ರಾರ್ಥನೆಮಾಡಿಕೊಳ್ಳುತ್ತೇನೆ ಇದರಲ್ಲಿ ಏನೋ ಯಾವ ಘಟನೆಯಲ್ಲಿಲ್ಲದಂಥ ಕೆಲವೊಂದು ಅಧಿಕಾರಗಳಲ್ಲಿ ಈ ಒಂದು ಘಟನೆ ಬರುತ್ತದೋ ಏನೋ ಎಂಬುದಾಗಿ ನಾನು ಪಶ್ನೆಮಾಡುತ್ತೇನೆ ಈಗ ಭೂಸುಧಾರಣೆಯ ಕಾನೂನು ಯಾವಾಗ 9th Schedule ನಲ್ಲಿ ಸೇರಿಸಲಾಯಿತು, ಘಟನಾತ್ಮಕವಾಗಿ ಈ ಕಾನೂನು ಸರಿ ಇದೆಯೋ ಇಲ್ಲವೇ ಎಂಬುದಾಗ ಪ್ರಶ್ನೆಮಾಡುವ ಯಾವ ಅಧಿಕಾರ ಕೋರ್ಟಿಗೂ ಇಲ್ಲ ಅಂದಮೇಲೆ ಇದರ ಜ್ಯೂರಿಸ್‌ಡಿಕ್ಷನ್ ಯಾವಾಗ ಬರುತ್ತದೆ ಟ್ರಿಬ್ಯೂನಲ್ ನವರು ಫೈನಲ್ ಆರ್ಡರ್ ಮಾಡಿದ ಮೇಲೆಯೇ ಎಂದು ನಾನು ಕೇಳುತ್ತೇನೆ, For want of jurisdiction or violation of the Principles of natural justice ಏನಾದರೂ ಅನ್ಯಾಯವಾಗಿದೆಯೇ ಇಲ್ಲವೇ ಎಂಬುದನ್ನು ಸಹ ನಾವು ನೋಡಬೇಕಾಗಿದೆ ಕೋರ್ಟಿನಲ್ಲಿ ಇಂಟರ್‌ಲ್ಯಾಕುಟರಿ ಆರ್ಡರ್ ಪಾಸಾದಮೇಲೆ, when it has got the jurisdiction when there is a jurisdiction vested in the Tribunal under the Ordinance, I failed to understand how the High Court interfered with this. ಇದರಿಂದೇನು ಗೋತ್ತಾಗುತ್ತದೆಯೆಂದರೆ ಈಗ ಟ್ರಿಬ್ಯೂನಲ್ ವ್ಯವಸ್ಥೆಗೂ ಈ ಒಂದು ವ್ಯವಸ್ಥೆಗೂ ಏನೂ ಮನಸ್ಸು ಇಲ್ಲದಿರುವ ಹಾಗೆ ಒಂದು ರೀತಿಯ ಹೋರಾಟ ನಡೆಯುತ್ತಿದೆ ಆದರಿಂದಾಗಿ ಇವನ್ನು ಇಂಟರ್‌ಲ್ಯಾಕುಟರಿ ಆರ್ಡರೆ ಪಾಸ್ ಅವರ ವಿರುದ್ಧ ಹೈಕೋರ್ಟಿನವರು ಸ್ಟೇ ಕೊಟ್ಟಿದ್ದಾರೆ. ಈಗ ರಿಟ್ ಪಿಟಿಷನ್ ಹಾಕಿಕೊಳ್ಳಲು ಬರುತ್ತದೆಯೋ ಹೇಗೆ ಸುಪ್ರೀಂಕೋರ್ಟಿನವರು ಇದನ್ನು ಸರಿಪಡಿಸಬೇಕೆ ಅ ರೀತಿಯಾಗಿ ಮಾಡದಿದ್ದರೆ ಬಡಜನ ರೈತರಿಗೆ ಇದರಿಂದ ಬಹಳ ಅನ್ಯಾಯವಾಗುತ್ತದೆಂದು ನಾನು ಸರ್ಕಾರಕ್ಕೆ ಎಚ್ಚರಿಕೆ ಕೊಡುತ್ತೇನೆ.

ಕಾರಣ ಇವತ್ತು ನಾನು ಹೇಳುವುದೇನೆಂದರೆ ಜ್ಯೂರಿಸ್‌ಡಿಕ್ಷನ್ ಇಲ್ಲದಹಾಗೆ ಹೈಕೋರ್ಟಿನವರು ಸ್ಟೇ ಕೊಟ್ಟಿದ್ದಾರೆ. ಯಾವ ಪವರ್‌ನಿಂದ ಕೊಡುತ್ತಾರೆಂದು ಕೇಳುತ್ತೇನೆ ಆದುದರಿಂದ ಅದು ತಪ್ಪಿರಬಹುದು. ಈಗ ಪೊಲಿಟಿಕಲ್‌ನಿಂದ ಕ್ಯಾನ್ಸ್‌ಟಿಟ್ಯೂಟ್ ಮಾಡಿರತಕ್ಕಂಥ ಟ್ರಿಬ್ಯೂನಲ್ಸ್‌ನಿಂದ ಅವರಿಗೆ ನ್ಯಾಯ ಹೇಗೆ ಸಿಗುತ್ತದೆಂದು ಹೇಳುತ್ತಾರೆ. ಆದರಿಂದ ತಪ್ಪಾಗಬಹುದು ಆದರೆ ಈ ಒಂದು ಹೊಸ ವ್ಯವಸ್ಥೆ ರಾಜ್ಯದಲ್ಲಿ, ಇಡೀ ದೇಶದಲ್ಲಿ ಒಂದು ಪ್ರಾಯೋಗಿಕ ವ್ಯವಸ್ಥೆ ನಡೆಯುತ್ತಿದೆ. ನಾವು ಇವತ್ತು ನಡೆದು ಬಂದಂಥ ಕೆಲಸಗಳನ್ನು ನೋಡಿದರೆ, ಪರಿಶೀಲನೆ ಮಾಡಿ ನೋಡಿದರೆ ಏನು ಅನಿಸುತ್ತದೆಂದರೆ ಇಷ್ಟು ಅಧಿಕಾರವನ್ನು ಕೋರ್ಟ್‌ಗಳಿಗೇ ಇತ್ಯರ್ಥ ಮಾಡಲು ಕೊಟ್ಟಿದ್ದರೆ ಎಷ್ಟು ತಪ್ಪಾಗುತ್ತಿತ್ತೋ. ಎಷ್ಟು ಅನ್ಯಾಯವಾಗುತ್ತಿತ್ತೋ, ಆ ಬಡವರ ಮೇಲೆ, ಆ ಗೇಣಿದಾರರ ಮೇಲೆ ಎಷ್ಟು ತಪ್ಪಾಗುತ್ತಿತ್ತೋ ಅಷ್ಟು ತಪ್ಪು ಈ

ಟ್ರಿಬ್ಯುನಲ್‌ಗಳಿಂದ ಆಗುತ್ತಿಲ್ಲಾ ಎಂದು ನಾವು ಖಡಾಖಂಡಿತವಾಗಿ ಹೇಳಬಹುದಾಗಿದೆ. ಕಾರಣ ಇವತ್ತು ಈ ವ್ಯವಸ್ಥೆಯನ್ನು ಯಾರು ವಿರೋಧಮಾಡುತ್ತಿದ್ದಾರೆ ? ಇದನ್ನು ರೈತರು ವಿರೋಧ ಮಾಡುತ್ತಿಲ್ಲ' ಗೇಣಿದಾರರು ವಿರೋಧ ಮಾಡುತ್ತಿಲ್ಲ, ವಿರೋಧ ಮಾಡತಕ್ಕಂಥ ಜನ ಯಾರು ಎನ್ನುವುದನ್ನು ವಿಚಾರ ಮಾಡಿದರೆ ಕೇವಲ ಭೂ ಮಾಲೀಕರು ವಿರೋಧ ಮಾಡುತ್ತಿದ್ದಾರೆ. ಇಂಥ ಇಂಟರ್‌ ಲಕ್ಯೂಟರಿ ಆರ್ಡರ್‌ನ ಮೇಲೆ ಸ್ಟೇ ಕೊಡುವುದನ್ನು ನೋಡಿದರೆ ರಿಟ್‌ಗಳು ಹೇಗೆ ಬಂತು ? ನಾವು ಏನು ಅಂಥ ತಪ್ಪು ಮಾಡಿ-ದ್ದೇವೆ ? ರಿಟ್ ಇನ್‌ವೋಕ್ ಮಾಡಬೇಕಾದರೆ ಯಾವ ಪ್ರಸಂಗಗಳಲ್ಲಿ ಮಾಡಬೇಕು. ನಾವು ಏನಾದರೂ ಪ್ರಯತ್ನ ಮಾಡಲೇಬೇಕು. ಆದುದರಿಂದ ನಾನು ಸರ್ಕಾರದವರನ್ನು ಕೇಳಿಕೊಳ್ಳುವುದೇನೆಂದರೆ, ನನ್ನ ಸ್ನೇಹಿತ ರಾದ ಬೈರೇಗೌಡರವರು ಹೇಳಿದರು ಈ ಕಾನೂನು ಮೊದಲೇ ಬರಬೇಕಾಗಿತ್ತು ಎಂದು ಅದನ್ನು ನಾನು ಒಪ್ಪುತ್ತೇನೆ. ಈ ರೀತಿಯಾಗಿ ಅವ್ಯವಸ್ಥೆಯಾಗಿ ನಿಂತು ಹೋಗುತ್ತದೆ ಎನ್ನುವಂಥ ಕಲ್ಪನೆ ಇರಲಿಲ್ಲ. ತಡ ವಾಗಿ ಯಾದರೂ ಕೂಡ ಸರಿಯಾದ ಟೈಮ್‌ನಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ ಯಾವ ಉದ್ದೇಶದಿಂದ ಮಾಡಿದ್ದೇವೋ ಆ ಒಂದು ಉದ್ದೇಶ ರೈತರಿಗೆ ಮುಟ್ಟಿದೆಯೋ ಇಲ್ಲವೋ ಎನ್ನುವ ಸಂಶಯಾಸ್ಪದವಾಗಿದೆ ಆದುದರಿಂದ ಕೂಡಲೇ ನ್ಯಾಯವನ್ನು ದೊರಕಿಸಿಕೊಳ್ಳಬೇಕು ಎಂದು ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ ಎರಡನೆಯದಾಗಿ ನಮ್ಮ ಫೌಡಿಯವರು ಹೇಳಿದ ಹಾಗೆ ಎಷ್ಟೋ ಟ್ರಿಬ್ಯೂನಲ್ಸ್‌ಗಳಲ್ಲಿ ಅಸಿಸ್ಟೆಂಟ್ ಕಮಿ ಷನರ್ ಇರದೇ ಇದ್ದರೆ ಟ್ರಿಬ್ಯೂನಲ್ಸ್‌ಗಳ ಫಂಕ್ಷನ್ ಮಾಡುವುದಕ್ಕೇ ಬರುವುದಿಲ್ಲ ಎನ್ನುವ ಮಾತು ಇದೆ. ಈಗ ಏನಾಗಿದೆ ಟ್ರಿಬ್ಯೂನಲ್ಸ್‌ಗಳಿಗೆ ೧೦ ದಿವಸಗಳಿಗೊಮ್ಮೆ ಆರ್ಡರ್ ಕೊಟ್ಟು ಆ ಆಫೀಸರ್‌ರವರು ೧೧ ದಿವ ಸಗಳ ಕಾಲ ರಜ ಹಾಕಿ ಬಿಟ್ಟು ಹೊರಟು ಹೋಗಿ ಬಿಡುತ್ತಾರೆ. ರೈತನ ಕೇಸ್ ಡಿಸ್ಪೋಸ್ಡ್ ಆಗದಿದ್ದರೆ ಅವನು ವರ್ಷವೆಲ್ಲಾ ಕಷ್ಟ ಪಟ್ಟು ಬೆಳೆದಂಥ ಫಸಲೂ ಸಹ ಅವನ ಕೈಗೆ ಸಿಕ್ಕುವುದಿಲ್ಲ. ಇಂಥ ಘಟನೆಗಳು ಬೇಕಾದಷ್ಟು ನಡೆದಿವೆ, ರೈತನಿಗೆ ಕೊನೆಗೆ ಸಿಗತಕ್ಕಂಥದ್ದು ಬಂಡಿಗಾಲೆಯೇ ಹೊರತು ಮತ್ತೇ ಏನೂ ಅವನಿಗೆ ಸಿಕ್ಕುವುದಿಲ್ಲ. ಇವತ್ತು ಮಾಲೀಕರು ಸ್ಟೇ ಆರ್ಡರನ್ನು ತಂದು ಅವರು ಆ ಫಸಲನ್ನು ತೆಗೆದುಕೊಂಡು ಹೋಗಿದ್ದಾರೆ. ಇವತ್ತು ರೈತರಿಗೆ ಹಿತ ರಕ್ಷಣೆಯಾಗಬೇಕಾಗಿದೆ, ಜಮೀನು ಮಾಡ ತಕ್ಕಂಥವನಿಗೆ ಜಮೀನು ಸಿಗಬೇಕೆಂದು ಹೇಳಿ ನಾವು ಪ್ರಯತ್ನ ಪಡುತ್ತಿದ್ದೇವೆ ಆ ಉದ್ದೇಶ ದಿಂದಲೇ ಈ ವ್ಯವಸ್ಥೆ ಮಾಡಿದ್ದೇವೆ. ಆ ರೀತಿ ವ್ಯವಸ್ಥೆ ಮಾಡಿದ್ದಾಗ್ಯೂ ಕೂಡ ಇವತ್ತು ಲೆಜಿಸ್ಲೇಷನ್‌ಗೂ ಬೇರೆಯವರಿಗೂ ಒಂದು ತಿಕ್ಕಾಟ ನಡೆಯು ತ್ತಿದೆ ಎನ್ನುವ ಅನುಮಾನ ಬರತ್ತಿದೆ. ಈಗಾಗಲೇ ನನ್ನ ಸ್ನೇಹಿತರು ಹೇಳಿದ ಹಾಗೆ ಟ್ರಿಬ್ಯೂನಲ್ಸ್‌ನಲ್ಲಿ ಮೆಂಬರ್ಸ್ ಕೆಲಸ ಮಾಡಬೇಕಾದರೆ ಟ್ರಿಬ್ಯೂನಲ್‌ನಲ್ಲಿ ಕೊಟ್ಟಂಥ ಹುಕುಂನ ಮೇಲೆ ಕೋರ್ಟಿನಲ್ಲಿ ಸ್ಟೇ ಕೊಟ್ಟಿದ್ದಾರೆ ಅದನ್ನು ವೆಕೇಟ್ ಮಾಡಲು ಸುಪ್ರೀಂ ಕೋರ್ಟಿನವರಿಗಾದರು ಹೋಗಿ ನ್ಯಾಯವನ್ನು ದೊರಕಿಸಿಕೊಡಬೇಕು ಎನ್ನುವ ಮಾತನ್ನು ಹೇಳುತ್ತೇನೆ. ನಾನು ಮನಸಾರೆ ಈ ತಿದ್ದುಪಡಿಗಳನ್ನು ಸ್ವಾಗತ ಮಾಡುತ್ತೇನೆ. ಮತ್ತೆ ಕೆಲವೊಂದು ವಿಷಯಗಳನ್ನು ನಾನು ಪಕ್ಷದ ಮೀಟಿಂಗ್‌ನಲ್ಲಿ ಪ್ರಸ್ತಾಪ ಮಾಡಿದ್ದೆ ಅವುಗಳ ಬಗ್ಗೆಯೂ ಕೂಡ ಸೂಕ್ತವಾದಂಥ ಅಮೆಂಡ್‌ಮೆಂಟ್‌ಗಳನ್ನು ತರುತ್ತಾರೆಂದು ನಂಬಿ ಅವುಗಳನ್ನು ಕೂಡ ಸ್ವಾಗತ ಮಾಡಿ. ಮಾನ್ಯ ಶೀರ್‍ಾಳಿ ಚಂದ್ರಶೇಖರವರು ನನ್ನ ಬಗ್ಗೆ ಒಂದು ಮಾತು ಹೇಳಿದರು, ಅವರು ಹೇಳಿದಂಥ ಮಾತಿಗೆ ನಾನು ಅರ್ಹನಲ್ಲ ಆದುದರಿಂದ ಅವರು ತಮ್ಮ ಮಾತುಗಳನ್ನು ಹಿಂದಕ್ಕೆ ತೆಗದುಕೊಳ್ಳಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.— (ಸಾಗರ) ಮಾನ್ಯ ಅಧ್ಯಕ್ಷರೇ, ಈ ಒಂದು ತಿದ್ದುಪಡಿ ವಿಧೇಯಕ ವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ ಬಹುಶಃ ಭೂಸುಧಾರಣಾ ಕಾಯಿದೆ ಕರ್ನಾಟಕ ರಾಜ್ಯದಲ್ಲಿ ಜಾರಿಗೆ ಕೊಟ್ಟಾದ ಮೇಲೆ ಏನು ಪರಿಸ್ಥಿತಿ ಉಂಟಾಗಿದೆ ಎನ್ನುವ ಬಗ್ಗೆ ಮಾನ್ಯ ಸುಬ್ಬಯ್ಯ ಶೆಟ್ಟಿಯವರು ಮಾತನಾಡಿದರು. ಅವರು ಮಾಡಿದಂಥ ತಿದ್ದುಪಡಿಗಳಲ್ಲಿ ಇವತ್ತು ಶಾಸಕಾಂಗಕ್ಕೂ ಮತ್ತು ನ್ಯಾಯಾಂಗಕ್ಕೂ ಹೆಚ್ಚು ಕಡಿಮೆ ಒಂದು ರೀತಿಯಲ್ಲಿ ಮಾನಸಿಕವಾದಂಥ ಗುದ್ದಾಟ ನಡೆಯುತ್ತಿದೆ ಅವರು ಏನೇನು ಪಟ್ಟು ಹಾಕುತ್ತಾರೆ ಆ ಎಲ್ಲಾ ಪಟ್ಟನ್ನೂ ಬಿಡಿಸಿಕೊಳ್ಳುವುದಕ್ಕೆ ನಾವು ಸತತವಾಗಿ ಪ್ರಯತ್ನ ಮಾಡಿದ್ದೇವೆ. ಆ ರೀತಿ ಮಾಡುವುದಕ್ಕೆ ಸಾಧ್ಯವಾಗಿರುವುದಾದರೆ ಅದು ಕರ್ನಾಟಕ ರಾಜ್ಯದಲ್ಲಿ ಮಾತ್ರ. ಇಲ್ಲಿ ಸ್ವಲ್ಪ ಅನುಕೂಲವಾಗಿರತಕ್ಕಂಥ ವಾತಾವರಣವಿದೆ ಎಂದು ನನ್ನ ಭಾವನೆ. ಮತ್ತೊಂದು ವಿಷಯ ಮಾನ್ಯ ನಯನಾರ್‌ರವರು ಹೇಳಿದರು ನ್ಯಾಯಾಂಗ ಎತ್ತಿ ಹಿಡಿಯತಕ್ಕಂಥದ್ದೇ ಅಂತಿಮವಾದ ಕ್ಷೇತ್ರ ವೆಂದು ಹೇಳಿದರು. ಅವರು ಹೇಳಿದರ ಬಗ್ಗೆ ನಾನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಇವತ್ತು ಜನತೆ ಕೊಟ್ಟಿರತಕ್ಕಂಥ.......... Peoples's representatives sit together and take a decision honestly and boldly. What will he say about it?

SRI B B. SAYANAK.- Particularly from Mr. Kagodu Thimmappa, I can expect justice but about others?

SRI KAGODU THIMMAPPA.—The Hon'ble member is pointing out something wrong with certain personalities. He can also point out the same defects with such of the persons holding the courts. He says: 'You must have full confidence in the courts'. ಹೊಸ ವಿಧಾನವನ್ನು ಪ್ರಾರಂಭ ಮಾಡಿದ್ದೇವೆ. ಅಂದರೆ ಜನತಾ ಪ್ರತಿನಿಧಿಗಳು ಕೂತು ಕೊಂಡು ತೀರ್ಮಾನ ಮಾಡಿದ್ದೇವೆ. ಅಂದರೆ ಒಂದು ನ್ಯಾಯಾಂಗ ವ್ಯವಸ್ಥೆಯಲ್ಲಿ ಹೊಸ ವ್ಯವಸ್ಥೆಯನ್ನು ಪ್ರಾರಂಭ ಮಾಡಿದ್ದೇವೆ. ಇವತ್ತು ಈ ವಿಧಾನದಲ್ಲಿ ಯಶಸ್ವಿಯಾಗಬೇಕು ಎನ್ನತಕ್ಕಂಥವಕ್ಕೆ ನಮ್ಮ ಮೂಲಭೂತ ಕಲ್ಪ ಏನು ಇದೆ, ಅದು ತತ್ವಶಃ ಯಶಸ್ವಿಯಾಗುವಂತೆ ಮಾಡತಕ್ಕಂಥದ್ದು ನಮ್ಮ ಕರ್ತವ್ಯ. We must commit ourselves. to see that this very process becomes successful ಆದುದರಿಂದ ಮಾನ್ಯ ಕೊಣಂದೂರು ಲಿಂಗಪ್ಪನವರು ಪ್ರಸ್ತಾಪ ಮಾಡುತ್ತಾ ಅವರು ಕೆಲವೊಂದು ಮಾತುಗಳನ್ನು ಹೇಳಿದರು ಇವರಲ್ಲಿಯೂ ಸಹ ಕೆಲವು ಲೋಪದೋಷಗಳು ಕಾಣುತ್ತಿವೆಯೆಂದು ಹೇಳಿದರು, ಆದುದರಿಂದ ಇವತ್ತು ನಾನು ಸರ್ಕಾರದವರಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುವುದೇನೆಂದರೆ. ಇವತ್ತು ನ್ಯಾಯಾಂಗದ ತಕ್ಕಡಿ ಇಲ್ಲಿದೆ. ನ್ಯಾಯದ ತಕ್ಕಡಿಯನ್ನು ನಾವು ಹಿಡಿಯುವುದರಲ್ಲಿ ಹಿಂದು ಮುಂದೆ ಬೀಳಬಾರದು. ಬಸವಣ್ಣನವರು "ಇಲ್ಲಿ ಸಲ್ಲುವವನು, ಎಲ್ಲೆಲ್ಲಿಯೂ ಸಲ್ಲುವನು" ಎಂದು ಹೇಳಿದ್ದಾರೆ. ಈ ನೀತಿಯು ತಕ್ಕಡಿಯನ್ನು ಹಿಡಿದು ಅದರ ಪೂರ್ಣ ಯಶಸ್ಸಿಗೆ ಹೊಣೆಗಾರರಾಗಿರಬೇಕು. ಆದುದರಿಂದ ಮಾನ್ಯ ಸದಸ್ಯರುಗಳಲ್ಲಿಯೂ ಒಂದು ದೊಡ್ಡ ಜವಾಬ್ದಾರಿ ಇದೆ ಇವತ್ತು ನಿಜವಾಗಿಯೂ ಸತ್ವಪರೀಕ್ಷೆಯ ದಿನವಾಗಿದೆ, ಸತ್ವಪರೀಕ್ಷೆಯ ಕಾಲದಲ್ಲಿ ಅಣ್ಣ ಅಡ್ಡ ಬರಬಹುದು ಬಾಂಧವರು ಅಡ್ಡ ಬರಬಹುದು, ತಮ್ಮ ಅಡ್ಡ ಬರಬಹುದು, ಸ್ನೇಹಿತರು ಅಡ್ಡ ಬರಬಹುದು ಆಗ ತತ್ವದ ಆಚರಣೆಯಲ್ಲಿ ವಿರೋಧ ಹೋಗಕೂಡದು. ಇದನ್ನು ಜಾರಿಗೆ ತರುವಾಗ ಸತ್ವ ಪರೀಕ್ಷೆ ಯಾಗುತ್ತದೆ ವ್ಯಕ್ತಿ ಪರೀಕ್ಷೆಯಾಗುತ್ತದೆ, ಪ್ರಾಮಾಣಿಕ ಪರೀಕ್ಷೆಯಾಗುತ್ತದೆ. ಎಲ್ಲಾ ಪರೀಕ್ಷೆಗಳೂ ಇಲ್ಲಿ ಆಗುತ್ತದೆ. ಆ ಎಲ್ಲಾ ಪರೀಕ್ಷೆಗಳಲ್ಲಿಯೂ ಏನೇ ಅಡ್ಡಿ ಬಂದರೂ ಕೂಡ ಯಶಸ್ವಿಯಾಗಿ ನಡೆಸಿಕೊಂಡು ಬಂದಲ್ಲಿ, ಈ ಒಂದು ವ್ಯವಸ್ಥೆಯನ್ನು ಬರೀ ನಮ್ಮ ರಾಜ್ಯದಲ್ಲಿ ಮಾತ್ರವಲ್ಲ ಇತರ ರಾಜ್ಯಗಳೂ ಅನುಕರಣೆ ಮಾಡತಕ್ಕಂಥ ಸನ್ನಿವೇಶ ಬರುತ್ತದೆ. ಅದು ಏನೂ ದೂರವಿಲ್ಲ ಇದನ್ನು ಎಲ್ಲಾ ಸದಸ್ಯರೂ ಮನನ ಮಾಡಿಕೊಳ್ಳುವುದಕ್ಕೆ ಹೃದಯದಲ್ಲಿ ಕರಗತ ಮಾಡಿಕೊಳ್ಳಬೇಕು. ಇದರ ಬೇಸಿಸ್‌ನ ಮೇಲೆ ಎಲ್ಲಾ ನಿಂತಿದೆ.

ಮಾನ್ಯಸದಸ್ಯರೇ ಅರ್ಜಿ ತರುತ್ತಾರೆ ಎಂದು ಮಾನ್ಯಸದಸ್ಯರಾದ ಸಯನಾಕ್ ಅವರು ಹೇಳಿದರು. ನಾವು ಸಾರ್ವಜನಿಕ ಕ್ಷೇತ್ರದಲ್ಲಿ ಇರುವವರು ನಾವು ಅರ್ಜಿಗಳನ್ನು ತರಲೇಬೇಕಾಗುತ್ತದೆ. ಆದರೆ ಎಷ್ಟು ಪ್ರಮಾಣದಲ್ಲಿ ಗೇಣಿದಾರರು ರಿಟ್ ಹಾಕಿದ್ದಾರೆ ಅದನ್ನು ಲೆಕ್ಕ ಹಾಕಿ ತಗೆದುಕೊಳ್ಳಿ, ಇವೊತ್ತಿನ ದಿವಸ ಪತ್ರಿಕಾ ಕರ್ತರು, ಅಥವಾ ಯಾರಾದರು ಸ್ನೇಹಿತರು, ಪ್ರೊಫೆಸರು, ಯಾರಾದರೂ ಪರೀಕ್ಷಕರಾಗಿ ಹೋಗಿ ಎಲ್ಲಾ ಕ್ಷೇತ್ರದಲ್ಲೂ ವಿಮರ್ಶೆಮಾಡಿ ಜಮೀನ್ದಾರರು ಎಷ್ಟು ಜನ ರಿಟ್ ಹಾಕಿದ್ದಾರೆ ಮತ್ತೆ ಎಷ್ಟು ಜನ ಗೇಣಿದಾರರು ಕೋರ್ಟಿಗೆ ಹೋಗಿದ್ದಾರೆ ಲೆಕ್ಕ ತೆಗೆದು ಅಂಕಿಅಂಶ ಹೇಳಿದರೆ ಒಪ್ಪಿಕೊಳ್ಳುತ್ತೇನೆ. ಇವೊತ್ತಿನ ದಿವಸ ನೋಡಿದರೆ ಜಮೀನ್ದಾರರು ಕೋರ್ಟಿಗೆ ಹೋಗಿದ್ದಾರೆ. ಅನೇ ಗೇಣಿದಾರರು ಕೋರ್ಟಿಗೆ ಹೋಗುವುದಕ್ಕೆ ಸಾಧ್ಯವಾಗಿಲ್ಲ ಆದ್ದರಿಂದ ನಾವು ತೀರ್ಮಾನ ಮಾಡುವಾಗ ಏನು ತೀರ್ಮಾನ ಮಾಡುತ್ತೇವೆ ಆಗ ನ್ಯಾಯವನ್ನೇ ಎತ್ತಿ ಹಿಡಿಯಬೇಕು. ಒಳ್ಳೆಯ ತತ್ವ, ಆದರ್ಶದ ಪ್ರಕಾರ ತೀರ್ಮಾನ ಮಾಡಬೇಕು. ಇವೊತ್ತು ಜಡ್ಜಸ್ ಎಂದರೆ ಅವರಿಗೆ ಕೋರ್ಟಿನ ಕೆಲಸವಾಗುತ್ತದೆ. ಈಗ ತೆರೆಮರೆಯಲ್ಲಿ ನಡೆಯುತಕ್ಕ ಆಟದಲ್ಲಿ ಎಷ್ಟು ಭ್ರಷ್ಟಾಚಾರ ನಡೆಯುತ್ತಿದೆ ಅದನ್ನು ಕೇಳಿಲ್ಲವೆ ? ನಾವು ತಪ್ಪು ಮಾಡಿದರೆ we are all subject to criticism. ಈ ದೃಷ್ಟಿಯಿಂದ ಈ ಕಾನೂನನ್ನು ನಾವು ಬಹಳ ಯಶಸ್ವಿಯಾಗಿ ಮಾಡಬೇಕಾಗಿ ಬಂದಿದೆ. ಇವೊತ್ತು ನಾನು ಮೊದಲೇ ಹೇಳಿದಂತೆ ಈಗ ಗೇಣಿ ರೈತರು ತಿಳಿವಳಿಕೆ ಇಲ್ಲದವರು, ಅಲ್ಲದೇ ಸಾಕಷ್ಟು ಅನುಕೂಲ ಇಲ್ಲದವರು. ಆದ್ದರಿಂದ ಗೇಣಿದಾರರ ಪರವಾಗಿ ಸರ್ಕಾರದವರು ಯಾರಾದರೂ ಒಬ್ಬರು ವಾದ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

SRI S. M. SEERNALI CHANDRASHEKAR :— Supposing the Judgement of the Tribunal is in favour of the tenant. If the Land-lord goes on a writ, it is the duty of the Government to defend him. Is it not the duty of the Government to do so?

ಶ್ರೀ ಕಾಗೋಡು ತಿಮ್ಮಪ್ಪ.—ಈಗ ನಮ್ಮ ಮಾನ್ಯ ಸದಸ್ಯರಾದ ಶೆಟ್ಟರ್ ಅವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಇನ್ನೂ ಕೆಲವು ಅಂಶದಲ್ಲಿ ಅಫಿಷಿಯಲ್ ಆರ್ಡರ್ ಅಲ್ಲ, ಟೆಂಪರರಿ ಇನ್‌ಜೆನ್ಕ್ಷನ್ ಆರ್ಡರ ಫಾರಂ ಮಾಡಿದರೆ ಅವರ ಮೇಲೆ ರಿಟ್ ಹಾಕುವುದು. ಈ ಟೆಂಪರರಿ ಇನ್‌ಜೆಂಕ್ಷನ್ ಇಸ್ಯು ಮಾಡುವಾಗ ಅದು ಪ್ರಿಲಿಮಿನರಿ ಆರ್ಡರ್ ಆಗ ರಿಟ್ ಅಡ್ಮಿಟ್ ಮಾಡಿದರೆ ಸಂಶಯ ಬರುವುದು ಸ್ವಾಭಾವಿಕ. ಆದ್ದರಿಂದ ಇದರ ಬಗ್ಗೆ ಸ್ವಲ್ಪ ಗಮನಕೊಡಬೇಕು. ಇನ್ನು ಈ ಭೂ ಸುಧಾರಣೆ ಕಾನೂನಿನ ಬಗೆ ವಾದ ಮಾಡಬೇಕಾದರೆ, ಈ ಭೂ ಸುಧಾರಣೆ ಕೇಸಿನಲ್ಲಿ ಹಾಜರಾಗತಕ್ಕ ವಕೀಲರಿಗೂ ಕೂಡ ಈ ವ್ಯಾಪ್ತಿಯಲ್ಲಿ ತರಬೇತಿ ಬೇಕಾಗುತ್ತದೆ. ಇದಕ್ಕೆ ಒಂದು line of thinking develop ಆದರೆ ಹೈಕೋರ್ಟಿನಲ್ಲಿ ವಾದಿಸಬೇಕಾದ ಸಂದರ್ಭದಲ್ಲಿ committed ಆಗಿ ವಾದಿಸಬಹುದು. ಆದ್ದರಿಂದ ಇವರ ಬಗ್ಗೆ ಹೆಚ್ಚು ಆಸಕ್ತಿ ಇರುವವರನ್ನು ನೇಮಿಸಬೇಕು. ಇಷ್ಟು ಅಂಶವನ್ನು ಗಮನದಲ್ಲಿಟ್ಟುಕೊಂಡರೆ ಬಹುಶಃ ಈ ಕಾನೂನು ಯಶಸ್ವಿಯಾಗಿ ಜಾರಿಗೆ ಬರುತ್ತದೆ. ಇಷ್ಟೊತ್ತು ನಮಗೆ ಅನೇಕ ಸಂಶಯಗಳು ಇದ್ದುವು, ಈ ತಿದ್ದುಪಡಿ ಕೆಲವು ಅನುಮಾನಗಳನ್ನು ಬಗೆಹರಿಸಿದೆ ಏಕೆಂದರೆ ಹೈಕೋರ್ಟಿನಲ್ಲಿ ಪ್ರತಿಯೊಂದು ಪದದ ಮೇಲು ಒಂದೊಂದು ಅರ್ಥ ಹೇಳುತ್ತಾ ಹೋಗುತ್ತಾರೆ. If the land-lord files a suit, the matter can be referred to the Tribunal. If the tenant him-self files a suit, the question of referring the matter does not arise at all. Whether the tenant files or the land-lord files, the issue is whether he is a tenant or not. ಇದು ಸಮಗೆ ಏನು ಆಯಿತು ಎಂದರೆ ಇದು ವಿಚಿತ್ರವಾಗಿ ಇಂಟರ್‌ಪ್ರಿಟೇಷನ್ ಆಯಿತು ಅವರು ಏನು ಹೇಳುತ್ತಾರೆ ಆದಕ್ಕೆ ತಿದ್ದುಪಡಿ ಮಾಡತಕ್ಕ ಅವಕಾಶ ಇದೆ. ಆದುದರಿಂದ ಈ ಕಷ್ಟಗಳನ್ನು ಅರ್ಥಮಾಡಿಕೊಂಡು ಹಂತಹಂತದಲ್ಲಿ ವಿಚಾರ ಮಾಡಿ ಅವಶ್ಯಕವಾದ ತಿದ್ದುಪಡಿಗಳನ್ನು ತಂದಿರುವುದರಿಂದ ಗೇಣಿದಾರರಿಗೆ ರಕ್ಷಣೆ ಸಿಕ್ಕುತ್ತದೆ ಎಂದು ಸಂತೋಷವಾಗಿದೆ. ಈ ಒಂದು ಸಂತೋಷ ಶಾಶ್ವತವಾಗಿ ಇರಬೇಕು ಎನ್ನುವ ಬಗ್ಗೆ ಪ್ರತಿ ಮಾಸವಲ್ಲೂ ಪ್ರತಿ ತಿಂಗಳಲ್ಲೂ ಇದರ ಕಾರ್ಯ ಕ್ರಮವನ್ನು ಸ್ವಲ್ಪ ಶ್ರದ್ಧೆವಹಿಸಿ ನೋಡಬೇಕೆಂದು ಕೇಳಿಕೊಂಡು ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಹೆಚ್ ಟಿ. ಕೃಷ್ಣಪ್ಪ.—(ನಾಗಮಂಗಲ).—ಮಾನ್ಯ ಅಧ್ಯಕ್ಷರೆ, ಮಾನ್ಯ ಭೂ ಸುಧಾರಣಾ ಸಚಿವರು ತಂದಿರತಕ್ಕ ತಿದ್ದುಪಡಿ ಮಸೂದೆಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಈ ಇನ್‌ಜೆನ್ಕ್ಷನ್ ಕೊಡುವ ಅಧಿಕಾರವನ್ನು ಟ್ರಿಬ್ಯುನಲ್ಸ್‌ಗೆ ಕೊಡುತ್ತಾ ಇರತಕ್ಕದ್ದು ಸರಿಯಾಗಿದೆ. ಆದರೆ ಒಂದು ವಿಚಾರವನ್ನು ಮಾನ್ಯ ಮಂತ್ರಿಗಳು ಗಮನದಲ್ಲಿ ಇಟ್ಟುಕೊಂಡು ಅದಕ್ಕೆ ಸೂಕ್ತವಾದ ಬದಲಾವಣೆ ಮಾಡಬೇಕು ಎಂದು ಹೇಳುತ್ತೇನೆ. ಈಗ ಈ ಭೂ ನ್ಯಾಯಮಂಡಲಿಗಳಲ್ಲಿ ಸಾಮಾನ್ಯವಾಗಿ ೧೫ ದಿವಸಗಳಿಗೊಂದು ಸಾರಿ ಅಥವಾ ಒಂದು ತಿಂಗಳಿಗೆ ಒಂದು ಸಾರಿ ಮೀಟಿಂಗ್ ಸೇರುತ್ತಾರೆ. ಈಗ ಮೂರು ಅಥವಾ ಅದಕ್ಕಿಂತ ಹೆಚ್ಚು ಭೂ ನ್ಯಾಯ ಮಂಡಲಿಗಳಿಗೆ ಒಬ್ಬ ಅಸಿಸ್ಟೆಂಟ್ ಕಮಿಷನರ್ ಇರುತ್ತಾರೆ. ವಿಶೇಷವಾಗಿ ಕೆಲವು ಸಂದರ್ಭಗಳಲ್ಲಿ ಒಂದು ತಿಂಗಳು ಅಥವಾ ಎರಡು ತಿಂಗಳಾದರೂ ಈ ಭೂ ನ್ಯಾಯ ಮಂಡಲಿಗಳು ಸೇರದೆ ಇರುವ ಸಂದರ್ಭ ಉಂಟು. ಈ ಭೂ ನ್ಯಾಯ ಮಂಡಲಿಯ ಅರ್ಥ ನಮಗೆ ಗೊತ್ತಿದೆ. ಈಗ ಈ ನ್ಯಾಯ ಮಂಡಲಿಯಲ್ಲಿ ಅಸಿಸ್ಟೆಂಟ್ ಕಮಿಷನರ್ ಮತ್ತೆ ನಾಲ್ಕು ಜನ ಸದಸ್ಯರು ಇರುತ್ತಾರೆ. ಇವೊತ್ತು ಒಂದು ಆರ್ಡರ್ ಪಡೆಯಬೇಕಾದರೆ ಯಾರಿಗೆ ಅದರ ಅವಶ್ಯಕತೆ ಇದೆ, ಯಾರು ಆ ಭೂಮಿಯನ್ನು ವ್ಯವಸಾಯ ಮಾಡಿ ಫಸಲನ್ನು ತೆಗೆದುಕೊಳ್ಳಬೇಕು ಅಂತಹವನಿಗೆ ದಕ್ಕದೇ ಹೋಗಿ ಶಕ್ತಿವಂತನಿಗೆ, ಆ ಬೆಳೆಯನ್ನು ಅಪಹರಿಸುವುದಕ್ಕೆ ಅವಕಾಶವಾಗುತ್ತಿದೆ.

ಶ್ರೀ ಕೆ. ಬಿ. ಶಿವಯ್ಯ.—ಶಕ್ತಿವಂತರಿಗೆ ಇದರಿಂದ ಅನುಕೂಲವಾಗುತ್ತದೆ ಎಂದು ತಮ್ಮ ವಾದವೇ?

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಭೂ ನ್ಯಾಯ ಮಂಡಲಿಗಳು ಇಂಜೆಂಕ್ಷನ್ ಕೊಡುವ ಅಧಿಕಾರವನ್ನು ಅಸಿಸ್ಟೆಂಟ್ ಕಮಿಷನರ್‌ರವರಿಗೆ ಕೊಡಿ ಎಂದು ಹೇಳುತ್ತಿದ್ದೇನೆ.

5—00 P.M.

MR. DEPUTY SPEAKER.—The Assistant Commissioner, is the Chairman of the Tribunal, he cannot work in isolation. He has to work as the Chairman with the other Members. Suppose if he is in a minority, his decision is nullified. He has to take the majority of the members of the Tribunal with him.

SRI H. T. KRISHNAPPA.—That is why I wanted that the Assistant Commissioner, who happens to be the Chairmen of the Tribunal, should be empowered to issue interlocutary orders so that the delay is minimised.

MR DEPUTY SPEAKER.—He can do so only as the Chairman of the Tribunal, it is the power of the Tribunal itself.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ಬೆಳೆಯನ್ನು ಕಟಾವು ಮಾಡತಕ್ಕ ಸಂಧರ್ಭದಲ್ಲಿ ಟ್ರಿಬ್ಯೂನಲ್‌ಗೆ ಅರ್ಜಿ ಹಾಕಿಕೊಳ್ಳುತ್ತಾನೆ. ಟ್ರಿಬ್ಯೂನಲ್ ಸೇರುವುದು ಒಂದು ತಿಂಗಳಾದರೆ, ಭೂ ಮಾಲೀಕ ಅರ್ಜಿ ಇತ್ಯರ್ಥ ವಾಗುವುದರೊಳಗಾಗಿ ಬೆಳೆಯನ್ನು ಕಟಾವು ಮಾಡಿಕೊಂಡು ಹೋಗಿರುತ್ತಾನೆ. What I mean is that the Chairman of the Tribunal should have the power of issuing injunction orders,

ಶ್ರೀ ಕೆ. ಬಿ. ಶಿವಯ್ಯ.—ಮುನ್ಸೀಫ್ ಕೋರ್ಟಿನಲ್ಲಿ ಲಾಯರುಗಳು ಇವರ ಪರ ಮತ್ತು ಅವರ ಪರ ವಾದಗಳನ್ನು ಇಡುತ್ತಾರೆ. ಮುನ್ಸೀಫ್ ಕೋರ್ಟು ಉತ್ತಮ ಎಂದು ಹೇಳುತ್ತೇನೆ.; it is far better than vesting that power with the Assistant Commissoner. ಅಸಿಸ್ಟೆಂಟ್ ಕಮೀಷನರ್ ಮುಂದೆ ಲಾಯರುಗಳು ಹೋಗುವುದಿಲ್ಲ; ಅವರಿಗೆ ಇಷ್ಟಬಂದಾಹಾಗೆ ತೀರ್ಮಾನ ಮಾಡುತ್ತಾರೆ. ನಾನ್ ಅಫಿಷಿಯಲ್‌ಗಳಾದರೆ, ಸ್ಥಳದ ನಿಜಾಂಶವನ್ನು ತಿಳಿದು ಕೊಂಡು ಇಂಜಕ್ಷನ್ ಆರ್ಡರ್ ಮಾಡುತ್ತಾರೆ, We are pleading that the interim power must vest with Body. A Body is better than an individual.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಭೂ ನ್ಯಾಯ ಮಂಡಲಿಯ ಅಧ್ಯಕ್ಷರೂ ಮತ್ತು ಸದಸ್ಯರೂ ಕೂಡ ಯಾರು ಅರ್ಜಿ ತೆಗೆದುಕೊಂಡು ಬೆಳೆಯನ್ನು ಪಡೆಯಬೇಕೆಂದು ಬರುತ್ತಾನೋ, ಅರ್ಜಿಯ ಹಾಗೂ ಅಲ್ಲಿಯ ಸತ್ಯಾಸತ್ಯಾತೆಯನ್ನು ಕೂಲಂಕಷವಾಗಿ ವಿಮರ್ಷೆ ಮಾಡಿ, ಅವರಿಗೆ ಹುಕುಂ ಕೊಡ ಬೇಕಾದುದು ನ್ಯಾಯ. ಅನೇಕ ಸಾದರ್ಭಗಳಲ್ಲಿ ಭೂ ನ್ಯಾಯ ಮಂಡಲಿಗಳು ಸೇರಿ ಅರ್ಜಿಯ ಬಗ್ಗೆ ವಿಚಾರಣೆ ಮಾಡಿ ತೀರ್ಮಾನ ಕೊಡುವುದರೊಳಗಾಗಿ ಭೂ ಮಾಲೀಕರು ಬೆಳೆಯನ್ನು ಕೊಯ್ದುಕೊಂಡು ಹೋಗಿರುತ್ತಾರೆ. ಇದು ಅವಸರದಲ್ಲಿ ಆಗಿರತಕ್ಕಂಥ ಹುಕುಂ ಆಗಿರುವುದರಿಂದ ಇವರ ಬಗ್ಗೆ ನಿಧಾನ ಮಾಡುವುದು ಸರಿಯಲ್ಲ. ಮುನ್ಸೀಫ್ ಕೋರ್ಟುಗಳಲ್ಲಿ ಅರ್ಜಿಯನ್ನು ಕೂಲಂಕಷವಾಗಿ ವಿಮರ್ಷೆ ಮಾಡಿ, ಆರ್ಡರ್ ಕೊಡಬೇಕಾದರೆ ವಿಳಂಬವಾಗುತ್ತದೆ. ಅರ್ಜಿಯನ್ನು ಮತ್ತು ಸಂಬಂಧಪಟ್ಟ ದಾಖಲೆಗಳನ್ನು ಕೊಟ್ಟಕೂಡಲೇ ಅಸಿಸ್ಟೆಂಟ್ ಕಮೀಷನರ್ ರವರು ತಹಶೀಲ್ದಾರ್‌ರವರ ರಿಪೋರ್ಟು ತರಿಸಿಕೊಂಡು ಬೇಕಾದರೂ ಮಾಡಲೀ ಅಥವಾ ಅವರೇ ಖುದ್ದಾಗಿ ನೋಡಿ ಬೇಕಾದರೂ ಮಾಡಲಿ.

MR. DEPUTY SPEAKER.—In fact in a large number of cases emergent meetings have been called.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಮೈಸೂರು, ಬೆಂಗಳೂರು ರಸ್ತೆಯಲ್ಲಿ ಒಂದು ದಿವಸಕ್ಕೆ 4-5 ಜನ ಮಂತ್ರಿಗಳು ಹೋಗುತ್ತಾರೆ, ಬರುತ್ತಾರೆ. ಅಲ್ಲಿ ಇರತಕ್ಕ ಅಸಿಸ್ಟೆಂಟ್ ಕಮೀಷನರ್ ಮತ್ತು ಡೆಪ್ಯೂಟಿಕಮೀಷನರ್ ಸಹ, ಆಡಳಿತದ ಹಿತದೃಷ್ಟಿಯಿಂದ ಅವರ ಹತ್ತಿರ ಹೋಗಬೇಕಾಗುತ್ತದೆ.

ಶ್ರೀ ಬಿ. ವಿ. ಕಕ್ಕಿಲಾಯ.—ಮಂತ್ರಿಗಳು ಹೋಗುತ್ತಾರೆ, ಬರುತ್ತಾರೆ ಎಂದು ಹೇಳುತ್ತೀರಾ. ನಮಗೆ ತಿಳಿದ ಮಟ್ಟಿಗೆ ನಮ್ಮ ಕಡೆಗೆ ಯಾರೂ ಹೋಗುವುದಿಲ್ಲ.

ಶ್ರೀ ಹೆಚ್. ಟಿ ಕೃಷ್ಣಪ್ಪ.—ನಾನು ಹೇಳಿದ್ದು ಮಂತ್ರಿಗಳ ಕಾರ್ಯಕ್ರಮ ಇದ್ದಾಗ ಅನಿವಾರ್ಯವಾಗಿ ಹೋಗಬೇಕಾಗುತ್ತದೆ. ಹೋಗುವುದು ತಪ್ಪು ಎಂದು ಹೇಳುವುದಿಲ್ಲ. ಒಂದು ದಿವಸ ವಿಳಂಬವಾದರೂ ಕೂಡ ರೈತರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಪ್ರಯತ್ನ ಮಾಡುತ್ತೇವೆಯೋ ಅದು ತಪ್ಪಿ ಹೋಗುತ್ತದೆ. ಇಬ್ಬರು ಸದಸ್ಯರೂ ಕೂಡದೆ ಹೋದರೂ ಟ್ರಿಬ್ಯೂನಲ್ ಸೇರುವ ಹಾಗಿಲ್ಲ. ಆದುದರಿಂದ ಮಾನ್ಯ ಸಚಿವರ ಗಮನಕ್ಕೆ ಈ ಸಂದರ್ಭದಲ್ಲಿ ನಾನು ತರುವುದೇನೆಂದರೆ, ಅಸಿಸ್ಟೆಂಟ್ ಕಮಿಷನರ್‌ರವರು ಅರ್ಜಿ ಹೋದ ಮೂರು ದಿವಸದಲ್ಲಿ ಖುದ್ದಾಗಿ ಸ್ಥಳ ಪರೀಕ್ಷೆ ಮಾಡಿ, ಅಥವಾ ತಹಶೀಲ್ದಾರರವರಿಂದ ರಿಪೋರ್ಟ್ ತರಿಸಿಕೊಂಡು ಆರ್ಡರ್ ಕೊಡುವಂತ ಏರ್ಪಾಡು ಮಾಡಬೇಕು. ಅದರ ಮೇಲೆ ಸ್ಕ್ರೂಟಿನಿ ಮಾಡುವುದಕ್ಕೆ ಹೈಯರ್ ಲೆವೆಲ್ ಅಥಾರಿಟಿ ಕ್ರಿಯೇಟ್ ಮಾಡಿ. ಟ್ರಿಬ್ಯೂನಲ್ ಸೇರುವ ತನಕ ಕಾಯುವುದು ಬೇಡ ಎನ್ನುವುದು ನನ್ನ ಸೂಚನೆ. ಮಾನ್ಯ ಮಂತ್ರಿಗಳಿಗೆ ಹೇಳುತ್ತಿದ್ದೇನೆ ನಿಮ್ಮ ಉದ್ದೇಶ ನಿಜವಾಗಿಯೂ ಸಂಪೂರ್ಣವಾಗಿ ಈಡೇರಬೇಕಾದರೆ ಅಸಿಸ್ಟೆಂಟ್ ಕಮೀಷನರ್‌ರವರಿಗೆ ಅಧಿಕಾರವನ್ನು ಕೊಡಿ, ಆರ್‌ಬಿಟ್ರೆರಿ ಆರ್ಡರ್ ಮಾಡುತ್ತಾರೆ ಎನ್ನುವ ಭೀತಿ ಇದ್ದರೆ, ಕೆಲವು ನಿಯಮಗಳನ್ನು ಇಡಿ.

ಶ್ರೀ ಕೆ. ಬಿ. ಶಿವಯ್ಯ.—ನಿಯಮಗಳು ಏನು ?

SRI H. T. KRISHNAPPA.—As soon as he receives the application, he should inspect the spot, conduct a preliminary enquiry and issue the order. ಅರ್ಜಿ ಕೊಟ್ಟು ಅದು ಟ್ರಿಬ್ಯೂನಲ್ ಸೇರಬೇಕಾದರೆ 15 ದಿವಸ ಆಗುತ್ತದೆ. ಅಸಿಸ್ಟೆಂಟ್ ಕಮೀಷನರ್‌ರವರಿಗೆ ಅಧಿಕಾರ ಕೊಟ್ಟರೆ ಕೂಡಲೇ ಆಗುತ್ತದೆ.

ನಾನು ಹೇಳುವುದನ್ನು ತಾವು ಸ್ವಲ್ಪ ಅರ್ಥಮಾಡಿಕೊಳ್ಳಬೇಕು. ಅಸಿಸ್ಟೆಂಟ್ ಕಮಿಷನರವರು ಎಕ್ಸ್ ಆಫಿಷಿಯೋ ಚೇರ್ಮನ್ ಆಫ್ ದಿ ಟ್ರಿಬ್ಯುನಲ್ ಮತ್ತು ಅಸಿಸ್ಟೆಂಟ್ ಕಮಿಷನರ್ ಈ ಎರಡು ಕೆಪ್ಯಾಸಿಟಿಗಳಲ್ಲಿ ಅವರು ಕೆಲಸ ಮಾಡತಕ್ಕ ಅಧಿಕಾರವನ್ನು ನಾವು ಈ ಆಕ್ಟ್ ಕೆಳಗೆ ಕೊಟ್ಟಿದ್ದೇವೆ. ಯಾರಾದರೂ ಅರ್ಜಿಯನ್ನು ಟ್ರಿಬ್ಯುನಲ್‌ಗೆ ಕೊಡತಕ್ಕ ಕಾಲದಲ್ಲಿ ಟ್ರಿಬ್ಯೂನಲ್ ಆಫ್ ದಿ ಚೇರ್ಮನ್ ಎಂದು ಕೊಡುತ್ತಾರೆಯೇ ವಿನಹ ಅಸಿಸ್ಟೆಂಟ್ ಕಮಿಷನರ್ ಎಂದು ಕೊಡುವುದಿಲ್ಲ. ಆದ್ದರಿಂದಲೇ ನಾನು ಅವರಿಗೆ ಈ ದಿಸೆಯಲ್ಲಿ ಪವರ್ಸ್ ಕೊಡಬೇಕು ಎಂದು ಹೇಳುತ್ತಿದ್ದೇನೆ. ಟ್ರಿಬ್ಯುನಲ್ ಡೆಫಿನೇಷನ್ ಏನು ಇದೆಯೆಂದರೆ, ಟ್ರಿಬ್ಯುನಲ್‌ನಲ್ಲಿ ಅಸಿಸ್ಟೆಂಟ್ ಕಮಿಷನರ್ ಅವರು ಮತ್ತು ನಾಲ್ಕು ಜನ ಸದಸ್ಯರಿರುತ್ತಾರೆ, ಅಸಿಸ್ಟೆಂಟ್ ಕಮಿಷನರ್‌ರವರು ಇದರ ಚೇರ್ಮನ್ ಆಗಿರುತ್ತಾರೆ.

Tribunal is one thing and the Chairman of the Tribunal is another thing. Therefore if there is anything to be corrected in the Act I wish the Hon'ble Minister makes suitable corrections so that this difficulty could be totally removed. ಆದ್ದರಿಂದ ಮಾನ್ಯ ಅಧ್ಯಕ್ಷರೇ, ಈ ಒಂದು ಸೂಚನೆಯನ್ನು ನಾನು ಮಾನ್ಯ ಸಚಿವರಿಗೆ ಕೊಟ್ಟು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎನ್. ಎಸ್. ಗುರುಸಿದ್ದಪ್ಪ (ಬಿಳಿಗೆರೆ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ತಂದಿರತಕ್ಕಂಥ ಈ ತಿದ್ದುಪಡಿಯ ಬಗ್ಗೆ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಇಂಥ ಸಣ್ಣ ಸಣ್ಣ ತಿದ್ದುಪಡಿಗಳನ್ನು ತರುವ ಬದಲು ಭೂಮಿಯ ಮೇಲೆ ಇರತಕ್ಕ ಹಕ್ಕನ್ನು ವಜಾ ಮಾಡಿ ಎಲ್ಲಾ ಭೂಮಿಯೂ ಸರ್ಕಾರಕ್ಕೆ ಸೇರಿದ್ದು ಪ್ರತಿಯೊಬ್ಬರೂ ಕೂಡ ಇದನ್ನು ಗೇಣಿ ಮಾಡತಕ್ಕದ್ದು, ಇದರ ಉತ್ಪತ್ತಿಯನ್ನು ಸರ್ಕಾರಕ್ಕೆ ಕೊಡತಕ್ಕದ್ದು ಸರಿಯೆಂದು ಮಾಡಿದರೆ ಈ ಗೊಂದಲ ಎಲ್ಲಾ ತಪ್ಪುತ್ತದೆ ಎಂದು ನನ್ನ ಅಭಿಪ್ರಾಯ. ಈಗ ಕೋರ್ಟಿಗೆ ಹೋಗಿ ಟೆಂಪರರಿ ಇಂಜಕ್ಷನ್‌ಗಳನ್ನು ಪಡೆಯುತ್ತಿದ್ದುದರಿಂದ ನ್ಯಾಯಾಲಯಗಳಿಂದ ಯಾರಿಗೂ ಅನ್ಯಾಯವಾಗುತ್ತಾ ಇರಲಿಲ್ಲ. ಇಲ್ಲಿಯವರೆಗೆ ಕೋರ್ಟಿನವರು ಪಹಣಿ ರಿಕಾರ್ಡುಗಳನ್ನು ನೋಡಿ ಇಂಜಂಕ್ಷನ್ ಕೊಟ್ಟು ಆಮೇಲೆ ಇದನ್ನು ಟ್ರಿಬುನಲ್‌ಗೆ ರೆಫರ್

ಮಾಡುತ್ತಿದ್ದರು. ಪಹಣಿ ಇದು ಗವರ್ನಮೆಂಟ್ ರಿಕಾರ್ಡ್, ಮತ್ತು ಪಬ್ಲಿಕ್ ಡಾಕ್ಯುಮೆಂಟ್ ಎಂದು ನಾವು ಹೇಳಬಹುದು. ಆದ್ದರಿಂದ ಲ್ಯಾಂಡ್ ಟ್ರಿಬುನಲ್‌ನವರು ಟೆಂಪರರಿ ಇಂಜಂಕ್ಷನ್ಸ್ ಕೊಡುವ ಅವಕಾಶ ಇರಲಿಲ್ಲ ಇದರಿಂದ ಕೆಲವು ಗೇಣಿದಾರರಿಗೆ ಅನ್ಯಾಯವಾಗಿರಬಹುದು, ಇಲ್ಲ ಎಂದು ನಾನು ಹೇಳುವುದಿಲ್ಲ; ಮತ್ತು ಗೇಣಿದಾರರಿಗೆ ಇದರಿಂದ ಅನ್ಯಾಯವಾಗಿದೆ ಎಂದು ನಾನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಭೂಮಾಲೀಕ ತನಗೆ ಇಂಜಂಕ್ಷನ್ ಬೇಕು ಎಂದು ಕೇಳುವುದು. ಗೇಣಿದಾರ ತನಗೆ ಇಂಜಂಕ್ಷನ್ ಬೇಕು ಎಂದು ಕೇಳುವುದು ಹೀಗೆ ಎರಡು ಕಡೆಯಿಂದಲೂ ಗೊಂದಲವಾಗಿದೆ ಟ್ರಿಬ್ಯುನಲ್ ಸಿಟಿಂಗ್‌ನಲ್ಲಿಲ್ಲವಿದ್ದರೆ ಅವರು ಯಾವ ಅಪ್ಲಿಕೇಷನ್ಸ್ ಅನ್ನೂ ರಿಸೀವ್ ಮಾಡಿಕೊಳ್ಳುವುದಿಲ್ಲ ಇದಕ್ಕೆ ಚೇರ್ಮನ್ ಅವರಿಗೆ ಪವರ್ಸ್ ಕೊಟ್ಟಿಲ್ಲ. ಭೂಮಾಲೀಕರು ತನ್ನ ಹತ್ತಿರ ಪಹಣಿ ಇದೆ, ರಿಕಾರ್ಡ್ಸ್ ಇದೆ, ಲೆವಿ ಕೊಟ್ಟಿದ್ದೇನೆ ಎಂದು ಅಪ್ಲಿಕೇಷನ್ ಕೊಟ್ಟರೆ, ಗೇಣಿದಾರನೂ ಅಪ್ಲಿಕೇಷನ್ ಕೊಟ್ಟರೆ ಟ್ರಿಬ್ಯುನಲ್‌ನವರು ಹೇಗೆ ತೀರ್ಮಾನ ಮಾಡುತ್ತಾರೆಂದು ನಾನು ಕೇಳಬೇಕಾಗುತ್ತದೆ. ಟ್ರಿಬ್ಯುನಲ್‌ನ ಸದಸ್ಯರು ಹಳ್ಳಿಯಲ್ಲಿರತಕ್ಕ ಇಂಥ ರೈತರೇ ಭೂಮಿ ಮಾಡುತ್ತಾರೆ, ಇವರು ಭೂಮಾಲೀಕರು ಎನ್ನುವುದು ಏನಾದರೂ ಗೊತ್ತಿರುತ್ತದೆಯೇ? ಡಾಕ್ಯುಮೆಂಟ್ಸ್‌ಗಳನ್ನು ವಿಮರ್ಶೆ ಮಾಡುವುದಕ್ಕೆ ಹೋದರೆ ಅನ್ಯಾಯವಾಗುತ್ತದೆ. ಸ್ಪಾಟ್ ಇನ್ಸ್‌ಪೆಕ್ಷನ್ ಮಾಡುತ್ತೀರಿ ಎಂದು ಇಟ್ಟುಕೊಳ್ಳೋಣ, ಎರಡು ಕಡೆಗೂ ಇಪ್ಪತ್ತು ಇಪ್ಪತ್ತು ಜನ ಸಾಕ್ಷಿ ಹೇಳುತ್ತಾರೆ, ಹೇಗೆ ತೀರ್ಮಾನ ಮಾಡುವುದು? ಹಳ್ಳಿಯಲ್ಲಿ ಕೆಲವರು ಪ್ರಭಾವಶಾಲಿಗಳು ಇರುತ್ತಾರೆ ಕೆಲವರು ಮೇಜರ್ ಕಮ್ಯೂನಿಟಿಯವರೂ ಕೆಲವರು ಮೈನರ್ ಕಮ್ಯೂನಿಟಿಯವರೂ ಇರುತ್ತಾರೆ. ಮೆಜಾರಿಟಿ ಕಮ್ಯೂನಿಟಿಯವರಿಗೆ ಸರಿಯಾದ ಸಾಕ್ಷಿ ಸಿಕ್ಕಿ ಮೈನಾರಿಟಿ ಕಮ್ಯೂನಿಟಿಯವರಿಗೆ ಹೇಳುವವರು ಇಲ್ಲವಿದ್ದರೆ ಮೈನರ್ ಕಮ್ಯೂನಿಟಿಯವರ ಗತಿ ಏನು? ಪ್ರಭಾವಶಾಲಿಗಳಾದವರು ಜಮೀನನ್ನು ಗೇಣಿದಾರರಿಂದ ಬಿಡಿಸಿಕೊಂಡು ಎಲ್ಲಾ ಮಾಡಿರತಕ್ಕುದ್ದು ಸನ್ನಿವೇಶಗಳೂ ಇವೆ. ಬರೀ ಭೂ ಮಾಲೀಕರೇ ಅನ್ಯಾಯ ಮಾಡುತ್ತಾರೆಂದು ನಾನು ಒಪ್ಪಿಕೊಳ್ಳುವುದಿಲ್ಲ. ಎಲ್ಲರೂ ಸತ್ಯವಂತರು ಇದ್ದಾರೆಂದು ನಾನು ಹೇಳುವುದಿಲ್ಲ ಅನೇಕ ತಪ್ಪುಗಳು ನಮ್ಮ ಕಣ್ಣಿಗೆ ಕಾಣುತ್ತಿವೆ ಒಬ್ಬ ಗೇಣಿದಾರ ನಾನು ಐದು ಎಕರೆ ಜಮೀನನ್ನು ಮಾಡುತ್ತಿದ್ದೇನೆ ಎಂದು ಅರ್ಜಿ ಕೊಟ್ಟ. ಅದಕ್ಕೆ ಸಂಬಂಧಪಟ್ಟ ಭೂಮಾಲೀಕನು ನಾನು ಡಿಕ್ಲೇರೇಷನ್ ಕೊಟ್ಟಿದ್ದೇನೆ, ನಾನೂ ಐದು ಎಕರೆ ಜಮೀನನ್ನು ಮಾಡುತ್ತಿದ್ದೇನೆ ಎಂದು ಅರ್ಜಿ ಕೊಟ್ಟ. ಆಗ ನಾವು ಸ್ಪಾಟ್ ಇನ್ಸ್‌ಪೆಕ್ಷನ್ ಮಾಡಿದಾಗ ಇದು ೨-೩ ಎಕರೆ ಎಂದು ಕಂಡುಬಂತು. ಡಿಕ್ಲರೇಷನ್ ಕೊಟ್ಟತಕ್ಷಣ ಸರಿಯೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಅನೇಕ ಜನ ಗೇಣಿದಾರರಿಗೆ ಅರ್ಜಿ ಕೊಟ್ಟರೆ ಆಸ್ತಿ ಸಿಕ್ಕುತ್ತದೆ ಎನ್ನುವ ಮನೋಭಾವ ಬಂದಿದೆ, ಮತ್ತು ಭೂಮಾಲೀಕರು ಪೇಚಾಟಕ್ಕೆ ಸಿಕ್ಕಿಕೊಳ್ಳುವ ಸಂದರ್ಭ ಬಂದಿದೆ.

ಇನ್ನು ರಿಟ್ ವಿಷಯದ ಬಗ್ಗೆ ಎರಡು ಮಾತನ್ನು ಹೇಳುತ್ತೇನೆ. ರಿಟ್ಸ್ ಅನ್ನು ಹೈಕೋರ್ಟ್ ಡಿಸೈಡ್ ಮಾಡುವುದಿಲ್ಲ ಹೈಕೋರ್ಟಿನವರು 'ಏನು ಮಾಡುತ್ತಾರೆಂದರೆ ಏನಾದರೂ ತಪ್ಪುಗಳು ಇದ್ದರೆ, ಸರಿಯಾಗಿ ತೀರ್ಮಾನ ಮಾಡಿಲ್ಲ, ಎಂದು ಟ್ರಿಬ್ಯುನಲ್‌ಗೆ ಮತ್ತೆ ರೆಫರ್ ಮಾಡುತ್ತಾರೆಯೇ ವಿನಹ ಭೂಮಿಯನ್ನು ಇಂಥವರಿಗೆ ಕೊಡಿ ಎಂದು ತೀರ್ಮಾನ ಮಾಡುವುದಿಲ್ಲ.

ಶ್ರೀ ಬಿ. ವಿ. ಕಕ್ಕಿಲಾಯ.—ರಿಟ್ ತೀರ್ಮಾನ ಮಾಡದಿದ್ದರೆ ಕಷ್ಟವಾಗುತ್ತದೆ. ಗೇಣಿದಾರರಿಗೆ ಆಗತಕ್ಕ ಅನೇಕ ತೊಂದರೆಗಳು ಇನ್ನು ಮುಂದೆ ಆಗಬಾರದು ಎಂದು ಈ ತಿದ್ದುಪಡಿಯನ್ನು ತಂದಿರುವುದು

ಶ್ರೀ ಎನ್. ಎಸ್ ಗುರುಸಿದ್ಧಪ್ಪ.—ನಿಜವಾಗಿಯೂ ಗೇಣಿದಾರರಿಗೆ ಅನ್ಯಾಯವಾಗುತ್ತದೆ ಎಂದು ಗೊತ್ತಿದ್ದಾಗ್ಯೂ ಕೂಡ ಭೂಮಾಲೀಕ ಡಿಕ್ಲರೇಷನ್ ಕೊಟ್ಟಿದ್ದರೆ ಏನು ಮಾಡಬೇಕು? ಇದು ಬಹಳ ಕಷ್ಟವಾಗಿದೆ. ಆದ್ದರಿಂದ ನಾನು ಹೇಳುವುದು ಈ ಗೊಂದಲ ಬೇಡ, ಭೂಮಿಯ ಹಕ್ಕನ್ನು ಕಿತ್ತು ಹಾಕಬೇಕು ಎಂದು. ಎಲ್ಲಾ ಸರ್ಕಾರಕ್ಕೆ ಹೋಗಿಬಿಡಲಿ, ಈ ಗೊಂದಲ ಬೇಡ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಸಭಾಧ್ಯಕ್ಷಣೀಯವರೇ, ಮಾನ್ಯ ಸಚಿವರು ತಂದಿರತಕ್ಕಂಥ ಭೂಸುಧಾರಣೆ ತಿದ್ದುಪಡಿಯ ವಿಧೇಯಕವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಅದಕ್ಕೆ ತರಬೇಕಾದಂಥ ಕೆಲವು ಅಂಶಗಳ ತಿದ್ದುಪಡಿಗಳಿಗೂ ಕೂಡ ನಾನು ಸಂಪೂರ್ಣವಾಗಿ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ. ನಮ್ಮ ಮಾನ್ಯ ಸ್ನೇಹಿತರಾದ ಗುರುಸಿದ್ದಪ್ಪನವರು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನನಗೆ ಗೊತ್ತಿರುವ ಹಾಗೆ ಮಾನ್ಯ ಸ್ನೇಹಿತರು ಹೇಳಿದ ರೀತಿಯಲ್ಲಿ ಇಡೀ ರಾಜ್ಯದಲ್ಲಿ ಭೂಮಾಲೀಕರು ಗೇಣಿದಾರರಿಗೆ ಭೂಮಿಯನ್ನು ಕೊಡತಕ್ಕ ವಿಚಾರದಲ್ಲಿ

ಸರಳವಾಗಿ ವರ್ತಿಸುವವರನ್ನು ನಾವು ಲೆಕ್ಕಮಾಡಿ ಹಿಡಿಯಬಹುದು. ಇದರ ಬಗ್ಗೆ ನನಗೆ ಚನ್ನಾಗಿ ಅನುಭವ ಇದೆ ಅದರಿಂದ ಗೇಣಿದಾರರ ವರ್ಗಕ್ಕೆ ಒಂದು ರೀತಿಯ ಅಪನಂಬಿಕೆ ಅವಿಶ್ವಾಸವನ್ನು ಅವರು ವ್ಯಕ್ತಪಡಿಸುವುದು ಅಷ್ಟು ಯುಕ್ತವಾದುದು ಅಲ್ಲ ಎಂದು ನಾನು ವಿನಯಪೂರ್ವಕವಾಗಿ ಹೇಳು ವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಡಾಕ್ಯುಮೆಂಟ್ಸ್ ಇದ್ದರೂ ಕೂಡ ಭೂಮಾಲೀಕರು ಏನೂ ಇಲ್ಲದೇ ಇರುವ ರೀತಿಯಲ್ಲಿ ಹೆದರಿಬಿಟ್ಟಿದ್ದಾರೆ ಎಂದು ಹೇಳುವ ಮಾತನ್ನು ನಾನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಡಾಕ್ಯುಮೆಂಟ್ಸ್ ಇಲ್ಲದೇ ಇದ್ದರೂ ಕೂಡ ಅನೇಕ ಭೂಮಾಲೀಕರು ಗೇಣಿದಾರರನ್ನು ಹೆದರಿಸಿತುವುದು ನನಗೆ ಚೆನ್ನಾಗಿ ಗೊತ್ತಿದೆ ನಾನೇ ಒಂದು ಕೇಸನ್ನು ಇತ್ಯರ್ಥ ಮಾಡಿದ್ದೇನೆ. ಭೂಮಾಲೀಕರ ಪರವಾಗಿ ಡಾಕ್ಯುಮೆಂಟ್ಸ್ ಬರೆದಿರುವುದನ್ನೂ ಕೂಡ ನೋಡಿದ್ದೇನೆ ಒಂದು ಕೇಸಿನಲ್ಲಿ ಏನು ಮಾಡಿದ್ದಾರೆ ಎಂದರೆ ಇದರ ಒರಿಜಿನಲ್ ಪಹಣಿಯನ್ನು ತಾಲ್ಲೂಕು ಆಫೀಸಿನಲ್ಲಿ ಹೋಗಿ ತೆಗೆಸಿ ನೋಡಿದಾಗ ಅದರಲ್ಲಿ ಕೆಂಪುಮಸಿಯಿಂದ ತಿದ್ದಿಬಿಟ್ಟಿದ್ದಾರೆ ಆ ಗೇಣಿದಾರ ಹೆಬ್ಬೆಟ್ಟು ಗುರುತಿನವನು. ಈ ರೀತಿ ಪ್ರಾಮಾಣಿಕನಾದ ಗೇಣಿದಾರನಿಗೆ ಏನು ಅರ್ಥ ವಾಗುತ್ತದೆ ಆ ಒರಿಜಿನಲ್ ಪಹಣಿಯನ್ನು ತೆಗೆದುನೋಡಿದಾಗ ಇವನ ಹತ್ತಿರ ಅದಕ್ಕೆ ಸಂಬಂಧಪಟ್ಟಂತ ಯಾವ ರೀತಿಯ ದಾಖಲಾತಿಗಳೂ ಇರಲಿಲ್ಲ. ಆ ಗೇಣಿದಾರ ಟ್ರಿಬ್ಯೂನಲ್‌ಗೆ ಬಂದಾಗ ನಾವು ಸ್ಪಾಟ್ ಇನ್‌ಸ್ಪೆಕ್ಷನ್ ಮಾಡಿದೆವು ಈ ರೀತಿಯಾಗಿ ಏನೂ ಡಾಕ್ಯುಮೆಂಟ್ಸ್ ಇಲ್ಲದೇ ಇರುವ ಗೇಣಿದಾರನ ಬಗ್ಗೆ ನಾವು ವಿಚಾರ ಮಾಡಿದಾಗ ನಿಜವಾದ ಗೇಣಿದಾರ ಇವನೇ ಆಗಿದ್ದನು, ನಂತರ ನಾವು ಆ ಕೇಸನ್ನು ಅವನಂತೆನೇ ಮಾಡಿದೆವು ಅನಂತರ ಆ ಭೂಮಾಲೀಕನು ಹೈಕೋರ್ಟಿಗೆ ಬಂದ, ಅವರು ನಮ್ಮನ್ನು ಎಕ್ಸ್‌ಪ್ಲನೇಷನ್ ಕೇಳಿದರು ಅದಕ್ಕೆ ನಾವು ತಕ್ಕ ಉತ್ತರವನ್ನೂ ಕಳುಹಿಸಿದೆವು ಈವೊತ್ತು ಭೂಮಾಲೀಕರಿಂದ ಈ ರೀತಿ ಯಾದಂಥಾ ಹೊಸ ಆಂದೋಳನ ನಡೆಯುತ್ತಾ ಇದೆ, ಆ ಗೇಣಿದಾರರನ್ನು ತಾಂಡವನೃತ್ಯ ಆಡಿಸುತ್ತಿದ್ದಾರೆ ಅವರ ರಕ್ತ ಹೀರುತ್ತಿದ್ದಾರೆ, ಅವರನ್ನು ತಿರುಗಮುರುಗವಾಗಿ ಆಟವಾಡಿಸುತ್ತಿದ್ದಾರೆ. ಅವನಿಗೆ ಸಲ್ಲ ಬೇಕಾದ ಹಕ್ಕನ್ನು ಈ ಭೂಮಾಲೀಕರು ದೊರಕಿಸಿಕೊಡುತ್ತಾ ಇಲ್ಲ ಈಗ ಇಂಥಾದ್ದನ್ನೆಲ್ಲಾ ಕಾರ್ಯಗತ ಮಾಡಬೇಕಾಗಿದೆ. ಆ ಗೇಣಿದಾರರ ಬಾಯಿಗೆ ಈ ಭೂಮಾಲೀಕರು ಬೀಗ ಹಾಕಿದ್ದಾರೆ. ಈ ಒಂದು ಭೀತಿಗೆ ಗೇಣಿದಾರರು ಭೂಮಾಲೀರಿಗೆ ಒಳಗಾಗಿದ್ದಾರೆ. ಶ್ರೀಮಾನ್ ಎನ್. ಎಸ್. ಗುರುಸಿದ್ದಪ್ಪ ನವರು ಈಗ ಈ ಬಗ್ಗೆ ಏನು ಮಾತನಾಡಿದರೋ ಅದರಲ್ಲ ಒಂದು ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ ಎಲ್ಲಾ ಭೂಮಾಲೀಕರು ಆರೀತಿ ದೌರ್ಜನ್ಯಪ್ರಿಯರಾಗಿದಿದ್ದಾರೆ ಅಂತ ಹೇಳುವುದನ್ನು ನಾನು ಒಪ್ಪುವುವಿಲ್ಲ ಅದರಲ್ಲಿ ಯೋಗ್ಯರಾದಂಥಾ ಭೂಮಾಲೀಕರೂ ಕೂಡ ಇದ್ದಾರೆ. ಇನ್ನು ಕೆಲವರು ನಮ್ಮ ಟೆನೆನ್ಸಿ ಆಕ್ಟ್ ಬರುವುದಕ್ಕೆ ಮುಂಚೆ ಅಥವಾ ಆ ವರ್ಷವೇ ಗೇಣಿದಾರರಿಗೇನೋ ಬಿಟ್ಟುಕೊಟ್ಟಿರುವಂಥಾ ಒಳ್ಳೇ ಜನರು ಇದ್ದಾರೆ. ಇದು ನನ್ನ ಅನುಭವದ ವಿಚಾರ. ನಮ್ಮ ರಾಜದಲ್ಲಿ ಒಳ್ಳೆಯ, ಯೋಗ್ಯ ರಾದಂಥ ಭೂಮಾಲೀಕರು ಇದ್ದಾರೆ, ಇಲ್ಲ ಅಂತ ಹೇಳುವುದಿಲ್ಲ. ನಿಮಗೆ ಉದಾಹರಣೆ ಹೇಳುವುದಾದರೆ ಗೇಣಿದಾರ ಬರೆದುಕೊಡಬೇಕಾದ ಫಾರಂ ನಂಬರ್ ೭ ಏನು ಇದೆಯೋ ಅದರಲ್ಲಿ ಭರ್ತಿ ಮಾಡುವಾಗ ಒಂದು ಎಕರೆ ಅಡಕೆ ತೋಟವನ್ನು ಬರೆಯುವುದನ್ನು ಬಿಟ್ಟುಬಿಟ್ಟಿದ್ದ ಕೊನೆಗೆ ಆ ಭೂಮಾಲೀಕನೇ ನಕ್ಕುಬಿಟ್ಟು ಈ ರೀತಿ ಬರೆಯದೇ ಬಿಟ್ಟುಬಿಟ್ಟಿದ್ದ ತೋಟವನ್ನು ಬರೆಸಿ ನಂತರ ಅವನ ಹೆಸರಿಗೆ ಖಾತೆ ಯನ್ನೂ ಕೂಡ ಮಾಡಿಸಿಕೊಟ್ಟ. ನಾನು ಅವರನ್ನು ಇದಕ್ಕಾಗಿ ಅಭಿನಂದಿಸಿದೆ ಮತ್ತು ಈ ಬಗ್ಗೆ ಮೆಚ್ಚುಗೆ ಯನ್ನೂ ಕೂಡ ವ್ಯಕ್ತಪಡಿಸಿದೆ. ಶ್ರೀಮಾನ್ ಎನ್. ಎಸ್. ಗುರುಸಿದ್ದಪ್ಪನವರಿಗೆ ನಾನು ಹೇಳುವುದಾದರೆ ಇಂಥಾ ಒಳ್ಳೆಯವರು ನಮ್ಮ ರಾಜ್ಯದಲ್ಲಿ ಎಷ್ಟು ಜನ ಸಿಕ್ಕುತ್ತಾರೆ ಅನ್ನುವುದನ್ನು ಹೇಳಬೇಕಾದರೆ ಆರಿಸಿ ಹೇಳಬೇಕಾಗುತ್ತದೆ. ನನ್ನ ಕ್ಷೇತ್ರದಲ್ಲಿ ತೆಗೆದುಕೊಂಡರೆ ೮–೧೦ ಜನ ಸಿಗಬಹುದು. ಆದರೆ ೧೦೦ಕ್ಕೆ ೯೦ರಷ್ಟು ಜನ ಭೂಮಾಲೀಕರು ಯೋಗ್ಯರು ಇರುವುದಿಲ್ಲ. ನನ್ನ ಕ್ಷೇತ್ರದಲ್ಲಿ ಮನೆ ಮನೆಗೂ ಹೋಗಿ ಗೇಣಿದಾರರಿಂದ ಡಿಕ್ಲರೇಷನ್ ಹಾಕಿಸುವುದಕ್ಕೆ ಕಷ್ಟಪಟ್ಟಿದ್ದೇನೆ. ಈವೊತ್ತು ಕೂಡ ಎಷ್ಟೋ ಜನ ಅರ್ಜಿ ಹಾಕದೇ ಇರತಕ್ಕಂಥವರು ಇದ್ದಾರೆ ಎಷ್ಟೋ ಭೂಮಾಲೀಕರು ಆ ಗೇಣಿದಾರರ ಕೈಯಲ್ಲಿ ಇನ್ನೂ ಅರ್ಜಿ ಹಾಕಿಸಿಲ್ಲಾ ಇನ್ನು ಇದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಈವೊತ್ತಿನ ದಿವಸ ಗೇಣಿದಾರ ರಕ್ಷಣೆ ಬಗ್ಗೆ ಇಂಜಂಕ್ಷನ್ ಕೊಡುವುದಕ್ಕೆ ಈ ಟ್ರಿಬ್ಯೂನಲ್‌ಗೆ ಅಧಿಕಾರ ಕೊಟ್ಟಿರುವುದು ಯೋಗ್ಯವಾದ ವಿಚಾರ ಹಾಗೂ ಇದು ಪ್ರಶಂಸನೀಯವಾದ ವಿಚಾರ. ಮೊದಲು ಏನು ಆಗುತ್ತಿತ್ತು ಎಂದರೆ ಈ ಟ್ರಿಬ್ಯೂನಲ್ ನಡೆಯುತ್ತಾ ಇರುವಾಗಲೇ ಸುಮಾರು ಬಹಳ ಜನ ನ್ಯಾಯಾಲಯಕ್ಕೆ ಹೋಗಿ ಸ್ಟೇ ಆರ್ಡರ್ ತರುತ್ತಿದ್ದರು. ಅವರು ಏನು ಹೇಳುತ್ತಿದ್ದರು ಎಂದರೆ ಈ ಟ್ರಿಬ್ಯೂನಲ್ ಏನು ಮಾಡುತ್ತದೆ ಸ್ಟೇ ಆರ್ಡರು ತಂದಿದ್ದೇನೆ ನೋಡಿ ಅಂತ ಹೇಳುತ್ತಿದ್ದರು. ಅಂಥಾ ಕೇಸುಗಳನ್ನು ನಾವು

ಬಿಟ್ಟಿದ್ದೇವೆ. ಹೌದು ಆ ಬಗ್ಗೆ ನಾವು ಏನೂ ಮಾಡುವ ಹಾಗಿಲ್ಲ ಇದರಿಂದಾಗಿ ಈ ಟ್ರಿಬ್ಯೂನಲ್ಲನ್ನೇ ಒಂದು ದ್ವಂದ್ವ ಪರಿಸ್ಥಿತಿಗೆ ಸಿಕ್ಕಿಸುತ್ತಿದ್ದರು. ಒಂದು ಸಂಧಿಗ್ಧ ಪರಿಸ್ಥಿತಿಗೆ ಸಿಕ್ಕಿಸುತ್ತಿದ್ದರು. ಇದನ್ನು ಒಂದು ರೀತಿಯಾದ ಬಿಕ್ಕಟ್ಟಿಗೆ ತಂದಿಡುತ್ತಿದ್ದರು. ನಾವು ಈ ಗೇಣಿದಾರರ ಬಗ್ಗೆ ಏನೊಂದು ಸಹಾಯ ಮಾಡುವುದಕ್ಕೆ ಹೊರಟಿದ್ದೇವೆಯೋ ಮತ್ತು ಈವೊತ್ತು ಸರ್ಕಾರ ಇವರ ಬಗ್ಗೆ ಸಹಾಯ ಮಾಡಬೇಕು ಅನ್ನುವ ಉದ್ದೇಶದಿಂದ ಈ ಬಗ್ಗೆ ಏನೊಂದು ಕಾನೂನು ಮಾಡಿದೆಯೋ ಆ ಉದ್ದೇಶಕ್ಕೇನೆ ಭಂಗ ವಾದಂಥ ಒಂದು ನಿರ್ಣಯವನ್ನು ಈ ಶ್ರೇಷ್ಠ ನ್ಯಾಯಾಲಯ ಕೊಟ್ಟರೆ ನಾವು ಏನು ಮಾಡಬೇಕು? ಇದನ್ನು ತಾವೇ ವಿಚಾರ ಮಾಡಬೇಕು. ಇದರಲ್ಲಿ ಪ್ರಾಮಾಣಿಕರು ಯಾರು. ಅಪ್ರಮಾಣಿಕರು ಯಾರು ಅಂತ ಹೇಳುವುದಕ್ಕೆ ಮೊದಲು ಕಷ್ಟವಾಗುತ್ತಿತ್ತು. ಈಗ ತಂದಿರತಕ್ಕಂಥಾ ಒಂದು ಮಸೂದೆಯಿಂದ ಈಗ ನಾವು ಈ ಒಂದು ಸಂದಿಗ್ಧ ಪರಿಸ್ಥಿತಿಯಿಂದ ಪಾರಾಗಿದ್ದೇವೆ. ಇನ್ನು ಈ ಕೆಲಸವನ್ನು ಸುಗಮ ವಾಗಿ ಮಾಡುವುದಕ್ಕೆ ಮತ್ತು ಗೇಣಿದಾರರಿಗೆ ನ್ಯಾಯ ಒದಗಿಸುವುದನ್ನು ಮಾಡಿಕೊಡುವ ದೃಷ್ಟಿಯಿಂದ ಈಗ ಒಂದು ಕಾನೂನನ್ನು ಮಾಡಿ ಈ ಟ್ರಿಬ್ಯೂನಲ್‌ಗೆ ವಹಿಸಿ ಕೊಟ್ಟಿರುವುದು ಒಳ್ಳೆಯದು ಎಂದು ಹೇಳುತ್ತೇನೆ. ಇನ್ನು ನಮ್ಮ ಹಂಗಾಮಿ ನಾಯಕರಾದ ಶ್ರೀಮಾನ್ ಹೆಚ್. ಟಿ ಕೃಷ್ಣಪ್ಪನವರು ಈ ಬಗ್ಗೆ ಏನು ಮಾತನಾಡಿದರೋ ಅವರ ವಾದವನ್ನು ನಾನು ಒಪ್ಪುವುದಕ್ಕೆ ಸಾಧ್ಯವಾಗುವುದಿಲ್ಲ. ಕೆಲವು ಟ್ರಿಬ್ಯೂನಲ್‌ನಲ್ಲಿ ಅಲ್ಲಿ ಇಲ್ಲಿ ಕೆಲವು ತಪ್ಪುಗಳು ಆಗಿರಬಹುದು. ಇಲ್ಲಿ ಅಂತ ಹೇಳುವುದಿಲ್ಲ.

SRI H. T. KRISHNAPPA.—Honesty is not the monopaly of the Tribunal.

ಶ್ರೀ ಕೋಣಂದೂರು ಲಿಂಗಪ್ಪ.—ಅದರಲ್ಲೂ ಒಳ್ಳೆಯವರು ಇದ್ದಾರೆ. ಇಲ್ಲ ಎಂದು ಹೇಳುವುದಿಲ್ಲ ನಿಮಗೆ ಹೇಳುವುದಾದರೆ ನಮ್ಮ ಜಿಲ್ಲೆಯಲ್ಲೇ ಇಬ್ಬರು ಛೇರ್ಮನ್ನರು ಇದ್ದಾರೆ. ಅದರಲ್ಲಿ ಒಬ್ಬರಿಗಿಂತ ಒಬ್ಬರು ಒಳ್ಳೆಯವರು ಇದ್ದಾರೆ. ಹಾಗೆಯೇ ಆಫೀಸರ್ಸ್‌ನಲ್ಲೂ ಕೂಡ ಒಳ್ಳೆಯ ಆಫೀಸರುಗಳು ಇದ್ದಾರೆ ಇಲ್ಲ ಎಂದು ಹೇಳುವುದಿಲ್ಲ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ನಾನು ಹೇಳಿದ್ದು ಅಸಿಸ್ಟೆಂಟ್ ಕಮೀಷನರು ತಪ್ಪು ಮಾಡಿದರೆ ಆ ಸರ್ಕಾರೀ ಅಧಿಕಾರಿ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಕಾನೂನು ಇದೆ, ಅದೇ ಟ್ರಿಬ್ಯೂನಲ್‌ನವರು ತಪ್ಪು ಮಾಡಿದರೆ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ—ನಿಮಗೆ ಹೇಳುವುದಾದರೆ ನನ್ನ ಕ್ಷೇತ್ರದಲ್ಲಿ ಯಾವನಾದರೂ ಒಬ್ಬ ಗೇಣಿದಾರನಿಗೆ ಅನ್ಯಾಯ ಮಾಡಿದರೆ ಅದನ್ನು ಲಕ್ಷಾಂತರ ಜನ ನೋಡುತ್ತಾರೆ. ಮುಂದೆ ನಾನು ಸಾರ್ವಜನಿಕ ಜೀವನದಲ್ಲಿ ಇರಬೇಕಾದರೆ ಆ ಜನಗಳ ಮುಖ ನೋಡಿಕೊಂಡು ಮುಂದಿನ ಜೀವನವನ್ನು ನಡೆಸಬೇಕಲ್ಲವೇ ? ಅದೂ ಅಲ್ಲದೆ ಈಗಿನ ಜನರು ಅಷ್ಟು ಏನೂ ದಡ್ಡರಲ್ಲ, ಅಷ್ಟು ಅಜ್ಞಾನವಂತರೂ ಅಲ್ಲ, ಅವರು ಅವಿದ್ಯಾವಂತರಾಗಿ ಇರಬಹುದು ಆದರೆ ಅವರು ಎಲ್ಲವನ್ನೂ ಪರೀಕ್ಷೆ ಮಾಡುತ್ತಾರೆ. ಎಲ್ಲವನ್ನೂ ಸರಿಯಾಗಿ ನೋಡುತ್ತಾರೆ, ಅಂಥ್ಯಾದೇನಾದ್ದರೂ ತಪ್ಪು ಇದ್ದಲ್ಲಿ ಒರೆಹಚ್ಚುತ್ತಾರೆ. ಅವರಿಗೆ ಬೇಕಾದಂಥಾ ಪ್ರಾವಿಷನ್ ಅನ್ನು ಇದರಲ್ಲಿ ಮಾಡಿದ್ದೀರಿ. ಇದನ್ನು ಪುನರ್ವಿಮರ್ಷೆ ಮಾಡುವುದಕ್ಕೆ ಈವೊತ್ತು ಅವರಿಗೆ ಅವಕಾಶ ಇದೆ ಈ ದೃಷ್ಟಿಯಿಂದ ಈ ಟ್ರಿಬ್ಯೂನಲ್‌ಗೆ ಈಗ ಏನು ಒಂದು ಅಧಿಕಾರ ಕೊಟ್ಟಿದ್ದೀರೋ ಅದು ಬಹಳ ಶ್ಲಾಘನೀಯವಾದುದು ಮತ್ತು ಅದರಿಂದ ಈ ಗೇಣಿದಾರರಿಗೆ ಹೆಚ್ಚಿನ ಪ್ರಯೋಜನವನ್ನು ಒದಗಿಸಿ ಕೊಡುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾನು ಹೇಳುತ್ತೇನೆ ಆದರೆ ಶ್ರೀಮಾನ್ ಹೆಚ್. ಟಿ. ಕೃಷ್ಣಪ್ಪನವರು ಹೇಳಿದ ಹಾಗೆ ಅಸಿಸ್ಟೆಂಟ್ ಕಮೀಷನರಿಗೇನೇ ಅಧಿಕಾರ ಕೊಟ್ಟರೆ ಹಿಂದೆ ನಾವು ಯಾವರೀತಿ ಮಾಡುತ್ತಿದ್ದೆವೋ ಅದೇರೀತಿಯಲ್ಲಿ ಕೆಲಸ ಆಗುತ್ತದೆ, ಆಫೀಸರ್ಸ್‌ನಲ್ಲಿ ಎಲ್ಲರೂ ಕೆಟ್ಟವರು ಎಂದು ಹೇಳುವುದಿಲ್ಲ ಅದರಲ್ಲಿ ಒಬ್ಬೊಬ್ಬರು ಒಳ್ಳೆಯವರೂ ಇದ್ದಾರೆ. ಆದರೆ ಅವರು ಜಡ್ಜ್‌ಮೆಂಟ್ ಬರೆಯುವುದಕ್ಕೂ ಈ ಟ್ರಿಬ್ಯೂನಲ್‌ನವರ ಒಂದು ಅಭಿಪ್ರಾಯ ಬರೆಯುವುದಕ್ಕೂ ಅಜಗಜಾಂತರ ವ್ಯತ್ಯಾಸ ಇದೆ. ನನ್ನ ಅನುಭವದ ಪ್ರಕಾರ ಹೇಳಬೇಕಾದರೆ ಒಂದು ಹಳ್ಳಿಯಲ್ಲಿ ಗೇಣಿ ದಾರನ ಬಗ್ಗೆ ಒಂದು ವಾದ ಬಂತು ಆ ಗದ್ದೆಯಲ್ಲಿ ಭತ್ತವನ್ನು ಕುಯ್ಯುವುದಕ್ಕೆ ಹೋದಾಗ ಹೋದೆ ಆ ಗೇಣಿದಾರನ ಬಗ್ಗೆ ವಿಚಾರ ಮಾಡಿದಾಗ ನನಗೆ ಅನಿಸಿತು, ಈತನೇ ಒಳ್ಳೆಯವನು ಮತ್ತು ಸತ್ಯವಂತನು ಅಂತ ತಿಳಿದುಕೊಂಡು ಬಂದೆ. ಈ ರೀತಿಯಾಗಿ ಟ್ರಿಬ್ಯೂನಲ್‌ನಲ್ಲಿ ೩-೪ ಜನ ಇರುತ್ತಾರೆ ಅವರು ಪರಿಶೀಲನೆ ಮಾಡಿ, ಸ್ಪಾಟ್ ಇನ್‌ಸ್ಪೆಕ್ಷನ್ ಮಾಡಿ ನೋಡಿದಾಗ ಸತ್ಯ ಎಷ್ಟೋ ಬರುತ್ತದೆ. ಈ ಟ್ರಿಬ್ಯೂ ನಲ್ಲಿರುವ ೪ ಜನ ಸದಸ್ಯರೂ ಕೂಡ ಕೂತು ಒಂದು ಇತ್ಯರ್ಥಕ್ಕೆ ಬಂದು ಅದರ ಬಗ್ಗೆ ನಿರ್ಣಯ ಕೊಡು ವುದು ಯೋಗ್ಯವಾದುದೇ ಹೊರತು ಮತ್ತೇನೂ ಅಲ್ಲ.

ಇನ್ನು ಈ ಮೀಟಿಂಗ್ ಬಗ್ಗೆ ಹೇಳುವುದಾದರೆ ನಮ್ಮ ತಾಲ್ಲೂಕಿನಲ್ಲಿ ೧೦ ದಿವಸ ಮೀಟಿಂಗ್ ಇಟ್ಟು ಕೊಳುತ್ತೇನೆ. ಇನ್ನೊಂದು ಮೀಟಿಂಗಿಗೆ ೨೦ ದಿವಸ ಟೈಂ ಇರುತ್ತದೆ. ಆ ಟೈಂನಲ್ಲಿ ಈ ಕೇಸಿನ ಬಗ್ಗೆ ಏನಾದರೂ ಅನ್ಯಾಯ ನಡೆದಿದ್ದರೆ ಅವರಿಗೆ ರಕ್ಷಣೆ ಕೊಡುವುದಕ್ಕೆ ಈ ಪವರನ್ನು ಟ್ರಿಬ್ಯೂನಲ್‌ಗೆ ಇರಬೇಕು. ಇಲ್ಲದಿದ್ದರೆ ಕಷ್ಟವಾಗುತ್ತದೆ. ಹಾಗೆ ಅನ್ಯಾಯ ಮಾಡಿದ್ದರೆ ಪ್ರಯೋಜನ ಪಡೆಯುತಕ್ಕಂಥಾವರು ಒಂದು ಸಾವಿರಕ್ಕೆ ಇಬ್ಬರು ಇರಬಹುದು ನಾವು ಟ್ರಿಬ್ಯೂನಲ್ ಮೆಂಬರ್ ಆಗಿರಬಹುದು. ನಾವು ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿರಬಹುದು. ಯಾರೇ ಆಗಲಿ ಈ ಗೇಣಿದಾರರ ಸಂರಕ್ಷಣೆ ಬಗ್ಗೆ ನ್ಯಾಯ ಒದಗಿಸಿಕೊಡುವುದಕ್ಕೆ ಬದ್ಧರಾಗಿರುತ್ತಾರೆ. ಆದರಲ್ಲೇನೂ ಶ್ರೀಮಾನ್ ಹೆಚ್. ಟಿ ಕೃಷ್ಣಪ್ಪ ನವರಿಗೆ ಗಾಬರಿ ಬೇಡ ಎಂದು ನಾನು ಅವರನ್ನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ನಮ್ಮ ಸ್ನೇಹಿತರು ಒಬ್ಬರು ಮುಜರಾಯಿ ಜಮೀನಿನ, ಇನಾಂದಾರರ ಜಮೀನಿನ ಬಗ್ಗೆ ಮಾತನಾಡಿದ್ದಾರೆ. ಇದು ಮುಖ್ಯವಾದ ವಿಷಯ. ಇದರಲ್ಲಿ ಇನ್ನೇ ಒಂದು ಭಾಗ ಇನಾಂ ಗೇಣಿದಾರರು ಏನು ಇದ್ದಾರೆ ಅವರ ವಿಚಾರ ಏನು ಇದೆ ಅದನ್ನು ಪರಿಹಾರ ಮಾಡುವುದಕ್ಕೆ ಟ್ರಿಬ್ಯೂನಲ್‌ಗೆ ಪೂರ್ತಾ ಅಧಿಕಾರ ಕೊಡಬೇಕು ಎಂದು ನಾನು ಅಪೇಕ್ಷೆ ಪಡುತ್ತೇನೆ. ಅವರು ಏನು ಹೇಳುತ್ತಾರೆ ಎಂದರೆ ಸಾಹುಕಾರರ ಜಮೀನು ಮಾಡಿರತಕ್ಕಂಥ ಗೇಣಿದಾರರನ್ನು ಬಿಡುಗಡೆ ಮಾಡಿದ್ದೀರಿ, ಸರ್ಕಾರದ ಗೇಣಿ ದಾರರನ್ನು ಹಾಗೆಯೇ ಇಟ್ಟುಕೊಂಡಿದ್ದೀರಿ ಅಂತ ಹೇಳುತ್ತಾರೆ,

5-30 P.M

ಇದನ್ನು ಮೊದಲು ವಿಚಾರ ಮಾಡಬೇಕಾಗಿದೆ. ಮೊದಲು ಸರ್ಕಾರ ತನ್ನ ಗೇಣಿದಾರರನ್ನು ಬಿಡುಗಡೆ ಮಾಡಿ ಅವರಿಗೆ ಆ ಭೂಮಿಯ ಮಾಲೀಕತ್ವವನ್ನು ಕೊಡಬೇಕಾಗಿತ್ತು ; ಆದರೆ ಈಗ ತಿರುಗಮುರುಗ ವಾಗಿದೆ. ಇದು ಸರಿಯಲ್ಲ ; ತಕ್ಷಣವೇ ನಮ್ಮ ಟ್ರಿಬ್ಯೂನಲ್‌ಗಳಿಗೆ ಈ ಮುಜರಾಯಿ ಮತ್ತು ಇನಾಂ ಜಮೀನುಗಳಿಗೆ ಸಂಬಂಧಪಟ್ಟಂತೆ ಗೇಣಿದಾರರು ಯಾರು ಯಾರು ಇದ್ದಾರೆ ಅವರುಗಳ ಕೇಸ್‌ಗಳನ್ನು ಸಹ ಇತ್ಯರ್ಥ ಮಾಡುವಂತಹ ಪೂರ್ತಾ ಹೊಣೆಗಾರಿಕೆಯನ್ನು ಕೊಡಬೇಕು ಆಗ ಎಲ್ಲ ಗೇಣಿದಾರರಿಗೂ ಒಂದೇ ರೀತಿಯ ನ್ಯಾಯವನ್ನು ದೊರಕಿಸಿಕೊಡುವುದಕ್ಕೆ ಸಾಧ್ಯವಾಗುತ್ತದೆ. ಮುಖ್ಯವಾಗಿ ಈಗ ಬಂದಿರುವ ತಿದ್ದುಪಡಿಗಳು ಮತ್ತು ಇನ್ನು ಮುಂದೆ ಬರತಕ್ಕಂಥ ತಿದ್ದುಪಡಿಗಳು ಏನಿವೆ. ಅವುಗಳಿಂದ ನಾವು ಒಳ್ಳೆಯ ಕೆಲಸ ಮಾಡುವುದಕ್ಕೆ ಅವಕಾಶವಾಗುತ್ತದೆ. ನಮ್ಮ ರಾಷ್ಟ್ರದ ಇತಿಹಾಸದಲ್ಲಿ ನಾವು ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದೇವೆಂಬುದಕ್ಕೆ ಈ ತಿದ್ದುಪಡಿಗಳೇ ಸಾಕ್ಷಿಯಾಗಿವೆ ಸರ್ಕಾರದವರು ಒಳ್ಳೆಯದನ್ನು ಮಾಡಿದರೆ, ಒಳ್ಳೆಯದನ್ನು ಮಾಡಿದ್ದಾರೆಂದು ನಾವು ಹೇಳದೇಹೋದರೆ ಅದು ಸರಿ ಯಾಗುವುದಿಲ್ಲ ; ಈಗ ಧೈರ್ಯವಮಾಡಿ ಭೂಪಂಚಾಯಿತಿಗಳು ಕೆಲಸ ಮಾಡುವುದಕ್ಕೆ ಅಡ್ಡಿಯಾಗುವುದನ್ನು ತಪ್ಪಿಸಲು ಈ ತಿದ್ದುಪಡಿಗಳನ್ನು ತಂದಿದ್ದೀರಿ ; ಈಗ ಅನುಭವದ ಒಂದು ಆಧಾರದ ಮೇಲೆ ಈ ತಿದ್ದು ಪಡಿಗಳನ್ನು ಏನು ತಂದಿದ್ದೀರಿ, ಅದೇರೀತಿ ಇನ್ನು ಮುಂದೆಯೂ ಸಹ ನಾವು ಕೆಲಸ ಮಾಡುವ ಕಾಲ ಕಾಲಕ್ಕೆ ಏನಾದರು ಅಡ್ಡಿಗಳು ಬಂದಾಗ ಅವುಗಳನ್ನು ನಿವಾರಣೆ ಮಾಡುವ ಸಲುವಾಗಿ ತಿದ್ದುಪಡಿಗಳನ್ನು ತರಬೇಕು ; ಇಲ್ಲದಿದ್ದರೆ ನಮ್ಮ ಈ ಕಾನೂನಿನ ಮೂಲ ಉದ್ದೇಶ ಏನಿದೆ, ಅದು ಸಾರ್ಥಕವಾಗುವುದಿಲ್ಲ; ಪ್ರತಿಯೊಬ್ಬ ಗೇಣಿದಾರನ ಮನಸ್ಸಿನಲ್ಲಿಯೂ ಒಳ್ಳೆಯ ಭಾವನೆ ಬರುವಂತಹ ರೀತಿಯಲ್ಲಿ ನಾವುಗಳು ಕೆಲಸ ಮಾಡಬೇಕಾಗಿದೆ. ಈ ಭೂಲೋಕ ಹುಟ್ಟಿದಾಗಿನಿಂದ ಇಲ್ಲಿಯವರೆಗೆ ಏನು ನಡೆದುಕೊಂಡು ಬರುತ್ತಿತ್ತು ಎಂದರೆ ಯಾರಾದರು ದರಖಾಸ್ತು ಅರ್ಜಿ ಹಾಕಿಕೊಂಡರೆ ಅನೇಕ ವರ್ಷಗಳ ಕಾಲ ಎಲ್ಲ ಕಡೆಗೂ ಸುತ್ತಬೇಕಾಗುತ್ತಿತ್ತು ; ಆ ರೀತಿ ಸುತ್ತಾಡಿದರೂ ಸಹ ಕೆಲವು ಸಂದರ್ಭಗಳಲ್ಲಿ ಅರ್ಜಿ ಹಾಕಿಕೊಂಡ ರೈತ ತನ್ನ ಜೀವಮಾನದಲ್ಲಿಯೇ ಖಾತೆ ಮಾಡಿಸಿಕೊಳ್ಳುವುದು ಕಷ್ಟವಾಗುತ್ತಿತ್ತು ; ಆದರೆ ಈಗ ಅಷ್ಟು ನಿಧಾನವಾಗುವುದಕ್ಕೆ ಅವಕಾಶವಿಲ್ಲ ; ಲ್ಯಾಂಡ್ ಟ್ರಿಬ್ಯೂನಲ್ ಅವರು ಕೇಸ್‌ಗಳನ್ನು ಜಾಗ್ರತೆ ತೀರ್ಮಾನ ಮಾಡಿ ಗೇಣಿದಾರರ ಹೆಸರಿಗೆ ಖಾತೆ ಮಾಡಿಕೊಡುತ್ತಿದ್ದಾರೆ. ಲ್ಯಾಂಡ್ ಟ್ರಿಬ್ಯೂನಲ್ ಅವರು ತಮ್ಮ ಜಜ್ಜ್‌ಮೆಂಟಿನಲ್ಲಿ ಇಂತಹ ಗ್ರಾಮದಲ್ಲಿ, ಇಂತಹ ಸರ್ವೇ ನಂಬರನಲ್ಲಿ ಇಷ್ಟು ಎಕರೆ ಜಮೀನನ್ನು ನಿಮ್ಮ ಹೆಸರಿಗೆ ಖಾತೆ ಮಾಡಿಕೊಟ್ಟಿದ್ದೇವೆಂದು ಹೇಳಿದಾಗ, ಅವರ ಮುಖದಲ್ಲಿ ಬರುವ ಆನಂದ, ಆ ಒಂದು ಅರಳಿದ ಮುಖ, ಅವರ ಹೃದಯ ತುಂಬಿಬರುವ ದೃಶ್ಯ ನೋಡಿದಾಗ ನಮಗೂ ಅಷ್ಟೇ ಒಂದು ಆನಂದವಾಗುತ್ತದೆ. ಇಂತಹ ದೃಶ್ಯಗಳನ್ನು ನಾವು ಕಣ್ಣಾರೆ ನೋಡುತ್ತಿದ್ದೇವೆ. ಆದಕಾರಣ ಇಂತಹ ಒಂದು ಕೆಲಸ ಸಂಪೂರ್ಣವಾಗಿ ಸಾರ್ಥಕವಾಗಬೇಕಾದರೆ ಗೇಣಿದಾರರಿಗೆ ಎಲ್ಲ ರೀತಿಯಿಂದಲೂ ರಕ್ಷಣೆ ಕೊಡಬೇಕಾಗುತ್ತದೆ. ಮುಖ್ಯವಾಗಿ ನಾವು ಕೊಡತಕ್ಕಂಥ ಇಂಜಂಕ್ಷನ್ ಆರ್ಡರ್‌ನ್ನ

ಏನಿವೆ, ಅವು ಕೂಡಲೇ ಕಾರ್ಯಗತವಾಗುವುದಕ್ಕೆ ಮತ್ತು ಅವುಗಳ ಬಗ್ಗೆ ತಕ್ಷಣವೇ ಕ್ರಮ ಕೈಕೊಳ್ಳುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಾವು ಹೇಳಬೇಕು. ಅದರಲ್ಲಿಯೂ ಮುಖ್ಯವಾಗಿ ಪೋಲೀಸ್ ಅಧಿಕಾರಿಗಳಿಗೆ ತಿಳಿಸಬೇಕು, ಈಗ ಏನಾಗುತ್ತಿದೆ ಎಂದರೆ, ನಾವು ಕೊಟ್ಟ ಇಂಜಂಕ್ಷನ್ ಆರ್ಡರನ್ನು ಅವರು ಕೂಡಲೇ ಜಾರಿ ಮಾಡುವುದಿಲ್ಲ, ಅವರು ನಿಧಾನ ಮಾಡುವುದರಿಂದ ಅಲ್ಲಿ ಬೆಳೆಯನ್ನು ಕಟಾವ್ ಮಾಡಿ ತೆಗೆದುಕೊಂಡು ಹೋಗಿಬಿಟ್ಟಿರುತ್ತಾರ. ಎಲ್ಲ ಕಡೆಯೂ ಈ ರೀತಿಯಾಗುತ್ತಿಲ್ಲ, ಕೆಲವು ಕಡೆ ಮಾದರೂ ಈ ರೀತಿಯಾಗುತ್ತಿದೆ, ಮೇಲಿನಿಂದ ಅಂದರೆ ಎಸ್.ಪಿ. ಅವರಿಂದ ಏನಾದರು ಆರ್ಡರ್ ಬಂದರೆ, ಇಲ್ಲವೇ ಕೋರ್ಟ್‌ನಿಂದ ಏನಾದರು ಆರ್ಡರ್ ಬಂದರೆ ಪೋಲೀಸಿನವರು ಅದನ್ನು ಕೂಡಲೇ ಜಾರಿ ಮಾಡುತ್ತಾರೆ. ಆದರೆ ನಾವು ಕೊಡುವಂತಹ ಇಂಜಂಕ್ಷನ್ ಆರ್ಡರನ್ನು ಕೂಡಲೇ ಜಾರಿ ಮಾಡುವುದಿಲ್ಲ, ಅವರಿಗೆ ಈಗ ಒಂದು ರೀತಿ ಆಶ್ಚರ್ಯವಾಗಿಬಿಟ್ಟಿದೆ. ಏನೆಂದರೆ, ನಮ್ಮ ಊರಿನವರೇ ಆದ ಲಿಂಗಪ್ಪನವರು ಈ ರೀತಿ ಇಂಜಂಕ್ಷನ್ ಆರ್ಡರ್ ಕೊಡುವುದು ಎಂದರೆ ಏನು ಎಂಬುದಾಗಿ.

ಶ್ರೀ ಕಾಗೋಡು ತಿಮ್ಮಪ್ಪ.—ಇಂದು ಪೋಲೀಸಿನವರು ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿದ್ದಾರೆಂಬ ಬಗ್ಗೆ ಒಂದು ಉದಾಹರಣೆ ಕೊಡುತ್ತೇನೆ. ನನ್ನ ಕ್ಷೇತ್ರದಲ್ಲಿ ಲ್ಯಾಂಡ್‌ಲಾರ್ಡ್ ಒಬ್ಬರಿಗೆ ಸಿವಿಲ್ ಕೋರ್ಟಿನವರು ಇಂಜಂಕ್ಷನ್ ಆರ್ಡರನ್ನು ಕೊಟ್ಟಿದ್ದರು, ಅವನ್ನು ಅವರು ಪೋಲೀಸಿನವರಿಗೆ ತೆಗೆದುಕೊಂಡು ಹೋಗಿ ಕೊಟ್ಟಿದ್ದರು, ಆದರೆ ಸರ್ಕಾರದವರು ಈ ಒಂದು ಆರ್ಡಿನೆನ್ಸ್ ಹೊರಡಿಸಿದ ಮೇಲೆ ಅದು ವೆಕೇಟ್ ಆಯಿತು. ನಂತರ ನಮ್ಮ ಲ್ಯಾಂಡ್‌ಟ್ರಿಬ್ಯುನಲ್ ಅವರು ಇಂಜಂಕ್ಷನ್ ಆರ್ಡರ್ ಕೊಟ್ಟರು, ಆದರೆ ಅದನ್ನು ಪೋಲೀಸಿನವರು ಜಾರಿ ಮಾಡಲು ಒಪ್ಪದೆ, ಕೋರ್ಟಿನಿಂದ ಬಂದಿರುವ ಇಂಜಂಕ್ಷನ್ ಆರ್ಡರನ್ನು ತೋರಿಸಿದರಂತೆ, ಸರ್ಕಾರದವರು ಆರ್ಡಿನೆನ್ಸ್ ಹೊರಡಿಸಿದ್ದು ಅವರಿಗೆ ಗೊತ್ತೇ ಇರಲಿಲ್ಲ, ಈ ರೀತಿಯೆಲ್ಲಾ ನಡೆಯುತ್ತಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಈ ಕಾರಣದಿಂದ ತಾವು ಪೋಲೀಸ್ ಇಲಾಖೆಯವರಿಗೆ ಒಂದು ಸುತ್ತೋಲೆಯನ್ನು ಕಳುಹಿಸಿಕೊಡಬೇಕು. ಲ್ಯಾಂಡ್ ಟ್ರಿಬ್ಯುನಲ್ ಅಂದರೆ ಏನು, ಅವರಿಗಿರುವ ಅಧಿಕಾರಗಳೇನು, ಅವರು ಮಾಡುತ್ತಿರುವ ಕೆಲಸಗಳೇನು ಎಂಬುದರ ಬಗ್ಗೆ ವಿವರವಾಗಿ ತಾವು ಪೋಲೀಸಿನವರಿಗೆ ತಿಳಿಸುವುದು ಅವಶ್ಯಕವಾಗಿದೆ ಇಲ್ಲವೇ ಅವರಿಗೆ ಡಿವಿಜನ್-ವೈಸ್ ಟ್ರೈನಿಂಗ್ ಕ್ಲಾಸಸ್ ಆದರೂ ನಡೆಸಿ ತಿಳಿವಳಿಕೆ ಕೊಡಬೇಕು, ಲ್ಯಾಂಡ್ ಟ್ರಿಬ್ಯುನಲ್‌ಗಳು ಯಾವ ರೀತಿ ಕೆಲಸ ಮಾಡಬೇಕು ಎಂಬ ಬಗ್ಗೆ ತಿಳಿವಳಿಕೆ ಕೊಟ್ಟಂತೆ ಇವರಿಗೂ ಟೀಚ್ ಮಾಡುವುದು ಒಳ್ಳೆಯದು, ನಮ್ಮ ಮಾನ್ಯ ಪಿ. ಸಿ. ಶೆಟ್ಟರ್ ಅಂತಹವರು ಎಲ್ಲ ಕಡೆಗಳಿಗೂ ಹೋಗಿ ಅಲ್ಲಿಯ ಪೋಲೀಸ್ ಅಧಿಕಾರಿಗಳಿಗೆ ಯಾವ ರೀತಿ ಕಾರ್ಯಕ್ರಮ ಕೈಕೊಳ್ಳಬೇಕೆಂಬ ಬಗ್ಗೆ ತಿಳಿವಳಿಕೆ ಕೊಟ್ಟುಬರುವುದು ಅತ್ಯಂತ ಅವಶ್ಯಕವಿದೆ. ಇಲ್ಲದಿದ್ದರೆ ನಾವು ಕೊಟ್ಟಂತಹ ಇಂಜಂಕ್ಷನ ಆರ್ಡರ್ ನಮಗೇ ಇಂಜಕ್ಷನ್ ಆಗಿಬಿಡುತ್ತದೆ. ಈಗ ಸರ್ಕಾರದವರು ಕೈಕೊಂಡಿರುವ ಇಪ್ಪತ್ತು ಅಂಶಗಳ ಕಾರ್ಯಕ್ರಮದಲ್ಲಿ ಇದೂ ಸಹ ಸೇರಿರುವುದರಿಂದ, ಇದರ ಬಗ್ಗೆ ಸರ್ಕಾರದವರು ತೀವ್ರವಾದಂಥ ಕಾರ್ಯಕ್ರಮ ಕೈಕೊಳ್ಳಬೇಕೆಂದು ಹೇಳುತ್ತೇನೆ. ಈಗಿನ ಒಂದು ಕ್ರಮದಂತೆ ಗೇಣದಾರರಿಗೆ ಕೇವಲ ಹದಿನೈದು ನಿಮಿಷಗಳಲ್ಲಿ ನ್ಯಾಯ ದೊರಕಿಸಿಕೊಡುವುದಕ್ಕೆ ಅವಕಾಶವುಂಟು, ಆದಕಾರಣ ಇದರ ಕಡೆಗೆ ಸರ್ಕಾರದವರು ಹೆಚ್ಚಿನ ಗಮನ ಕೊಡಬೇಕೆಂದು ಹೇಳಿ ಈ ತಿದ್ದುಪಡಿ ಮಸೂದೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಆರ್, ಶ್ರೀನಿವಾಸಲುನಾಯ್ಡು (ಶಾಂತಿನಗರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಮಂತ್ರಿಗಳು The Karnataka Land Reforms (Second Amendment) Bill, 1976 ... ಏನು ತಂದಿದ್ದಾರ, ಅದನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ನಾಲ್ಕು ಮಾತುಗಳನ್ನು ಆಡಬೇಕೆಂದು ನಿಂತಿದ್ದೇನೆ. ಒಂದು ಸಂಕ್ಷೇಪದ ಸಮಾಚಾರವೆಂದರೆ, ವಿರೋಧಪಕ್ಷದ ಸದಸ್ಯರೆಲ್ಲರೂ ಈ ತಿದ್ದುಪಡಿ ಮಸೂದೆಯನು ಒಪ್ಪಿಕೊಂಡಿದ್ದಾರೆ. This is a most revolutionary Bill ಎಂದು ಹೇಳಿದರೂ ತಪ್ಪಾಗಲಾರದು, ಈಗ ನಾವು ಭೂನ್ಯಾಯ ಮಂಡಲಿಗಳನ್ನು ರಚನೆ ಮಾಡಿದ್ದೇವೆ. ಅದರ ಕಾರ್ಯವಿಧಾನವೆಲ್ಲಾ ನಮಗೆ ಅರ್ಥವಾಗಿದೆ, ಅದರಲ್ಲಿ ಇಬ್ಬರು ಆಫೀಸರ್ ಮತ್ತು ೪ ಜನ ಖಾಸಾಗೀ ಸದಸ್ಯರು ಇರುತ್ತಾರೆ. ಆದಕಾರಣ ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದಂತೆ ಇದು ಒಂದು ರೀತಿಯಲ್ಲಿ "ಪಂಚಾಯಿತಿ ಸಭೆಯ" ತರಹ ಇರುತ್ತದೆ. ಇದಕ್ಕೆ ಮೊದಲು ಜಜ್ಜೆಸ್ ಹೈವರಿ ಟವರ್ (Ivory Tower) ಮೇಲೆ ಕೂತು ಕೊಂಡು ಕೆಲಸ ಮಾಡುತ್ತಿದ್ದರು, ಇದರಿಂದ ಎಡಗೈಬಿಟ್ಟು ಬಿತ್ತುತ್ತಿದ್ದಂತಹ ರೈತರು ಅನೇಕ ವರ್ಷಗಳ ಕಾಲ ಕೋರ್ಟಿಗೆ ಒಡಾಡಬೇಕಾಗುತ್ತಿತ್ತು, ಆದರೆ ಈಗ ಈ

ಲ್ಯಾಂಡ್ ಟ್ರಿಬ್ಯುನಲ್ ಅವರು ಕೆಲವೇ ತಿಂಗಳುಗಳಲ್ಲಿ ಬೇಕಾದಷ್ಟು ರೈತರ ಕೇಸುಗಳನ್ನು ಇತ್ಯರ್ಥ ಮಾಡುತ್ತಿದ್ದಾರೆ. 'ಲ್ಯಾಂಡ್ ಟು ದಿ ಟಿಲ್ಲರ್ ಎಂಬ ತತ್ವವನ್ನು ನಾವು ಒಪ್ಪಿಕೊಂಡ ಮೇಲೆ, "ಉಳುವವನೇ ಭೂಮಿಯ ಒಡೆಯ" ಅಂದಮೇಲೆ ಅವರಿಗೆ ಸಂಬಂಧಪಟ್ಟ ತಕರಾರುಗಳನ್ನು ಜಾಗ್ರತೆ ಇತ್ಯರ್ಥ ಪಡಿಸುವುದು ನಮ್ಮ ಕರ್ತವ್ಯವಾಗಿದೆ. ಇಂದು ಈ ರೈತರಲ್ಲಿ ಕೇವಲ ೨೦ ಪರ್ಸೆಂಟ್ ಮಾತ್ರ ಬುದ್ಧಿವಂತರಿದ್ದಾರೆ. ಇವರು ಈ ಕಿತಾಪತಿ, ಇದನ್ನೇ ಕಾರಣವಾಗಿಟ್ಟುಕೊಂಡು ಈ ಶ್ರಮಜೀವಿಗಳ ಬಾಯಿಗೆ ಈ Feudal lords ಎಂದು ಏನು ಹೇಳುತ್ತೇವೆ ಅಂತಹವರು ಮಣ್ಣು ಹಾಕುವುದಕ್ಕೆ ಪ್ರಯತ್ನ ಮಾಡುತ್ತಿದ್ದರು, ಅಧಿಕಾರಿಗಳಿಗೆ ಬಾಳೇಎಲೆ, ತರಕಾರಿ ಮುಂತಾದವುಗಳನ್ನು ಕೊಟ್ಟು ಈ ಜಮೀನುದಾರರು ಪಟ್ಟಿ, ಪಹಣಿ ಪಹಣಿಯನ್ನು ತಿದ್ದಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದರು, ಆದರೆ ಇಂದು ನಮ್ಮ ಸರ್ಕಾರದವರು ಈ ಜಮೀನುದಾರರು, ರಾಜರುಗಳು ಇರಬಾರದು ಉಳುವವನೇ ಭೂಮಿಯ ಒಡೆಯನಾಗಬೇಕೆಂಬ ತತ್ವವನ್ನು ಒಪ್ಪಿಕೊಂಡು ಅದರಂತೆ ಕೆಲಸ ಮಾಡುತ್ತಿದ್ದಾರೆ, ಇಲ್ಲಿಯವರೆಗೆ ಸಿವಿಲ್ ಕೋರ್ಟುಗಳು ಮತ್ತು ಲ್ಯಾಂಡ್ ಟ್ರಿಬ್ಯುನಲ್ಸ್ ಈ ವಿಚಾರದಲ್ಲಿ ಕೆಲಸ ಮಾಡುತ್ತಿದ್ದವು, ಇದರಿಂದ ಕೆಲವೊಂದು ತಕರಾರು ಉದ್ಭವವಾದ ಕಾರಣ ಸರ್ಕಾರದವರು ಈ ಒಂದು ತಿದ್ದುಪಡಿಯನ್ನು ತೆಗೆದುಕೊಂಡುಬಂದಿದ್ದಾರೆ ಮತ್ತು ಇಲ್ಲರತಕ್ಕಂಥ Statement of Objects and reasons ನಲ್ಲಿ To remove this parall jurisdiction...ಎಂದು ಹೇಳಿದ್ದಾರೆ. ಅಂದರೆ ಎಲ್ಲ ಅಧಿಕಾರವನ್ನು ಲ್ಯಾಂಡ್ ಟ್ರಿಬ್ಯುನಲ್ಸ್‌ಗೆ ಕೊಟ್ಟಿದ್ದಾರೆ. ಇಂಜಂಕ್ಷನ್ ಆರ್ಡರ್ ಕೊಡುವ ಅಧಿಕಾರವನ್ನು ಸಹ ಇವರಿಗೆ ಕೊಡಲಾಗಿದೆ ನಮ್ಮ ವಿರೋಧಪಕ್ಷದ ನಾಯಕರು ಲ್ಯಾಂಡ್ ಟ್ರಿಬ್ಯುನಲ್‌ಗಳಿಗೆ ಹೆಚ್ಚು ಅಧಿಕಾರ ಕೊಡಬೇಡಿ ಎಂದು ಹೇಳುತ್ತಿದ್ದರು, ಆದರೆ ಇದರಲ್ಲಿ ಕೇವಲ ಅಧಿಕಾರಗಳು ಮಾತ್ರಇರುವುದಿಲ್ಲ, ಅವರ ಜೊತೆಗೆ ಖಾಸಗೀ ಮುಖಂಡರೂ ಸಹ ಇರುತ್ತಾರೆ, ಎಲ್ಲರಿಗೂ ಸತ್ಯ, ಧರ್ಮ, ನ್ಯಾಯ ಜಾಗ್ರತೆ ದೊರಕುವಂತಾಗಲೀ ಎಂಬ ಕಾರಣದಿಂದ ಈ ರೀತಿ ಮಾಡಿದ್ದಾರೆ, This is people's court ಎಂದು ಹೇಳಬಹುದು ವಿಷಯ ತಿಳಿದವರು, ವಕೀಲರಾದವರು ಇದರಲ್ಲಿರುತ್ತಾರೆ. ಮತ್ತು ಇವರುಗಳು ಕೇವಲ ೪ ಗೋಡೆಗಳ ನಡುವೆ ಕುಳಿತು ಎಲ್ಲವನ್ನೂ ತೀರ್ಮಾನ ಮಾಡುವುದಿಲ್ಲ, ಅನುಮಾನ ಬಂದರೆ ಆಯಾ ಜಾಗಗಳಿಗೇ ಖುದ್ದು ಹೋಗಿ ನೋಡಿ ನಂತರ ತೀರ್ಮಾನ ಕೊಡುತ್ತಾರೆ. ಅಂದರೆ ಇದು ಒಂದು ರೀತಿಯಲ್ಲಿ "ಮೊಬೈಲ್ ಕೋರ್ಟ್" ಎಂದು ಹೇಳಬಹುದು, ಇದರಿಂದ ದೇಶಕ್ಕೆ ದ್ರೋಹವಾಗುತ್ತದೆಂದು ಕೆಲವರು ಸಂಶಯ ವ್ಯಕ್ತಪಡಿಸಿದರು, ಆದರೆ ಆ ಮಾತು ಸರಿಯಲ್ಲ. ಉಳುವವನೇ ಭೂಮಿಯ ಒಡೆಯನಾಗಬೇಕೆಂಬ ತತ್ವವನ್ನು ನಾವು ಇಂದು ಹೇಳುತ್ತಿಲ್ಲ, ಈ ವಿಷಯವನ್ನು ಜವಹರ್‌ಲಾಲ್‌ನೆಹರೂ ಅವರು ಲಾಹೋರ್ ಅಧಿವೇಶನದಲ್ಲಿಯೇ ತೀರ್ಮಾನ ಮಾಡಿದ್ದರು. ಅದನ್ನು ನಾವು ೧೯೭೪ನೇ ಇಸವಿಯಲ್ಲಿ ಜಾರಿಗೆ ಕೊಡುತ್ತಿದ್ದೇವೆ, ಹೀಗಿದ್ದರೂ ಕೆಲವರು ಇನ್ನೂ ತಮ್ಮ ಸಂಶಯವನ್ನು ವ್ಯಕ್ತಪಡಿಸುತ್ತಿದ್ದಾರೆ. ಇಲ್ಲಿಯವರೆಗೆ ಈ ಇಪ್ಪತ್ತು ಪರ್ಸೆಂಟ್ ಜಮೀನುದಾರರು ಏನಿದ್ದರು, ಅವರ ಪರವಾಗಿ ಅನೇಕ ಕೋರ್ಟುಗಳು ಇಂಜಂಕ್ಷನ್ ಆರ್ಡರ ಕೊಡುತ್ತಿದ್ದರಿಂದ, ಇದನ್ನು ಜಾರಿಗೆ ತರಲು ಅಡ್ಡಿ ಬರುತ್ತಿತ್ತು, ಅದಕ್ಕಾಗಿ ಸರ್ಕಾರದವರು ಈ ಆರ್ಡಿನೆನ್ಸ್ ಹೊರಡಿಸಬೇಕಾಗಿ ಬಂತು, ಇಂದು ಸೌತ್‌ಕೆನರಾ, ನಾರ್ತ್ ಕೆನರಾ ಮುಂತಾದ ಕಡೆಗಳಲ್ಲಿ ಒಂದು ಎಕರೆ, ಅರ್ಧ ಎಕರೆ, ಕಾಲು ಎಕರೆ ಭೂಮಿಗೆಲ್ಲಾ ಒಬ್ಬರಿಗೊಬ್ಬರಿಗೆ ಜಗಳವಾಗುತ್ತಿರುತ್ತದೆ. ಇದನ್ನೆಲ್ಲಾ ತಪ್ಪಿಸಬೇಕಾದರೆ Civil and Criminal cases should be transferred to these tribunals. ಇದಕ್ಕೆ ಸಂಬಂಧಪಟ್ಟಂತೆ ಕೆಲವು ತಿದ್ದುಪಡಿಗಳನ್ನು ತೆಗೆದುಕೊಂಡು ಬಂದರೆ ಒಳ್ಳೆಯದೆಂದು ಹೇಳುತ್ತೇನೆ. ಅಂತೂ ಇಂತೂ ಉಳುವವನೇ ಭೂಮಿ ಒಡೆಯ ಎಂದು ನಾವು ಒಪ್ಪಿಕೊಂಡಿದ್ದೇವೆ ಆ ಉದ್ದೇಶದಿಂದಲೇ ಈ ಭೂಸುಧಾರಣೆ ಕಾಯಿದೆಯನ್ನು ತಂದಿದ್ದು. ಇದು ಕೇವಲ ಹಳ್ಳಿಗಳಿಗೆ ಸಂಬಂಧಿಸಿದ್ದು ಎಂದು ಜನ ತಿಳಿದುಕೊಂಡಿದ್ದರು. ಆದರೆ ಈಗ ಪಟ್ಟಣದಲ್ಲಿ ಯಾರು ಯಾರು ಸ್ವಂತ ಆಸ್ತಿಯನ್ನು ಇಟ್ಟುಕೊಂಡಿದ್ದಾರೋ ಅವರ ಮೇಲೂ ಮಿತಿಯನ್ನು ತರುವ ಅರ್ಬನ್ ಪ್ರಾಪರ್ಟಿ ಸೀಲಿಂಗ್ ಬಿಲ್ ಬರುವುದರಲ್ಲಿದೆ. ಇದನ್ನು ಯೋಚನೆಯನ್ನು ಮಾಡತಕ್ಕಂಥ ಕಾಲದಲ್ಲಿ ಹಳೆಯ ಕಂದಾಚಾರವನ್ನು ಭೂನ್ಯಾಯ ಮಂಡಲಿಯಲ್ಲಿ ಕೆಲವರು ವ್ಯಕ್ತಪಡಿಸಿದರು ಸಬ್ ಡಿವಿಜನ್ ಆಫೀಸರ್ ಏನಾದರೂ ಇಲ್ಲದೆ ಹೋದರೆ ಆ ಸಭೆ ಅಡ್‌ಜರ್ನ್ ಆಗುತ್ತದೆ. ನಮ್ಮಲ್ಲಿ ಯಾರು ಇರುತ್ತಾರೆ ಭೂಪಂಚಾಯತಿದಾರರು ಅವರು ಅದನ್ನು ಮಾಡುವಂತೆ ಮಾಡಬೇಕು. ಮಾನ್ಯ ಮಂತ್ರಿಗಳು ಈ ಮಸೂದೆಯನ್ನು ತಂದಿರುವುದಕ್ಕೆ ಅವರಿಗೆ ಅಭಿನಂದನೆ ಸಲ್ಲಿಸಿ ಇದನ್ನು ಸ್ವಾಗತಿಸುತ್ತಾ ಇದನ್ನು ಸರ್ವಾನುಮತದಿಂದ ಅಂಗೀಕಾರ ಮಾಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಸುಬ್ಬಯ್ಯ ಶೆಟ್ಟಿ —ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹಲವರು ಹಲವಾರು ಸಲಹೆಗಳನ್ನು ಮಾಡಿ ಎಲ್ಲರಿಗೂ ನ್ಯಾಯವನ್ನು ಒದಗಿಸ ಬೇಕೆಂದು ಹೇಳಿದರು, ಹಾಗೂ ಗೇಣಿದಾರರಿಗೆ ಬಗ್ಗೆ ಇರುವ ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದರು. ಒಂದು ವಿಚಾರ ವ್ಯಕ್ತಪಡಿಸಿದ್ದು ಏನು ಎಂದರೆ ಈ ಕೋರ್ಟುಗಳು ಮುಖ್ಯವಾಗಿ ಹೈಕೋರ್ಟು ಇನ್ನು ಮುಂದೆ ಟ್ರಿಬ್ಯೂನಲ್ ಏನಾದರೂ ಆರ್ಡರ್ ಕೊಟ್ಟಲ್ಲಿ ಅದರ ಮೇಲೆ ಸ್ಟೇ ಅನ್ನಾಗಲೀ ಅಥವಾ ಇಂಜಂಕ್ಷನ್‌ನನ್ನಾಗಲಿ ಕೊಡಬಾರದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಅಧಿಕಾರಿಗಳು ಮತ್ತು ಅಧಿಕಾರೇತರರು ಇರುವ ಈ ಯಾವ ಒಂದು ನ್ಯಾಯಾಲಯದ ನಿಜವಾದ ಅಸ್ತಿತ್ವ ಏನು ಇದೆ ಇದು ಜನತೆಯ ಅಭಿಪ್ರಾಯದ ಮೇಲೆ ನ್ಯಾಯ ವಿತರಣೆ ಮಾಡುವುದು ಆಗಿದೆ, ಇಂತಹ ಒಂದು ಜನತಾ ನ್ಯಾಯಲಯ ನ್ಯಾಯ ವಿತರಣೆ ಮಾಡುತ್ತಾ ಇರುವಾಗ ಈ ನ್ಯಾಯಾಲಯದಲ್ಲಿ ಪ್ರಿಸೈಡ್ ಮಾಡುವ ಅಧಿಕಾರಿಗಳು ಯಾರು ಇದ್ದಾರೆ ಅವರ ಬಗ್ಗೆ ಟೀಕೆ ಮಾಡಬಾರದು, ಹಾಗೆ ಟೀಕೆ ಮಾಡಿದರೆ ಈ ನ್ಯಾಯಾಲಯದ ಬಗ್ಗೆ ಜನತೆಗೆ ಇರುವ ಗೌರವ ಏನು ಇದೆ ಅದು ಹೋಗುತ್ತದೆ ಈ ನಾಯಾಲಯ ಸರಿಯಾಗಿ ಫಂಕ್ಷನ್ ಆಗಲಿಕ್ಕೆ ಕಷ್ಟ ಮತ್ತು ಅದು ಕಂಟೆಂಪ್ಟ್ ಆಫ್ ಕೋರ್ಟು ಆಗುತ್ತದೆ. ನಮ್ಮ ಈ ಸಭಾ ಭವನದಲ್ಲಿ ಅಂದರೆ ಅಸೆಂಬ್ಲಿಯಲ್ಲಿ ಭೂಮಸೂದೆಗೆ ತಿದ್ದುಪಡಿಯನ್ನು ತರುವಾಗ ಈ ವಿಕ್ಕಲು ಸಂಬಂಧ ಇರತಕ್ಕ ಕೇಸ್‌ಗಳನ್ನು ಇತ್ಯರ್ಥ ಮಾಡುವುದಕ್ಕೆ ಟ್ರಿಬ್ಯೂನಲ್‌ಗಳನ್ನು ರಚನೆ ಮಾಡಬೇಕೆಂದು ಯಾವ ಅಭಿಪ್ರಾಯವನ್ನು ಮಾನ್ಯ ಸದಸ್ಯರು ವ್ಯಕ್ತಪಡಿಸಿದ್ದರು ಅದರ ಪ್ರಾಕಾರ ಕಾನೂನನ್ನು ಮಾಡಿದ್ದೇವೆ. ಭೂನ್ಯಾಯ ಮಂಡಲಿಗಳನ್ನು ರಚನೆ ಮಾಡಿದ್ದೇವೆ. ನಮ್ಮ ಸದನದಲ್ಲಿ ನಮ್ಮ ಮಾನ್ಯ ಸದಸ್ಯರು ಯಾವ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದರೋ ಅದು ನಮ್ಮ ರಾಜ್ಯದ ಜನತೆಯಲ್ಲಿರುವ ಅಭಿಪ್ರಾಯವಾಗಿದೆ ಅದನ್ನೇ ಅವರು ಇಲ್ಲಿ ಪ್ರತಿಬಿಂಬಿಸಿದ್ದಾರೆ ಅದಕ್ಕನುಗುಣವಾಗಿ ಭೂ ನ್ಯಾಯ ಮಂಡಲಿಗಳನ್ನು ರಚನೆ ಮಾಡುವ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಮೊದಲು ಏನು ವಾದ ಇತ್ತು ? ದಣಿ ಮತ್ತು ಒಕ್ಕಲುತನದ ವಿವಾದವನ್ನು ತೀರ್ಮಾನ ಮಾಡುವ ವ್ಯವಸ್ಥೆ ಕೋರ್ಟುಗಳಿಗೆ ಸೇರಿತ್ತು. ಆದರೆ ಅವರು ಕೊಡವಂತಹ ತೀರ್ಮಾನ ಸಮರ್ಪಕವಾಗಿಲ್ಲವೆಂದು ತಿಳಿದು ಒಂದು ಇವುಗಳನ್ನು ರಚನೆ ಮಾಡಲಾಯಿತು ಎಂದು ಇದರಲ್ಲಿ ವ್ಯಕ್ತವಾಗುತ್ತದೆ. ಅವುಗಳು ಸಮರ್ಪಕವಾಗಿ ಕೆಲಸಮಾಡಿದ್ದರೆ ಬಹುಶಃ ಈ ಸದನ ಭೂ ನ್ಯಾಯ ಮಂಡಲಿಗಳನ್ನು ರಚನೆ ಮಾಡುವ ಯೋಚನೆ ಬರುತ್ತಾ ಇರಲಿಲ್ಲ, ಅವರೇ ಮಾಡಿಕೊಳ್ಳಲಿ ಎಂದು ಸುಮ್ಮನೆ ಇರಬಹುದಿತ್ತು. ನಮ್ಮ ಕರ್ನಾಟಕದ ಜನತೆಗೆ ಇಷ್ಟರವರೆಗೆ ಏನು ಎಂದು ಅಭಿಪ್ರಾಯ ಇತ್ತೋ ಅದನ್ನು ಈ ನ್ಯಾಯಮಂಡಲಿಯನ್ನು ರಚನಮಾಡುವುದರಲ್ಲಿ ವ್ಯಕ್ತಪಡಿಸಿದ್ದಾರೆ. ಇದನ್ನು ಒಂದು ಜುಡಿಷಿಯಲ್ ಅಥಾರಿಟಿ ಎಂದು ತಿಳಿದುಕೊಳ್ಳಲೇ ಬೇಕಾಗಿತ್ತು. ಆದರೆ ಈ ಭೂನ್ಯಾಯ ಮಂಡಳಿಗಳ ವಿಷಯದಲ್ಲಿ ಅಷ್ಟೊಂದು ಭರವಸೆ ಇಡಲಿಲ್ಲ. ಇದನ್ನು ದೊಡ್ಡ ರಿಮಾರ್ಕ್ ಎಂದು ನಾನು ಹೇಳುವುದಿಲ್ಲ. ಇದನ್ನು ಇತರ ನ್ಯಾಯಾಲಯಗಳು ಗಮನಿಸಬೇಕಿತ್ತು. ಇನ್ನಾದರೂ ನಮ್ಮ ನ್ಯಾಯಾಲಯಗಳು ಇದನ್ನು ಗಮನಕ್ಕೆ ತೆಗೆದುಕೊಳ್ಳುತ್ತವೆಂದು ನನಗೆ ಭರವಸೆ ಇದೆ ಶ್ರೀಮಾನ್ ಶೆಟ್ಟರು ಮಾತನಾಡುವಾಗ ಏನೋ ಮಾತನಾಡಿದರು ಎಂದು ಯಾರು ಭಾವಿಸಭಾರದು. ನಾನು ಕೋರ್ಟಿನವರಿಗೆ ಅಗೌರವ ತೋರಿಸಬೇಕೆಂದು ಮಾತನಾಡಿಲ್ಲ. ಏನು ಒಂದು ವಾಸ್ತವಾಂಶ ಇದೆ ಅದನ್ನು ತಿಳಿಸಿದೆ ಇನ್ನು ಮಾನ್ಯ ಸದಸ್ಯರು ಮಾತನಾಡುವಾಗ ಹೈಕೋರ್ಟಿನಲ್ಲಿ ಬಹಳಷ್ಟು ಇಂಟರ್‌ಫಿಯೆರೆನ್ಸ್ ಆಗುತ್ತಿವೆ ಎಂದು ಹೇಳಿದರು ಇದರಿಂದ ಗೇಣಿದಾರರಿಗೆ ತೊಂದರೆಯಾಗುತ್ತಿದ್ದೆ ಆದ್ದರಿಂದ ಟ್ರಿಬ್ಯೂನಲ್ ಏನು ಎಂದು ತೀರ್ಮಾನ ಕೊಟ್ಟರೆ ಅದಕ್ಕೆ ಸ್ಟೇ ಮಾಡುವುದು ಅದರ ಮೇಲೆ ಇಂಜಂಕ್ಷನ್ ಆರ್ಡರ್ ಹೊರಡಿಸುವುದು ಸರಿಯಲ್ಲವೆಂದು ತಿಳಿಸಿದ್ದಾರೆ ಈ ವಿಚಾರದಲ್ಲಿ ಸುಪ್ರೀಂ ಕೋರ್ಟಿಗೆ ಹೋಗಬೇಕೆಂಬ ಸಲಹೆಯನ್ನು ಕೊಟ್ಟಿದ್ದಾರೆ. ಇದನ್ನು ಸರ್ಕಾರ ತೀವ್ರವಾಗಿ ಪರಿಶೀಲಿಸುತ್ತದೆ. ಅನಂತರ ಶ್ರೀಮಾನ್ ಕಕ್ಕಿಲಾಯ ಅವರು ಕೆಲವು ಸಂದರ್ಭಗಳಲ್ಲಿ ಪೋಲೀಸರು ಮಾಲೀಕರ ಪರವಾಗಿ ಸಹಾಯ ಮಾಡಿದ್ದಾರೆ ಎಂದು ಹೇಳಿದ್ದಾರೆ ಇದು ಬಹಳ ಗಂಭೀರವಾದ ವಿಚಾರ. ಅದು ಯಾರು ಎಂಬುದನ್ನು ಹೇಳುವುದರಲ್ಲಿ ಶಂಕೆಯನ್ನು ವ್ಯಕ್ತಪಡಿಸಿದರು. ತಮ್ಮ ಮೂಲಕ ಹೇಳಬಯಸುತ್ತೇನೆ. ಅದರ ಬಗ್ಗೆ ಶಂಕೆ ಬೇಕಿಲ್ಲ. ಇನ್ನು ನಮ್ಮ ವಿರೋದಪಕ್ಷದ ನಾಯಕರಾದ ಶ್ರೀ ಕೃಷ್ಣಪ್ಪನವರು ಏತಕ್ಕೆ ಛೇರ್‌ಮನ್‌ಗಳಿಗೆ ಇಂಜಂಕ್ಷನ್ ಕೊಡುವ ಅಧಿಕಾರ ಕೊಡಬಾರದು ಎಂದು ಕೇಳಿದರು. ನಾವು ಭೂನ್ಯಾಯ ಮಂಡಲಿಗಳನ್ನು ರಚನೆಮಾಡುವಾಗ ಇಷ್ಟರವರೆಗೆ ಜುಡಿಷಿಯಲ್ ಆಫೀಸರ್ ಅಥವಾ ಕೋರ್ಟು ಅಧಿಕಾರಿ ಇರತಕ್ಕಂಥ ನ್ಯಾಯ ಮಂಡಲಿಗಳನ್ನು ರಚನೆಮಾಡಿದ್ದೆವು. ಈಗ ಟೆಂಪರರಿ ಇಂಜಂಕ್ಷನ್ ರೀತಿಯಲ್ಲಿ ಇಂಟರ್‌ಲೋಕ್ಯೂಟರಿ ಆರ್ಡರ್ಸ್ ಇಷ್ಯೂ ಮಾಡಬೇಕಾಗುತ್ತದೆ. ಆದ್ದರಿಂದ ಚೇರ್‌ಮನ್‌ಗಳಿಗೆ ಅಂಥ

ಅಧಿಕಾರ ಕೊಟ್ಟಿಲ್ಲ. ಈ ವಿಚಾರದಲ್ಲಿ ನಿಜವಾಗಿ ಎಲ್ಲರಿಗೂ ಕಳಕಳಿ ಇದೆ. ಮಾನ್ಯ ಸದಸ್ಯರೊಬ್ಬರು ಮಾತನಾಡುತ್ತಾ ತಿಂಗಳಿಗೊಂದು ಸಾರಿ ಟ್ರಿಬ್ಯೂನಲ್‌ನವರು ಕೊಡುಕೊಳ್ಳುತಾರೆಂದು ಹೇಳಿದರು ಅಲ್ಲದೆ ಏತಕ್ಕೆ ವಾರಕ್ಕೊಂದುಸಾರಿ ಅವರು ಕೊಡುಕೊಳ್ಳಬಾರದೆಂದು ಪ್ರಶ್ನೆ ಮಾಡಿದರು ಅದನ್ನೂ ಕೂಡ ನಾನು ಮುಂದೆ ಪರಿಶೀಲಿಸುತ್ತೇನೆ.

ಇನ್ನು ಮಾನ್ಯ ಶ್ರೀ ಬೈರೇಗೌಡರು ಮಾತನಾಡುತ್ತಾ ಕೆಲವು ವಿಚಾರಗಳಲ್ಲಿ ಸರ್ಕಾರದವರು ಅಲಸದಿಂದ್ದಾರೆಂದು ಹೇಳಿದರು. ನಿಜವಾಗಿ ಹೇಳುವುದಾದರೆ ಈ ಸರ್ಕಾರ ಇದುವರೆಗೂ ಏನೇನು ಗೇಣೀದಾರರ ಬಗ್ಗೆ ಆಗಾಗ್ಗೆ ತಿದ್ದುಪಡಿ ಕಾನೂನುಗಳನ್ನು ತಂದಿವೆಯೋ ಅವುಗಳ ಬಗ್ಗೆ ಸಾರ್ವಜನಿಕರ ಕಷ್ಟಗಳೇನೆಂಬುದನ್ನು ಚೆನ್ನಾಗಿ ತಿಳಿದುಕೊಂಡು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ಅದಕ್ಕಾಗಿ ಇಷ್ಟೊಂದು ಬೇಗ ರಿಫ್ಲೆಕ್ಟಡ್ ಆ್ಯಕ್ಷನ್ ಮಾಡುತ್ತಿದ್ದೇವೆಯೆ ಹೊರತು ಅಲಸ್ಯದಿಂದೇನೂ ಅಲ್ಲ. ಉದಾಹರಣೆಯಾಗಿ ಹೇಳುವುದಾದರೆ ನಾವು ಏನೊಂದು ಆರ್ಡಿನೆನ್ಸ್ ತಂದಿದ್ದೇವೂ ಅದರ ಬಗ್ಗೆ ಸದಸ್ಯರೆಲ್ಲರೂ ಕೆಲವಾರು ಬದಲಾವಣೆಗಳು ಆಗುವುದು ಅಗತ್ಯವೆಂದು ಸಲಹೆಗಳನ್ನು ನಮ್ಮ ಮುಂದಿಟ್ಟರು. ಅದಕ್ಕೂ ಕೂಡ ಈಗಾಗಲೇ ಸಾಧ್ಯವಾದಂಥ ತಿದ್ದುಪಡಿಗಳನ್ನು ತಂದಿದ್ದೇವೆ. ಇನ್ನು ಇದಕಿಂತಲೂ ಬೇಗ ಇನ್ನಾರು ಇಂತಹ ತಿದ್ದುಪಡಿಗಳನ್ನು ತರುತಾರೋ ಗೊತ್ತಿಲ್ಲ, ನನಗಂತೂ ಆಶ್ಚರ್ಯವಾಗಿದೆ.

ಇನ್ನು ಮಾನ್ಯ ಸದಸ್ಯರಾದ ಶ್ರೀ ಸಯನಕ್ ಅವರು ಕೆಲವು ವಿಚಾರಗಳನ್ನು ಹೇಳಿದರು. ನಾನು ಹೇಳುವುದಿಷ್ಟೇ Mr. Savanak's apprehension was powers will be misused. I would have understood if he had said power has been misused. Still he has got only apprehension. He does not say that the power has been misused. If it comes to our notice that the power has been misused, definitely we would not hesitate for a single moment to take action. There is no doubt about it. ಏಕೆಂದರೆ ಟ್ರಿಬ್ಯೂನಲ್ ಕೆಲಸ ಶುರುಮಾಡಿ ಬಹಳ ದಿವಸಗಳು ಆಯಿತು. ನನಗೆ ತಿಳಿದಹಾಗೆ ಅಂತಹ ಅಧಿಕಾರ ದುರುಪಯೋಗವೇನೂ ಇದರಲ್ಲಿ ನಡೆದಿಲ್ಲ. ಆದರೆ ಮಾನ್ಯ ಸದಸ್ಯರ ಅಪ್ರಹೆನ್‌ಷನ್ ಮೇಲೆ ನಾನೇನು ಮಾಡಬೇಕೋ ನನಗೆ ಗೊತ್ತಿಲ್ಲ. ಅವರು ಆ ರೀತಿಯಾಗಿ ಇಲ್ಲಿ ಹೇಳಿದರೂ ಅಂತಹ ಸ್ಪೆಸಿಫಿಕ್ ಇನ್‌ಸ್ಟೆನ್ಸಸ್ ಏನಾದರೂ ಅವರಲ್ಲಿದ್ದ ಪಕ್ಷದಲ್ಲಿ ಅವನ್ನು ನನ್ನ ಗಮನಕ್ಕೆ ನಿಜವಾಗಿಯೂ ತರುತ್ತಾರೆಂದು ನಾನು ಭಾವಿಸಿಕೊಂಡಿದ್ದೇನೆ

ಇನೊಂದು ವಿಚಾರ ಇಂಜಂಕ್ಷನ್ ಆರ್ಡರ್‌ನ್ನು ರೆವಿನ್ಯೂ ಮಿನಿಸ್ಟರ್ ಇಷ್ಯೂ ಮಾಡಿದರೆಂದು ಹೇಳಿದರು. ಈ ಅಧಿಕಾರ ಟ್ರಿಬ್ಯೂನಲ್‌ಗೆ ಹೊರತು ಬೇರೆ ಯಾರಿಗೂ ಇಲ್ಲ. ಈ ಒಂದು ಸಂದರ್ಭ ಏನು ಹೇಳಿದರೋ ಅದನ್ನು ನಾನು ತಿಳಿದ ಪ್ರಕಾರ ಕೇಳಿ ತಿಳಿದು ಕೊಂಡಿದ್ದೇನೆ.

ನನಗೆ ತಿಳಿದ ಮಟ್ಟಿಗೆ ಹೇಳುವುದಾದರೆ, ಆ ರೀತಿಯಾಗಿ ರೆವಿನ್ಯೂ ಮಿನಿಸ್ಟರ್ ಅವರು ವರ್ತನೆ ಮಾಡಿಲ್ಲವೆಂದು ನಾನು ತಿಳಿಯಬಯಸುತ್ತೇನೆ.

ಇನ್ನು ಮುಜರಾಯಿ ಭೂಮಿಯ ಬಗ್ಗೆ ಕೆಲವು ವಿಚಾರಗಳನ್ನು ಹೇಳಬೇಕಾಗಿದೆ ಮಾನ್ಯ ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್ ಅವರು, ಮಾನ್ಯ ಶ್ರೀ ಕೋಣಂದೂರು ಲಿಂಗಪ್ಪನವರು ಮತ್ತೆ ಕೆಲವು ಸದಸ್ಯರು ತಂತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ ನಿಜವಾಗಿಯೂ ಅವೆಲ್ಲವೂ ಒಳ್ಳೆಯ ಸಲಹೆಗಳು. ಅವನ್ನೆಲ್ಲಾ ಸರ್ಕಾರ ಪರಿಶೀಲಿಸುತ್ತದೆ ಎಂಬುದಾಗಿ ಹೇಳುತ್ತೇನೆ.

ಇನ್ನು ಟ್ರಿಬ್ಯೂನಲ್ ಬಗ್ಗೆ ಪೋಲೀಸಿನವರಿಗೆ ಅವು ಹೇಗೆ ನಡೆಯುತ್ತಿವೆ ಎಂಬುದನ್ನು ತಿಳಿಸಬೇಕೆಂದು ಕೆಲವರು ಹೇಳಿದರು. ಈ ವಿಚಾರ ಅವರಿಗೆ ತಿಳಿದಿಲ್ಲವೆಂದೇನೂ ಅಲ್ಲ. ಅವರು ಆ ವಿಚಾರಗಳು ತಿಳಿದಿಲ್ಲವೆಂದು ಹೇಳಿದರೆ ನಾನು ನಂಬುವುದಿಲ್ಲ. ಅವರಿಗೆ ಅವೆಲ್ಲವೂ ತಿಳಿಯಲೇ ಬೇಕು. ನಮ್ಮ ಟ್ರಿಬ್ಯೂನಲ್‌ಗಳು ಯಾವ ಕೋರ್ಟಿಗಿಂತಲೂ ಕಡಿಮೆ ಇಲ್ಲ ಇದನ್ನು ಜನತಾ ಕೋರ್ಟ್ ಎಂದು ಹೇಳುತ್ತಾರೆ. ಈ ಕೋರ್ಟಿಗೆ ಇರುವ ಅಧಿಕಾರ ಬೇರೆ ಯಾವ ಕೋರ್ಟಿಗೂ ಇಲ್ಲ ಟ್ರಿಬ್ಯೂನಲ್ ಮಾಡಿದ ನಿರ್ಧಾರಕ್ಕೆ ಯಾವ ಒಂದು ಅಪೀಲು ಸಹ ಇಲ್ಲ. ಆರ್ಟಿಕಲ್ ೨೨೬ರ ಪ್ರಕಾರ ಹೈಕೋರ್ಟಿನಲ್ಲಿ ಒಂದು ರಿಟ್ಟನ್ನು ಎಂಟರ್‌ಟೇನ್ ಮಾಡಿದರೆ, ಟ್ರಿಬ್ಯೂನಲ್ ಸರಿಯಾದ ಪ್ರೊಸೀಜರ್ ಮಾಡಲಿಲ್ಲವೆಂದು ಅವರ ಗಮನಕ್ಕೆ ಬಂದರೆ ಅವರೂ ಸಹ they connot sit as an appellate court

but they have to sent it back to the Tribunal and nothing more then that ಆದ್ದರಿಂದ ಇದು ಒಂದು ಬಹಳ ಮುಖ್ಯವಾದಂತ ಕೋರ್ಟ್. ಇದಕ್ಕೆ ಎಲ್ಲರೂ ಕೂಡ ಹೆಚ್ಚಿನ ಮರ್ಯಾದೆ ಕೊಡುವುದು ಅಗತ್ಯವೆಂದು ನಾನು ಭಾವಿಸುತ್ತೇನೆ. ನಮ್ಮ ಟ್ರಿಬ್ಯೂನಲ್‌ಗಳನ್ನು ರಚನೆ ಮಾಡುವಾಗ ಕೆಲವರ ಮನಸ್ಸಿನಲ್ಲಿ ಕೆಲವು ಅಪ್ರೆಹೆನ್‌ಷನ್‌ಗಳು ಇದ್ದುವು. The quality of work of the tribunal is excellent. That is what we have seen. ನಾವು ಪ್ರತಿತಿಂಗಳೂ ಕೂಡ ಎಲ್ಲಾ ಟ್ರಿಬ್ಯೂನಲ್‌ಗಳ ಕೆಲಸದ ವಿವರಣೆಗಳನ್ನು ತರಿಸುತ್ತಿದ್ದೇವೆ. ಅದರಲ್ಲಿ ಟೆನೆಂಟ್ಸ್ ಬಗ್ಗೆ ಹಾಗೂ ದಣಿಗಳ ಪರವಾಗಿ ಎಷ್ಟೋ ಕೇಸುಗಳನ್ನು ಮಾಡಿದ್ದಾರೆ. ಅವುಗಳಲ್ಲಿ ಕೂಡ ಶೇಕಡ ೯೦ರಷ್ಟು ಟೆನೆಂಟ್ಸ್ ಪರವಾಗಿ ಇತ್ಯರ್ಥ ಮಾಡಿದ್ದಾರೆ. ಕೆಲವು ಮಾತ್ರ ರಿಜೆಕ್ಟ್ ಆಗಿರುವುದೂ ಕೂಡ ಇವೆ. ಅವು ಹೆಚ್ಚಿಗೆ ಮುಂಜರಾಯಿ ಭೂಮಿ ಅಥವಾ ಬೇರೆ ಭೂಮಿಗೆ ಸಂಬಂಧಪಟ್ಟವು ಆಗಿವೆ. ಆದರೆ ಈಗ ಟ್ರಿಬ್ಯೂನಲ್‌ಗಳು ಮಾಡಿರುವ ಕೆಲಸ ನೋಡಿದರೆ ಬಹಳ ಸಮರ್ಪಕವಾಗಿದೆ. ಯಾವಾಗ ಯಾವುದಾದರೂ ಸಂದರ್ಭದಲ್ಲಿ ಟ್ರಿಬ್ಯೂನಲ್ ಮೆಂಬರ್ ಯಾರಾದರೂ ನ್ಯಾಯಬದ್ಧವಾಗಿ ನಡೆಯುತ್ತಿಲ್ಲವೆಂಬ ವಿಚಾರವೇನಾದರೂ ನಮ್ಮ ಗಮನಕ್ಕೆ ಬಂದರೆ ಅಂತಹವರನ್ನು ಟ್ರಿಬ್ಯೂನಲ್‌ನಿಂದ ವಜಾಮಾಡುವುದಕ್ಕೂ ಸಹ ನಾವು ಹಿಂಜರಿಯುವುದಿಲ್ಲ. ಅದಕ್ಕೆ ನಾವು ಯಾವಾಗಲೂ ಸಿದ್ಧವೆಂದು ಒಂದು ಭರವಸೆಯನ್ನು ಈ ಸಭೆಗೆ ಕೊಡಬಯಸುತ್ತೇನೆ. ಆದ್ದರಿಂದ ಈ ತಿದ್ದುಪಡಿ ಮಸೂದೆಗೆ ತಾವೆಲ್ಲರೂ ಮಂಜೂರಾತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

MR. DEPUTY SPEAKER.—The question is :

"That the Karanataka Land Reforms (Secend Amendment) Bill, 1976, be taken into consideration."

The Motion was adopted

CLAUSE 2

MR. DEPUTY SPEAKER.—The question is :

"That Clause 2 do stand part of the Bill."

The Motion was adopted

Claus 2 was added to the Bill.

CLAUSE 3

MR. DEPUTY SPEAKER.—There is a notice of an amendment. The Hon'ble Minister of State for Land Reforms may please move.

SRI B. SUBBAIAH SHETTY:—Sir, I beg to move :

'That for sub-clause (bb), the following sub—clauses shall be substituted, namely:—

"(bb) to decide whether the land in respect of which an application under Section 48 A is made or in respect of which question of tenancy is raised or involved, is or not agricultural land.

"(bb-1) to decide questions referred to it under Section 133."

MR. DEPUTY SPEAKER.—Amendment moved. I put it to vote the question is :

'That for sub-clause (bb), the following sub-clauses shall be substituted, namely:—

"(bb) to decide whether the land in respect of which an application under Section 48A is made or in respect of which any question of tenancy is raised or involved, is or is not agricultural land.

"(bb-1) to decide questions referred to it under Section 133."

The Amendment was adopted

MR. DEPUTY SPEAKER:—The question is :

"That Claus 3 as amended, do stand part of the Bill."

The Motion was adopted

Clause 3, as amended, was added to the Bill.

CLAUSE 4

MR. DEPUTY SPEAKER.—There is a notice of an amendment. The Hon'ble Ministar of State for Land Reforms may please move it.

SRI B. SUBBAIAH SHETTY (Minister of State for Land Reforms) — Sir, I beg to move :

"That for the proposed Section 133, the following Section shall be substituted, namely:—

"133. Suits, proceedings, etc., involving questions requiredto be decided by the Tribunal — Not with standing anything in any law for the time being in force—

(1) no Civil or Criminal Court or Offceir of Authority shall, in any suit, case or proceedings concerning a land, other than proceedings under Chapter IV of this Act, decide the question whether such land is or is not agricultural land and whether the person claiming to be in possession is or is not a tenant of the said land from prior to 1st March 1974 ;

(2) Such Court or Officer or Authority shall stay such suit or proceeding in so far as such question is concerned and refer the same to the Tribunal for decision;

(3) all interim orders issued or made by such Court, Officer or Authority, whether in the nature of temporary injunction or appointment of a Receiver or otherwise, concerning the land shall stand dissolved or vacated, as the case may be ;

(4) The Tribunal shall decide the question referred to it under Clause (1) and communicate its decision to such Court, Officer or Authrity. The decision of the Tribunal shall be final ;

(5) nothing in Clause (1) shall preclude the Civil or Criminal Court or the Officer or Authority from proceeding with the suit, case or proceedings in respect of any matter other than that referred to in the said clause."

MR. DEPUTY SPEAKER.—Amendment moved. I put it to vote ; The question is :

"That for the proposed section 133, the following section shall be substituted, namely:—

"133. **Suit, proceedings, etc, involving questions required to be decided bythe Tribunal.**—Not with standing anything in any law for the time being in force—

(1) no Civil or Criminal Court or Officer or Authority shall in any suit, case or proceedings concerning a land, other than, proceedings under Chapter IV of this Act, decide the question whether such land is or is not agricultural land and whether the person claiming to be in possession is or is not a tenant of the said land from prior 1st March 1974 ;

(2) Such Court or Officer or Authority shall stay such suit or proceedings is so far as such question is concerned and refer the same to the Tribunal for decision ;

(3) all interim orders issued or made by such Court, Officer or Authority, whether in the nature of temporary injunction or appointment of a Receiver or otherwise, concerning the land shal stand dissvoled or vacated. as the case may be;

(4) the Tribunal shall decide the question refered to it under clause (1) and communicate its decision to such Court, Officer or Authority. The decision of the Tribunal shall be final ;

(5) nothing in Clause (1) shall preclude the Civil or Criminal Court or the Officer or Authority from proceeding with the suit, case or proceedings in respect of any matter other that referred to in the said clause."

The Amendment was adopted

MR. DEPUTY SPEAKER.—The question is :

"That Clause 4, as amended, do stand part of the Bill."

The motion was adopted

Clause 4, as amended, was added to the Bill,

CLAUSE 5 TO 7

MR. DEPUTY SPEAKER.—The question is :

"That Clauses 5, to 7, both inclusive, do stand part of the Bill.

The motion was adopted

Clauses 5, to 7, both inclusive, were added to the Bill.

CLAUSE 1 ETC.

MR. DEPUTY SPEAKER.—The question is :

"That Clause 1, the Long Title, the preamble and the Enacting Formula do stand part of the Bill."

The Motion was adopted

Clause 1, the Long Title, the Preamble and the Enacting Formual were added to the Bill.

Motion to pass

SRI B. SUBBAIAH SHETTY:—Sir, I beg to move :

"That the Karnataka Land Reforms (Second Amendment) Bill, 1976, as amended, be passed."

MR. DEPUTY SPEAKER.—The question is :

"that the Karnataka Land Reforms (Second Amendment) 1976, as amended, be passed."

The Motion was adopted and the Bill as amended was passed.

MR DEPUTY SPEAKER.—Now the House stands adjourned to meet again tomorrow at nine of the Clock.

The House adjourned at Five Minutes past Six of the Clock to meet again at Nine of the Clock on Saturday, the 21st February, 1976.